


# ಮೈಸೂರು ಮಿತ್ರ


ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಡಿಸೆಂಬರ್ 28 ಗುರುವಾರ 2023

ಸಂಪುಟ: 44 | ಸಂಚಿಕೆ: 251 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com


## ಮತ್ತೊಂದು ಐಐಟಿ ಸ್ಥಾಪನೆಗೆ ಪ್ರಧಾನಿ ನರೇಂದ್ರ ಮೋದಿಗೆ ಸಿಎಂ ಸಿದ್ದರಾಮಯ್ಯ ಪ್ರಸ್ತಾಪ; ಮೈಸೂರಿಗೆ ಮೊದಲ ಆದ್ಯತೆ

● ಮೈಸೂರಿಗರ ಬಹುಳ ಕಾಲದ ಆಸೆ ಈಡೇರುವುದೇ? ● ಹೆಚ್.ಡಿ.ರೇವಣ್ಣನವರ ಬೇಡಿಕೆ; ಹಾಸನಕ್ಕೆ ಎರಡನೇ ಆದ್ಯತೆ ● ಮೋದಿಯಿಂದ ಸಕರಾತ್ಮಕ ಸ್ಪಂದನೆ: ಭಾರತದಲ್ಲಿವೆ ಒಟ್ಟು 23 ಐಐಟಿ





(ಸಂಗ್ರಹ ಚಿತ್ರ)


● ಬಾಪುಲಿಂಗರಾಜ್ ಅರಸ್

ಮೈಸೂರು, ಡಿ.27– ರಾಜ್ಯದಲ್ಲಿ ಮತ್ತೊಂದು ಐಐಟಿ (ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ) ಸ್ಥಾಪನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ಪ್ರಸ್ತಾವನೆ ಸಲ್ಲಿಸಿದ್ದು, ಅದರಲ್ಲಿ ಮೈಸೂರಿಗೆ ಮೊದಲ ಆದ್ಯತೆ, ನಂತರ ಹಾಸನವನ್ನೂ ಹೆಸರಿಸಿದ್ದಾರೆ. ಇದಕ್ಕೆ ನರೇಂದ್ರ ಮೋದಿ ಅವರೂ ಸಕರಾತ್ಮಕವಾಗಿ ಸ್ಪಂದಿಸಿದ್ದಾರೆ. ಹಾಗಾಗಿ ಮೈಸೂರು ಜನರ ಬಹಳ ಕಾಲದ ಕನಸು ನನಸಾಗುವುದೇ ಕಾದು ನೋಡಬೇಕಿದೆ. ಮೈಸೂರಿ ನಲ್ಲಿ 2016ರಲ್ಲೇ ಐಐಟಿ ಸ್ಥಾಪನೆ ಆಗಬೇಕಿತ್ತು. ಆದರೆ ಸ್ವಲ್ಪದರಲ್ಲಿ ಕೈತಪ್ಪಿತ್ತು.

ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ (ಐಐಎಸ್ಸಿ) ಇದೆ. ಸ್ಥಳೀಯ ವಿದ್ಯಾರ್ಥಿಗಳ ಬೇಡಿಕೆ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಐಐಟಿ ಸ್ಥಾಪನೆ ಮಾಡಬೇಕೆಂಬ ಒತ್ತಾಯವಿತ್ತು. ಅದರಲ್ಲೂ ಮೈಸೂರಿನಲ್ಲಿ ಐಐಟಿ ಸ್ಥಾಪನೆ ಮಾಡಬೇಕೆಂಬ ಯೋಜನೆಯೂ ಇತ್ತು. ಐಐಟಿ ಸ್ಥಾಪನೆಗೆ ಅವಶ್ಯವಿರುವ ಸಾವಿರಾರು ಎಕರೆ ಭೂಮಿ, ಏರ್‌ಪೋರ್ಟ್, ಸಮರ್ಪಕ ಕುಡಿಯುವ ನೀರಿನ ಸೌಲಭ್ಯ ಸೇರಿದಂತೆ ಉತ್ತಮ ಶೈಕ್ಷಣಿಕ ವಾತಾವರಣ ಇರುವ ಕಾರಣ ಮೈಸೂರಿನಲ್ಲಿ ಐಐಟಿ ಸ್ಥಾಪನೆ ಆಗಬೇಕೆಂಬ ಆಗ್ರಹವಿತ್ತು.

● 10ನೇ ಪುಟಕ್ಕೆ

### ಹಾಸನವೇ ಆಗಬೇಕೆಂದಿಲ್ಲ; ಹಳೆ ಮೈಸೂರು ಭಾಗದಲ್ಲಿ ಐಐಟಿ ಸ್ಥಾಪನೆ ಆಗಬೇಕು ಅಷ್ಟೆ!



ಕರ್ನಾಟಕದಲ್ಲಿ ಮತ್ತೊಂದು ಐಐಟಿ ಸ್ಥಾಪನೆ ಮಾಡಬೇಕೆಂಬ ನಮ್ಮ ಬೇಡಿಕೆಗೆ ನರೇಂದ್ರ ಮೋದಿ ಸಕರಾತ್ಮಕವಾಗಿ ಸ್ಪಂದಿಸಿದ್ದಾರೆ. ಇದಕ್ಕೆ ರಾಜ್ಯ ಸರ್ಕಾರದಿಂದ ಅಗತ್ಯ ಮೂಲ ಸೌಕರ್ಯ ಕಲ್ಪಿಸುವುದಾಗಿ ಸಿದ್ದರಾಮಯ್ಯ ಕೂಡ ಪತ್ರ ನೀಡಿದ್ದಾರೆ.

ಹಾಸನದಲ್ಲಿ ಐಐಟಿ ಸ್ಥಾಪನೆ ಮಾಡಬೇಕೆಂದು 2016ರಿಂದ ಬೇಡಿಕೆ ಇದೆ. ಆದರೆ ಮೈಸೂರಿನಲ್ಲಿ ಐಐಟಿ ಸ್ಥಾಪನೆ ಮಾಡುವ ಬಗ್ಗೆ ಸಿದ್ದರಾಮಯ್ಯ ಮೊದಲ ಆದ್ಯತೆ ನೀಡಿದ್ದಾರೆ. ಹಾಸನದಲ್ಲೇ ಐಐಟಿ ಸ್ಥಾಪನೆ ಮಾಡಬೇಕೆಂಬ ಹಠ ನಮಗಿಲ್ಲ. ಹಳೆ ಮೈಸೂರು ಭಾಗದಲ್ಲಿ ಐಐಟಿ ಸ್ಥಾಪನೆ ಆಗಬೇಕೆಂಬುದು ನಮ್ಮ ಒತ್ತಾಯ. ಮೈಸೂರಿನಲ್ಲಾದರೇನು, ಹಾಸನದಲ್ಲಿ ಆದರೇನು. ಒಟ್ಟಿನಲ್ಲಿ ಈ ಭಾಗದಲ್ಲಿ ಐಐಟಿ ಸ್ಥಾಪನೆ ಆಗಬೇಕು. ಒಂದು ವೇಳೆ ನಮ್ಮ ಬೇಡಿಕೆಯಂತೆ ಹಾಸನಕ್ಕೆ ಐಐಟಿ ಸ್ಥಾಪನೆಗೆ ಅವಕಾಶ ನೀಡಿದರೆ ಅಗತ್ಯವಿರುವ 1,100 ಎಕರೆ ಭೂಮಿ ಮೀಸಲಿಟ್ಟಿದ್ದೇವೆ. ಇದರಿಂದ ಭೂಮಿಗಾಗಿ ಹುಡುಕಾಡುವ ಅವಶ್ಯವಿಲ್ಲ.

–ಹೆಚ್.ಡಿ.ರೇವಣ್ಣ, ಶಾಸಕ, ಹೊಳೆನರಸೀಪುರ ವಿಧಾನಸಭಾ ಕ್ಷೇತ್ರ

## ಮೈಸೂರಲ್ಲಿ ಕೊರೊನಾದಿಂದ ಒಬ್ಬರು ಸಾವು

ರಾಜ್ಯದಲ್ಲಿ 103 ಮಂದಿಗೆ ಪಾಸಿಟಿವ್

ಬೆಂಗಳೂರು, ಡಿ.27–ಮೈಸೂರಿನಲ್ಲಿ ಬುಧವಾರ ಕೊರೊನಾದಿಂದ ಒಬ್ಬರು ಮೃತಪಟ್ಟಿದ್ದು, ರಾಜ್ಯದಲ್ಲಿ 103 ಮಂದಿಗೆ ಪಾಸಿಟಿವ್ ದೃಢಪಟ್ಟಿದೆ. ಇದರೊಂದಿಗೆ ರಾಜ್ಯದಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 479ಕ್ಕೆ ಏರಿಕೆಯಾಗಿದೆ. ಕಳೆದ 24 ಗಂಟೆಗಳಲ್ಲಿ 103 ಹೊಸ ಕೋವಿಡ್ ಪಾಸಿಟಿವ್ ಪ್ರಕರಣಗಳು ● 10ನೇ ಪುಟಕ್ಕೆ



## ಲೋಕಸಭೆ ಚುನಾವಣೆಯಲ್ಲಿ ಎಲ್ಲಾ 28 ಸ್ಥಾನ ಗೆಲ್ಲಲು ಪಣ

● ಬಿಜೆಪಿ ರಾಜ್ಯ ಪದಾಧಿಕಾರಿಗಳ ಸಭೆಯಲ್ಲಿ ರಣತಂತ್ರ ● ಸಿದ್ದರಾಮಯ್ಯ ಸರ್ಕಾರದ ವಿರುದ್ಧ ರಾಜ್ಯ ಬಿಜೆಪಿ ಹೋರಾಟಕ್ಕೆ ನಿರ್ಧಾರ ● ಸರ್ಕಾರದ ದುರಾಡಳಿತ, ಭ್ರಷ್ಟಾಚಾರ, ತುಷ್ಟೀಕರಣ ವಿರುದ್ಧ ಹೋರಾಟದ ಜೊತೆಗೆ ಪಕ್ಷ ಸಂಘಟನೆ ಉದ್ದೇಶ



**ಬೆಂಗಳೂರು, ಡಿ.27(ಕೆಎಂಶಿ)– ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ದುರಾಡಳಿತ, ಭ್ರಷ್ಟಾಚಾರ, ತುಷ್ಟೀಕರಣದ ವಿರುದ್ಧ ಹೋರಾಟ ನಡೆಸಲು ರಾಜ್ಯ ಬಿಜೆಪಿ ಇಂದಿಲ್ಲಿ ನಿರ್ಧರಿಸಿದೆ.**

ಸರ್ಕಾರದ ವಿರುದ್ಧದ ಹೋರಾಟ ಒಂದೆಡೆಯಾದರೆ, ಮತ್ತೊಂದೆಡೆ ಪಕ್ಷ ಸಂಘಟನೆಯನ್ನು ಗಟ್ಟಿ ಮಾಡಿ, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್ ಜೊತೆಗೂಡಿ ಎಲ್ಲಾ ಸ್ಥಾನಗಳನ್ನು ಗೆಲ್ಲಲು ಪಣತೊಟ್ಟಿದೆ. ಬಿಜೆಪಿ ರಾಜ್ಯ ಪದಾಧಿಕಾರಿಗಳ ಸಭೆಯಲ್ಲಿ ಸರ್ಕಾರದ ವಿರುದ್ಧ ಸಂಘರ್ಷ, ಪಕ್ಷ ಬಲಿಷ್ಠಗೊಳಿಸಲು ಸಂಘಟನೆ ಮಾಡುವ ತೀರ್ಮಾನದ ಜೊತೆಗೆ ಮುಂಬರುವ ಲೋಕಸಭಾ ಚುನಾವಣೆವರೆಗೂ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ವಿಶ್ರಮಿಸದೆ ಕೆಲಸ ಮಾಡಲು ತೀರ್ಮಾನ ಕೈಗೊಳ್ಳಲಾಗಿದೆ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಗ್ಯಾರಂಟಿ ಯೋಜನೆಗಳ ಜಪ ಮಾಡಿಕೊಂಡು ಕಾಲ ಕಳೆಯುತ್ತಿದೆ, ಯೋಜನೆಗಳು ಫಲಾನುಭವಿಗಳನ್ನು ಮುಟ್ಟಿಲ್ಲ, ಇದರ ನೆಪದಲ್ಲಿ ಅಭಿವೃದ್ಧಿ ಕಾರ್ಯಗಳೂ ನಡೆಯುತ್ತಿಲ್ಲ. ಎಲ್ಲ ಹಂತದಲ್ಲೂ ಕಮಿಷನ್ ನಿಗದಿಯಾಗಿ ಭ್ರಷ್ಟಾಚಾರ ತಾಂಡವವಾಡುತ್ತಿದೆ, ನಮ್ಮ ವಿರುದ್ಧ ಇದೇ ಆರೋಪ ಮಾಡಿಕೊಂಡು ● 10ನೇ ಪುಟಕ್ಕೆ

### ಯತ್ನಾಳ್ ವಿರುದ್ಧ ಶಿಸ್ತು ಕ್ರಮಕ್ಕೆ ಬಿಜೆಪಿ ಪದಾಧಿಕಾರಿಗಳ ಆಗ್ರಹ

ಬೆಂಗಳೂರು, ಡಿ.27(ಕೆಎಂಶಿ)–ಬಸನಗೌಡ ಪಾಟೀಲ್ ಯತ್ನಾಳ್ ಹೇಳಿಕೆಗಳ ಬಗ್ಗೆ ಬಿಜೆಪಿ ಪದಾಧಿಕಾರಿಗಳು ಕಿಡಿಕಾರಿ, ಅವರ ವಿರುದ್ಧ ಶಿಸ್ತು ಕ್ರಮಕ್ಕೆ ಒತ್ತಾಯಿಸಿದ್ದಾರೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಅಧ್ಯಕ್ಷತೆಯಲ್ಲಿ ನಡೆದ ನೂತನ ಪದಾಧಿಕಾರಿಗಳ ಸಭೆಯಲ್ಲಿ, ಪಕ್ಷ ವಿರೋಧಿ ಚಟುವಟಿಕೆಯಲ್ಲಿ ನಿರತರಾಗಿರುವವರ ವಿರುದ್ಧ ಕಠಿಣ ಕ್ರಮಕೈಗೊಳ್ಳುವಂತೆ ಕೇಂದ್ರ ನಾಯಕರನ್ನು ಆಗ್ರಹಿಸಿದ್ದಾರೆ. ಇಂತಹವರು ವಿರೋಧ ಪಕ್ಷಗಳಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಹಾದಿ–ಬೀದಿಯಲ್ಲಿ ಸುಳ್ಳು ಆರೋಪ ಮಾಡಿ ಬಾಯಿ ಚಪಲ ತೀರಿಸಿಕೊಳ್ಳುತ್ತಿದ್ದಾರೆ. ಕಳೆದ ವಿಧಾನಸಭಾ ಚುನಾವಣೆ ಸಂದರ್ಭದಲ್ಲೂ ಕೆಲವರು ಪಕ್ಷದಲ್ಲಿದ್ದುಕೊಂಡೇ ನಡೆಸಿದ ಅಪಪ್ರಚಾರಗಳಿಂದ ಪಕ್ಷಕ್ಕೆ ಸೋಲುಂಟಾಯಿತು. ಇದೀಗ ಲೋಕಸಭಾ ಚುನಾವಣೆ ಹೊಸ್ತಿಲಲ್ಲಿ ಮತ್ತೆ ಇಂತಹದ್ದೇ ● 10ನೇ ಪುಟಕ್ಕೆ

## ಮರಕ್ಕೆ ಕಾರು ಡಿಕ್ಕಿ: ಶಬರಿಮಲೆಗೆ ತೆರಳಿದ್ದ ಕುಶಾಲನಗರದ ಮಾಲಾಧಾರಿ ಸಾವು

**ಮೂವರಿಗೆ ಗಂಭೀರ ಗಾಯ**





ಕೆ.ಕೆ.ಚಂದ್ರ

ಕುಶಾಲನಗರ, ಡಿ.27–ಶಬರಿಮಲೆ ಯಾತ್ರೆ ಮುಗಿಸಿ ಹಿಂತಿರುಗುತ್ತಿದ್ದ ವೇಳೆ ಮರಕ್ಕೆ ಕಾರು ಡಿಕ್ಕಿ ಹೊಡೆದ ಪರಿಣಾಮ ಕುಶಾಲನಗರ ತಾಲೂಕಿನ ಓರ್ವ ಮಾಲಾಧಾರಿ ಮೃತಪಟ್ಟು, ಮೂವರು ಗಂಭೀರವಾಗಿ ಗಾಯಗೊಂಡಿರುವ ಘಟನೆ ಕೇರಳದಲ್ಲಿ ಬುಧವಾರ ಮುಂಜಾನೆ ಸಂಭವಿಸಿದೆ.

ಹಾರಂಗಿ ಸಮೀಪದ ಚಿಕ್ಕತ್ತೂರು ಗ್ರಾಮದ ಕೆ.ಕೆ.ಚಂದ್ರ(50) ಅಪಘಾತದಲ್ಲಿ ಮೃತಪಟ್ಟವರಾಗಿದ್ದು, ಗಂಭೀರವಾಗಿ ಗಾಯಗೊಂಡಿರುವ ಕುಶಾಲನಗರದ ಸಿದ್ದಯ್ಯನ ಬಡಾವಣೆ ನಿವಾಸಿಗಳಾದ ಲಿಂಗಂ, ಅವರ ಪುತ್ರ ಸಂತೋಷ್ ಮತ್ತು ಹರೀಶ್ ಅವರು ಗಳು ಕೇರಳದ ಖಾಸಗಿ ಆಸ್ಪತ್ರೆಯೊಂದರ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

**ವಿವರ:** ಈ ನಾಲ್ವರೂ ಮಾಲಾಧಾರಿಗಳು ಡಿ.25ರಂದು ಚಂದ್ರ ಅವರಿಗೆ ಸೇರಿದ ಸ್ವಿಫ್ಟ್ ಡಿಸೈರ್ ಕಾರಿನಲ್ಲಿ (ಕೆಎ 42ಎಂ 2157) ಕುಶಾಲನಗರದಿಂದ ಶಬರಿಮಲೈಗೆ ಯಾತ್ರೆ ಹೊರಟಿದ್ದರು. ಇಂದು (ಬುಧವಾರ) ಬೆಳಗಿನ ಜಾವ 2 ಗಂಟೆ ಸುಮಾರಿನಲ್ಲಿ ಸ್ವಾಮಿ ಅಯ್ಯಪ್ಪನ ದರ್ಶನ ಪಡೆದ ನಂತರ ಸ್ವಗ್ರಾಮದತ್ತ ಪ್ರಯಾಣ ಬೆಳೆಸಿದ್ದರು. ಶಬರಿ ಮಲೈಯಿಂದ ಸುಮಾರು 60 ಕಿ.ಮೀ. ಅಂತರದಲ್ಲಿ ಪೆರಂಬೂರು ರಸ್ತೆಯಲ್ಲಿ ಚಾಲಕ ಚಂದ್ರುವಿನ ನಿಯಂತ್ರಣ ತಪ್ಪಿದ ಕಾರು ● 6ನೇ ಪುಟಕ್ಕೆ

> “ನಮ್ಮ ತಂದೆ ಇಂದು ಮುಂಜಾನೆ 2 ಗಂಟೆ ವೇಳೆಯಲ್ಲಿ ಕರೆ ಮಾಡಿ, ಸ್ವಾಮಿ ದರ್ಶನ ಚೆನ್ನಾಗಿ ಆಯಿತು. ಈಗ ಊರಿಗೆ ಹೊರಟಿದ್ದೇವೆ ಎಂದು ಹೇಳಿದ್ದರು. ಆಗ ನಾನು ಈ ವೇಳೆಯಲ್ಲಿ ಏಕೆ ಬರುತ್ತೀರಿ. ರೆಸ್ಟ್ ಮಾಡಿ ನಿಧಾನಕ್ಕೆ ಹೊರಟು ಬನ್ನಿ ಎಂದು ಹೇಳಿದ್ದೆ. ಆದರೆ, ವಿಧಿಯಾಟದಿಂದ ಅವರನ್ನು ಕಳೆದುಕೊಂಡಿದ್ದೇವೆ.
>
> –ಸ್ವಪ್ನ, ಮೃತ ಚಂದ್ರುವಿನ ಪುತ್ರಿ



## ಸಂಸತ್ ಭವನಕ್ಕೆ ನುಗ್ಗಿದ ಪ್ರಕರಣ: ಮೈಸೂರಲ್ಲಿ ದೆಹಲಿ ಪೊಲೀಸ್ ಅಧಿಕಾರಿಗಳ ತನಿಖೆ ಪೂರ್ಣ

**ದೆಹಲಿಗೆ ಮರಳಲು ಅಧಿಕಾರಿಗಳ ಸಿದ್ಧತೆ**



ಮೈಸೂರು, ಡಿ.27(ಬಿಎಲ್‌ಯು)– ಸಂಸತ್ ಭವನದಲ್ಲಿ ಲೋಕಸಭೆಯ ಕಲಾಪದ ವೇಳೆ ನುಗ್ಗಿ ಕಲರ್ ಸ್ಮೋಕ್ ಸ್ಫೋಟಿಸಿದ ಮನೋರಂಜನ್ ಬಗ್ಗೆ ಮೈಸೂರಿನಲ್ಲಿ ತನಿಖೆ ನಡೆಸುತ್ತಿರುವ ದೆಹಲಿ ಪೊಲೀಸ್ ಅಧಿಕಾರಿಗಳ ತಂಡ ತನಿಖೆ ಪೂರ್ಣಗೊಳಿಸಿ ಸದ್ಯವೇ ದೆಹಲಿಗೆ ವಾಪಸ್ಸಾಗಲಿದ್ದಾರೆ ಎಂದು ತಿಳಿದು ಬಂದಿದೆ.

ಒಂದು ಮೂಲದ ಪ್ರಕಾರ ಮೈಸೂರಿನಲ್ಲಿ ನಡೆಯುತ್ತಿರುವ ತನಿಖೆ ಇವತ್ತಿಗೆ ಪೂರ್ಣಗೊಂಡಿದ್ದು, ಇಂದು ರಾತ್ರಿ ಅಥವಾ ನಾಳೆ ಮುಂಜಾನೆ ಪೊಲೀಸ್ ಅಧಿಕಾರಿಗಳು ದೆಹಲಿಗೆ ಹೊರಡಲಿದ್ದಾರೆ. ಇದಕ್ಕಾಗಿ ಫ್ಲೈಟ್ ಟಿಕೆಟ್ ಕೂಡ ಬುಕ್ ಮಾಡಿದ್ದಾರೆ ಎನ್ನಲಾಗಿದೆ. ಮನೋ ರಂಜನ್ ಮನೆಗೆ ನಿನ್ನೆ ಭೇಟಿ ನೀಡಿದ್ದ ದೆಹಲಿ ಪೊಲೀಸ್ ಅಧಿಕಾರಿಗಳು ಬೆಳಿಗ್ಗೆ 9.15 ರಿಂದ ರಾತ್ರಿ 7 ಗಂಟೆ ತನಕ ಸುದೀರ್ಘ 10 ಗಂಟೆಗಳ ಕಾಲ ವಿಚಾರಣೆ ನಡೆಸಿ ಮನೋರಂಜನ್ ಜೊತೆ ಮತ್ಯಾರಾದರೂ ಭಾಗಿಯಾಗಿದ್ದಾರೆಯೇ ಎಂದು ಅವನ ತಂದೆ ದೇವರಾಜೇಗೌಡ ಹಾಗೂ ಶೈಲಜಾ ಅವರಿಂದ ಮಾಹಿತಿ ಕಲೆ ಹಾಕಿದ್ದರು. ನಿಮ್ಮ ಮನೆಯಲ್ಲಿ ನಮ್ಮ ತನಿಖೆ ಪೂರ್ಣಗೊಂಡಿದೆ. ಮತ್ತೆ ಬರುವುದಿಲ್ಲ ಎಂದು ಮನೋರಂಜನ್ ಕುಟುಂಬಸ್ಥರಿಗೆ ತಿಳಿಸಿ ಹೊರಟಿದ್ದಾರೆ. ವಿಚಾರಣೆ ಸಮಯದಲ್ಲಿ ಹಿಂದೆ ಕೂಡ ಇದೇ ರೀತಿ ಮತ್ತೆ ಬರುವುದಿಲ್ಲ ಎಂದು ಹೇಳಿದ್ದ ಅವರು ನಾಲ್ಕನೇ ಬಾರಿ ಬಂದಿದ್ದರು. ಈಗ ಮತ್ತೆ ಬರುವುದಿಲ್ಲ ಎಂಬ ದೆಹಲಿ ಪೊಲೀಸರ ಮಾತನ್ನು ಮನೋರಂಜನ್ ಕುಟುಂಬಸ್ಥರು ನಂಬಿ ನಿಟ್ಟುಸಿರು ಬಿಡುವಂತಿಲ್ಲ. ಈ ಕಾರಣದಿಂದ ದೆಹಲಿ ಪೊಲೀಸರು ಮತ್ತೆ ಯಾವಾಗ ಬರುತ್ತಾರೋ, ಇನ್ನೇನು ವಿಚಾರಣೆ ಮಾಡುತ್ತಾರೋ, ಮತ್ಯಾವ ಪ್ರಶ್ನೆಗಳನ್ನು ● 6ನೇ ಪುಟಕ್ಕೆ

## ಮೈಸೂರು ಪಾಲಿಕೆಯಿಂದ 850 ಮಹಿಳಾ ಪೌರ ಕಾರ್ಮಿಕರಿಗೆ ಪಿಂಕ್ ಇ–ಸ್ಕೂಟರ್ ಭಾಗ್ಯ

### ಚಾಲನಾ ತರಬೇತಿ ನೀಡಿ ಉತ್ತೇಜಿಸುವ ಕ್ರಿಯಾ ಯೋಜನೆಗೆ ಅನುಮೋದನೆ



■ ಎಸ್.ಟಿ.ರವಿಕುಮಾರ್

ಮೈಸೂರು, ಡಿ.27–ಕರ್ನಾಟಕ ಸರ್ಕಾರವು ಕೆಎಸ್‌ಆರ್‌ಟಿಸಿ ಸಾಮಾನ್ಯ ಬಸ್ಸುಗಳಲ್ಲಿ ಮಹಿಳೆಯರು ಉಚಿತವಾಗಿ ಪ್ರಯಾಣಿಸಲು ಶಕ್ತಿ ಯೋಜನೆ ಕಲ್ಪಿಸಿದೆ. ಜೊತೆಗೆ ಪ್ರತೀ ತಿಂಗಳೂ ಅವರ ಬ್ಯಾಂಕ್ ಖಾತೆಗೆ 2,000 ರೂ. ಹಣ ಜಮೆ ಮಾಡುವ ಗೃಹಲಕ್ಷ್ಮಿ ಯೋಜನೆಯನ್ನು ಜಾರಿಗೊಳಿಸಿದೆ.

ಇದೇ ನಿಟ್ಟಿನಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಮೈಸೂರು ಮಹಾ ನಗರ ಪಾಲಿಕೆಯಿಂದ ಮಹಿಳೆಯರಿಗಾಗಿ ಪ್ರತ್ಯೇಕ ಪಿಂಕ್ ಶೌಚಾಲಯಗಳನ್ನು ನಿರ್ಮಿಸಿದೆ. ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಜಿಲ್ಲಾಡಳಿತವು ಸಾರ್ವತ್ರಿಕ ಚುನಾವಣೆಗಳ ಸಂದರ್ಭ ಮಹಿಳಾ ಮತದಾರರ ಅನುಕೂಲಕ್ಕೆ ಪಿಂಕ್ ಸಖಿ ಮತದಾನ ಕೇಂದ್ರ ಸ್ಥಾಪಿಸುತ್ತಿರುವುದು ಮತ್ತೊಂದು ವಿಶೇಷ. ಅದರ ಜೊತೆಗೆ ಇದೀಗ ಸ್ವಚ್ಛತಾ ಕಾರ್ಯ ನಿರ್ವಹಿಸುತ್ತಿರುವ ಮೈಸೂರಿನ 850 ಮಹಿಳಾ ಪೌರ ಕಾರ್ಮಿಕರಿಗೆ ಪಿಂಕ್ ಎಲೆಕ್ಟ್ರಾನಿಕ್ ಸ್ಕೂಟರ್‌ಗಳನ್ನು ನೀಡಲು ಮೈಸೂರು ಮಹಾ ನಗರ ಪಾಲಿಕೆಯು ಮುಂದಾಗಿದೆ.



ಮೊದಲ ಹಂತದಲ್ಲಿ ಖಾಯಂ, ನೇರ ಪಾವತಿಯಡಿ ಕಾರ್ಯ ನಿರ್ವಹಿಸುತ್ತಿರುವ ಪಾಲಿಕೆಯ 850 ಮಹಿಳಾ ಪೌರ ಕಾರ್ಮಿಕರಿಗೆ ಪಿಂಕ್ ಇ–ಸ್ಕೂಟರ್‌ಗಳನ್ನು ಪೂರೈಸುವ ಕ್ರಿಯಾ ಯೋಜನೆಗೆ ಅನುಮೋದನೆ ದೊರೆತಿದೆ.



ಇದೀಗ ಟೆಂಡರ್ ಪ್ರಕ್ರಿಯೆ ಆರಂಭವಾಗಿದ್ದು, ಯಶಸ್ವಿ ಬಿಡ್ಡುದಾರರಿಂದ ಪಿಂಕ್ ಎಲೆಕ್ಟ್ರಿಕ್ ಸ್ಕೂಟರ್‌ಗಳನ್ನು ಪೂರೈಸುವ ಜೊತೆಗೆ ಫಲಾನುಭವಿ ಮಹಿಳಾ ಪೌರ ಕಾರ್ಮಿಕರಿಗೆ ಡ್ರೈವಿಂಗ್ ಸ್ಕೂಲ್‌ಗಳಿಂದ ಚಾಲನಾ ತರಬೇತಿ ನೀಡಿ ಡ್ರೈವಿಂಗ್ ಲೈಸನ್ಸ್ (DL) ಕೊಡಿಸುವುದಲ್ಲದೇ ಅವರಿಗೆ ಕೌಶಲ್ಯಾಧಾರಿತ ತರಬೇತಿಯನ್ನೂ ಉಚಿತವಾಗಿ ನೀಡಲು ಪಾಲಿಕೆಯು ಮುಂದಾಗಿದೆ.

ಪಾಲಿಕೆಯ ಪೌರ ಕಾರ್ಮಿಕರ ಅನುದಾನದಲ್ಲಿ ಪಿಂಕ್ ಇ–ಸ್ಕೂಟರ್‌ಗಳನ್ನು ಪೂರೈಸಲಿದ್ದು, ಕಾಲ್ನಡಿಗೆಯಲ್ಲೋ... ಬಸ್ ಹಿಡಿದೋ ಬಂದು ಕೆಲಸ ಮಾಡುತ್ತಿರುವ ಮಹಿಳಾ ಪೌರ ಕಾರ್ಮಿಕರಿಗೆ ಚೈತನ್ಯ ತುಂಬುವ ಉದ್ದೇಶದಿಂದ ಪಾಲಿಕೆಯು ಈ ವಿನೂತನ ಯೋಜನೆಯನ್ನು ಜಾರಿಗೊಳಿಸುತ್ತಿದೆ.

ಇನ್ನು ಮುಂದೆ ಮಹಿಳಾ ಪೌರ ಕಾರ್ಮಿಕರು ಸ್ಕೂಟರ್‌ಗಳಲ್ಲಿ ಬಂದು ಮೈಸೂರಿನ ಸ್ವಚ್ಛತಾ ಕಾರ್ಯ ನಿರ್ವಹಿಸುವರು. ತಮ್ಮ ಮನೆಗಳಲ್ಲಿ ವಾಹನಗಳಿಗೆ ಚಾರ್ಜಿಂಗ್ ಮಾಡಿಕೊಂಡು, ಇಂತಹ ಸ್ಕೂಟರ್‌ಗಳಲ್ಲಿ ಸಂಚರಿಸುವ ಅವಕಾಶ ಲಭ್ಯವಾಗಲಿದೆ. ಈಗಾಗಲೇ ಸರ್ಕಾರವು 200 ಯೂನಿಟ್‌ವರೆಗೆ ಉಚಿತ ವಿದ್ಯುತ್ ಪೂರೈಸುತ್ತಿರುವುದರಿಂದ ವಾಹನಗಳಿಗೆ ಉಚಿತ ಇಂಧನವೂ ದೊರೆತಂತಾಗುತ್ತದೆ. ಪೌರ ಕಾರ್ಮಿಕರ ಕಾರ್ಯಕ್ಷಮತೆ, ವೃತ್ತಿಪರತೆ ಹೆಚ್ಚಿಸುವ ಸಲುವಾಗಿ ಮೈಸೂರು ಮಹಾನಗರ ● 10ನೇ ಪುಟಕ್ಕೆ

## 2024ರ ಜನವರಿ 12ರವರೆಗೆ ಮತದಾರರ ಪಟ್ಟಿ ಪರಿಷ್ಕರಣೆ ವಿಸ್ತರಣೆ



ಮೈಸೂರು,ಡಿ.27(ಆರ್‌ಕೆ)–2023ರ ಡಿ.26ರವರೆಗೆ ನಿಗದಿಯಾಗಿದ್ದ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಯನ್ನು 2024ರ ಜನವರಿ 12ರವರೆಗೆ ವಿಸ್ತರಿಸಲಾಗಿದೆ. ಕರ್ನಾಟಕ ಸೇರಿದಂತೆ ದೇಶದ 12 ರಾಜ್ಯಗಳ ಮುಖ್ಯ ಚುನಾವಣಾಧಿಕಾರಿಗಳಿಗೆ ಪತ್ರ ಬರೆದಿರುವ ಭಾರತ ಚುನಾವಣಾ ಆಯೋಗದ ಅಧೀನ ಕಾರ್ಯದರ್ಶಿ ರಾಜೇಶ್‌ಕುಮಾರ್ ಸಿಂಗ್, ಮತದಾರರ ಪಟ್ಟಿಯಲ್ಲಿ ಹೆಸರು ಸೇರಿಸುವುದು, ಕೈಬಿಡುವುದು, ವಿಳಾಸ ಬದಲಾವಣೆ ಸೇರಿದಂತೆ ಇನ್ನಿತರ ಪರಿಷ್ಕರಣೆಗೆ ಅರ್ಜಿ ಬರುತ್ತಿರುವುದರಿಂದ 2024ರ ಜನವರಿ 12ರವರೆಗೆ ಪ್ರಕ್ರಿಯೆ ವಿಸ್ತರಿಸಲಾಗಿದೆ ಎಂದು ತಿಳಿಸಿದ್ದಾರೆ.

ಮೈಸೂರು ಜಿಲ್ಲಾಡಳಿತವು ಮೈಸೂರು ಮಹಾನಗರ ಪಾಲಿಕೆ ಸಹಯೋಗದೊಂದಿಗೆ ನಗರ ಮತ್ತು ಜಿಲ್ಲೆಯಾದ್ಯಂತ ಬೂತ್ ಮಟ್ಟದಲ್ಲಿ ಅರ್ಜಿ ನಮೂನೆ ಭರ್ತಿ ಮಾಡಿ ಪಟ್ಟಿಯಲ್ಲಿನ ದೋಷ ಸರಿಪಡಿಸಿಕೊಳ್ಳಲು ಅವಕಾಶ ಕಲ್ಪಿಸಿದೆ. ಮತದಾರರಿಂದ ಪರಿಷ್ಕರಣಾ ಪ್ರಕ್ರಿಯೆಗೆ ಉತ್ತಮ ಪ್ರತಿಕ್ರಿಯೆ ಬರುತ್ತಿದ್ದು, ಕಡೇ ದಿನದ ಬಳಿಕ ಮಾಹಿತಿಯನ್ನು ಸಾರ್ವಜನಿಕರಿಗೆ ನೀಡಲಾಗುವುದು ಎಂದು ಜಿಲ್ಲಾ ಚುನಾವಣಾ ಶಾಖೆ ಅಧಿಕಾರಿಗಳು ತಿಳಿಸಿದ್ದಾರೆ.

## ಡಿ.30, ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಬಳಗದ ವಾರ್ಷಿಕೋತ್ಸವ



ಮೈಸೂರು,ಡಿ.27(ಎಂಟಿವೈ)–ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ಆವರಣದಲ್ಲಿರುವ ರಾಜೇಂದ್ರ ಭವನದಲ್ಲಿ ಡಿ.30ರಂದು ಸಂಜೆ 5ಕ್ಕೆ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಬಳಗದ 5ನೇ ವಾರ್ಷಿಕೋತ್ಸವ ಸಮಾರಂಭ ಜರುಗಲಿದೆ ಎಂದು ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಬಳಗದ ಅಧ್ಯಕ್ಷ ಡಾ.ಜಿ.ಎಂ.ವಾಮದೇವ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮದ ಸಾನ್ನಿಧ್ಯವನ್ನು ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ವಹಿಸಲಿದ್ದಾರೆ. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಉದ್ಘಾಟಿಸುವ ಕಾರ್ಯಕ್ರಮದಲ್ಲಿ ಜಾನಪದ ವಿದ್ವಾಂಸ ಡಾ.ಗೊ.ರು. ಚನ್ನಬಸಪ್ಪ ಕೃತಿ ಲೋಕಾರ್ಪಣೆ ಮಾಡಲಿದ್ದಾರೆ. ಕೆ.ಆರ್. ಆಸ್ಪತ್ರೆಯ ಡೀನ್ ಡಾ.ಕೆ.ಆರ್. ದಾಕ್ಷಾಯಿಣಿ ಅವರು ಸಾಧಕರನ್ನು ಸನ್ಮಾನಿಸಲಿದ್ದಾರೆ. ಬಡಗನಾಡು ಹೇಮರೆಡ್ಡಿ ಜನಾಂಗ ಸಂಘದ ಅಧ್ಯಕ್ಷ ಹೆಚ್.ಸಿ.ರೇವಣಸಿದ್ದಪ್ಪ ಹಾಗೂ ಇನ್ನಿತರರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಹೇಮರೆಡ್ಡಿ ಮಲ್ಲಮ್ಮ ಬಳಗದ ಪದಾಧಿಕಾರಿಗಳಾದ ಹೆಚ್.ಎಂ. ಹೇಮರೆಡ್ಡಿ, ಜಿ.ಶಿವಲಿಂಗಸ್ವಾಮಿ, ಶಾರದಾ ಶಿವಲಿಂಗಸ್ವಾಮಿ, ಸುರೇಶ್‌ಕುಮಾರ್, ಮಹಂತೇಶ್ ಉಪಸ್ಥಿತರಿದ್ದರು.

## ವಿದ್ಯುತ್ ಗುತ್ತಿಗೆದಾರರ ಸಂಘದ ಕಾರ್ಯಕ್ರಮದಲ್ಲಿ ಸಚಿವ ಹೆಚ್.ಕೆ.ಪಾಟೀಲ್ ಭಾಗವಹಿಸದಂತೆ ಒತ್ತಾಯ



ಮೈಸೂರು, ಡಿ.27(ಜಿಎ)–ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ವತಿಯಿಂದ ಡಿ.29ರಂದು ಗದಗ ಜಿಲ್ಲೆಯಲ್ಲಿ ಆಯೋಜಿಸಿರುವ ದಿನಚರಿ ಮತ್ತು ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮದಲ್ಲಿ ಗದಗ ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಕೆ.ಪಾಟೀಲ್ ಅವರಿಗೆ ಭಾಗವಹಿಸದಂತೆ ಕೆಪಿಸಿಸಿ ಅಸಂಘಟಿತ ಕಾರ್ಮಿಕರ ವಿಭಾಗದ ರಾಜ್ಯ ಕಾರ್ಯದರ್ಶಿ ಆರ್.ಶ್ರೀಪಾಲ್ ಒತ್ತಾಯಿಸಿದ್ದಾರೆ.

ನಗರದ ಖಾಸಗಿ ಹೋಟೆಲ್‌ನಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳ ಮೇಲೆ ಸಾಕಷ್ಟು ಗಂಭೀರ ಪ್ರಕರಣಗಳು ದಾಖಲಾಗಿದ್ದು, ಈಗಾಗಲೇ ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಬೆಂಗಳೂರು ಜಿಲ್ಲಾ ನೋಂದಣಿ ಕಚೇರಿ ವತಿಯಿಂದ ಸಂಘಕ್ಕೆ ನೋಟಿಸ್ ಜಾರಿ ಮಾಡಿದ್ದಾರೆ ಎಂದು ಆರೋಪಿಸಿದರು. ಇಂತಹ ಸಂಘದ ಕಾರ್ಯಕ್ರಮದಲ್ಲಿ ಭಾಗಿಯಾದರೆ, ಮುಂದಿನ ದಿನಗಳಲ್ಲಿ ವಿರೋಧ ಪಕ್ಷಗಳು ಹರಿಹಾಯುವ ಸಾಧ್ಯತೆ ಹೆಚ್ಚಿದೆ. ಆದ್ದರಿಂದ ಹೆಚ್.ಕೆ.ಪಾಟೀಲ್ ಅವರು ತೆರಳಿ ಸಮಯ ವ್ಯರ್ಥ ಮಾಡಿಕೊಳ್ಳಬಾರದು ಎಂದು ಮನವಿ ಮಾಡಿದರು.

## ಸಂಸದರ ಅಮಾನತು ಪ್ರಜಾಪ್ರಭುತ್ವದ ಕಗ್ಗೊಲೆ

### ಲೋಕಶಕ್ತಿ ರಾಜ್ಯಾಧ್ಯಕ್ಷ ಚಂದ್ರಶೇಖರ ವಿ.ಸ್ಥಾವರಮಠ ಕಿಡಿ



ಮೈಸೂರು,ಡಿ.27(ಎಂಟಿವೈ)– ಸಂಸತ್ ಚಳಿಗಾಲದ ಅಧಿವೇಶನ ವೇಳೆ ಸಂಸದರನ್ನು ಅಮಾನತುಗೊಳಿಸಿ, ಅವರ ಅನುಪಸ್ಥಿತಿಯಲ್ಲಿ ಅಧಿವೇಶನ ನಡೆಸುವುದು ಪ್ರಜಾಪ್ರಭುತ್ವದ ಕಗ್ಗೊಲೆ ಎಂದು ಲೋಕಶಕ್ತಿ ಪಕ್ಷದ ರಾಜ್ಯಾಧ್ಯಕ್ಷ ಚಂದ್ರಶೇಖರ ವಿ. ಸ್ಥಾವರಮಠ ಆರೋಪಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದ ಜ್ವಲಂತ ಸಮಸ್ಯೆಗಳನ್ನು ಸಂಸತ್‌ನಲ್ಲಿ ಚರ್ಚೆ ಮಾಡಬೇಕು. ಇದಕ್ಕಾಗಿ ವಿರೋಧ ಪಕ್ಷಗಳ ಅಗತ್ಯವಿತ್ತು. ಆದರೆ ವಿರೋಧ ಪಕ್ಷದ ಸಂಸದರನ್ನು ಅಮಾನತುಗೊಳಿಸಿ, ಸಂಸತ್‌ನೊಳಗೆ ಚರ್ಚೆ ಮಾಡದಂತೆ ಮಾಡಿದರೆ, ಸರ್ಕಾರವನ್ನು ಪ್ರಶ್ನಿಸುವವರು ಯಾರು?, ಇದು ನಾಚಿಕೆಗೇಡಿನ ಕೆಲಸ ಎಂದು ಕಿಡಿಕಾರಿದರು.

ದಿವಂಗತ ರಾಮಕೃಷ್ಣ ಹೆಗಡೆ ಅವರು ಈ ಪಕ್ಷ ಸ್ಥಾಪಿಸಿದ್ದು, ತಾವು ರಾಜ್ಯಾಧ್ಯಕ್ಷರಾಗಿ ಮುನ್ನಡೆಸುತ್ತಿದ್ದೇವೆ. ಇದೇ ವೇಳೆ ರಾಜ್ಯ ಸರ್ಕಾರ ನಿದ್ರೆಯಿಂದ ಇನ್ನೂ ಎಚ್ಚರಗೊಂಡಿಲ್ಲ. ಭೀಕರ ಬರಗಾಲವಿದೆ, ಕುಡಿಯುವ ನೀರಿಗೆ ಹಾಹಾಕಾರ ವುಂಟಾಗಿದೆ. ರಸ್ತೆಗಳು ಗುಂಡಿ ಬಿದ್ದಿವೆ. ಸರ್ಕಾರ ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಪಕ್ಷದ ಮಹಿಳಾ ಘಟಕದ ರಾಜ್ಯಾಧ್ಯಕ್ಷರನ್ನಾಗಿ ಡಾ.ಭಾಗ್ಯ, ಯುವ ಘಟಕದ ರಾಜ್ಯಾಧ್ಯಕ್ಷರಾಗಿ ಶಂಕರ್ ಎಂ.ಎನ್. ಮಂಡ್ಯ, ಕಾರ್ಯಾಧ್ಯಕ್ಷರಾಗಿ ಎಸ್.ವೆಂಕಟೇಶ್ ಅವರನ್ನು ನೇಮಕಗೊಳಿಸಿರುವುದಾಗಿ ತಿಳಿಸಿದರು. ಗೋಷ್ಠಿಯಲ್ಲಿ ಮುಖಂಡರಾದ ಬಸವರಾಜಪ್ಪ ನೀರ್ಥಡಿ, ಡಾ.ಭಾಗ್ಯ, ಎಂ.ಎಸ್.ಶಂಕರ್, ವೆಂಕಟೇಶ್ ಇದ್ದರು.

## ನಾಳೆ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ



ಮೈಸೂರು, ಡಿ.27(ಎಂಟಿವೈ)– ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಡಿ.29ರಂದು ಸಂಜೆ 5.30ಕ್ಕೆ ಕುವೆಂಪುನಗರದ ನಾಗಮಂಗಲ ತಾಲೂಕು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ನೂತನ ಸಾಲಿನ ಕ್ಯಾಲೆಂಡರ್ ಬಿಡುಗಡೆ, ಸಾಧಕರಿಗೆ ಸನ್ಮಾನ ಹಾಗೂ ಸರ್ವ ಸದಸ್ಯರ ಸಭೆ ಆಯೋಜಿಸಲಾಗಿದೆ ಎಂದು ನಾಗಮಂಗಲ ತಾಲೂಕು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎಸ್.ಸಿ.ವಿಶ್ವ ಮಂಜುನಾಥ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಘ ಆರಂಭವಾಗಿ ಒಂದು ವರ್ಷ ಕಳೆದಿದೆ. ನಾಗಮಂಗಲ ತಾಲೂಕಿನಿಂದ ಉದ್ಯೋಗ, ಮಕ್ಕಳ ವಿದ್ಯಾಭ್ಯಾಸ, ವ್ಯಾಪಾರ ಹಾಗೂ ವಿವಿಧ ಕಾರಣಗಳಿಂದಾಗಿ ಮೈಸೂರಿಗೆ ಆಗಮಿಸಿ ನೆಲೆ ನಿಂತವರನ್ನು ಒಂದುಗೂಡಿಸುವ ಕೆಲಸ ಸಂಘ ಮಾಡುತ್ತಿದೆ. ಹೀಗಾಗಿ ಈ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು. ಗೋಷ್ಠಿಯಲ್ಲಿ ಸಂಘದ ಪದಾಧಿಕಾರಿಗಳಾದ ಉಮೇಶ್, ಬೈರೇಗೌಡ, ಧನಂಜಯ, ಟಿ.ಬಿ.ಜಯರಾಮು ಇದ್ದರು.

# ಹಿಂಗಾರು ಬೆಳೆ ಸಮೀಕ್ಷೆ-2023 ಆ್ಯಪ್ ಬಿಡುಗಡೆ

### ರೈತರೇ ತಮ್ಮ ಜಮೀನಿನಲ್ಲಿ ಬೆಳೆದಿರುವ ಬೆಳೆ ಸಮೀಕ್ಷೆ ಮಾಡಿ; ವಿವರ ಅಪ್ಲೋಡ್ ಮಾಡಬಹುದು




ಮೈಸೂರು, ಡಿ.27– 2023–24ನೇ ಸಾಲಿನ ಬೆಳೆ ಸಮೀಕ್ಷೆ ಕಾರ್ಯಕ್ರಮದ ಭಾಗವಾಗಿ ಕರ್ನಾಟಕ ಸರ್ಕಾರದ ಕೃಷಿ ಇಲಾಖೆಯು ಪ್ರಸಕ್ತ ಸಾಲಿನ ಹಿಂಗಾರು ರೈತರ ಬೆಳೆ ಸಮೀಕ್ಷೆ ಅಪ್ಲಿಕೇಶನ್ ಅನ್ನು ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಬಿಡುಗಡೆ ಮಾಡಿದೆ. ಅಪ್ಲಿಕೇಶನ್ ಅನ್ನು ಬಳಸಿಕೊಂಡು ಸ್ವತಃ ರೈತರೇ ತಮ್ಮ ಜಮೀನುಗಳಲ್ಲಿ ಬೆಳೆದಿರುವ ಬೆಳೆಗಳ ಸಮೀಕ್ಷೆಯನ್ನು ಮಾಡಿ ವಿವರಗಳನ್ನು ಅಪ್ಲೋಡ್ ಮಾಡಬಹುದಾಗಿದೆ.

**ಅಪ್ಲಿಕೇಶನ್ ವೈಶಿಷ್ಟ್ಯಗಳು:** ರೈತರ ಜಮೀನಿನಲ್ಲಿ ಬೆಳೆದಿರುವ ಬೆಳೆಗಳ ಮಾಹಿತಿಯನ್ನು ರೈತರು ನಿಖರವಾಗಿ ದಾಖಲಿಸಬಹುದು. ಸದರಿ ಬೆಳೆ ಸಮೀಕ್ಷೆ ಮಾಹಿತಿಯನ್ನು ಬೆಳೆ ವಿಮೆ, ಬೆಳೆ ನಷ್ಟ ಪರಿಹಾರ, ಬೆಂಬಲ ಬೆಲೆ, ಕೃಷಿ ಸಾಲ ಸೌಲಭ್ಯ ಮತ್ತು ಸರ್ಕಾರದ ವಿವಿಧ ಯೋಜನೆಗಳಡಿ ಸವಲತ್ತುಗಳನ್ನು ರೈತರಿಗೆ ಒದಗಿಸಲು ಮತ್ತು ಆರ್.ಟಿ.ಸಿಯಲ್ಲಿ ಬೆಳೆ ಮಾಹಿತಿ ಅಳವಡಿಸಲು ಬಳಸಲಾಗುತ್ತದೆ. ಸಾರ್ವಜನಿಕರು ಗೂಗಲ್ ಪ್ಲೇಸ್ಟೋರ್‌ನಲ್ಲಿ ಹಿಂಗಾರು ರೈತ ಬೆಳೆ ಸಮೀಕ್ಷೆ–2023 ಎಂದು ಟೈಪ್ ಮಾಡಿ ಅಥವಾ https://play.google.com/store.apps. details?id=com.csk.farmer23_24. crop survey ಲಿಂಕ್ ಅನ್ನು ಬಳಸಿ ಡೌನ್ಲೋಡ್ ಮಾಡಿಕೊಳ್ಳಬಹುದು. ನಂತರ ತಮ್ಮ ಆಧಾರ್ ಕಾರ್ಡ್‌ನ ಮೂಲಕ E-KYC ಪ್ರಕ್ರಿಯೆ ಪೂರ್ಣಗೊಳಿಸಿ ನೋಂದಾಯಿಸಿಕೊಂಡು ತಮ್ಮ ಜಮೀನಿನ ವಿವರಗಳನ್ನು ಡೌನ್ಲೋಡ್ ಮಾಡಿಕೊಳ್ಳಬೇಕು. ಆನಂತರ ತಮ್ಮ ಜಮೀನಿಗೆ ತೆರಳಿ, ಸಂಬಂಧಪಟ್ಟ ಸರ್ವೆ ನಂಬರ್‌ನಲ್ಲಿ ಬೆಳೆದಿರುವ ಬೆಳೆಗಳ ಛಾಯಾಚಿತ್ರಗಳನ್ನು ತೆಗೆದು ಅಪ್ಲೋಡ್ ಮಾಡಬೇಕು. ರೈತರು ತಾವು ಬೆಳೆದ ಬೆಳೆ ವಿವರಗಳನ್ನು ಅಪ್ಲೋಡ್ ಮಾಡದಿದ್ದಲ್ಲಿ ಸರ್ಕಾರದ ವಿವಿಧ ಯೋಜನೆಗಳಿಂದ ದೊರೆಯುವ ಸವಲತ್ತುಗಳನ್ನು ಪಡೆಯುವುದರಿಂದ ವಂಚಿತರಾಗುವ ಸಂಭವವಿರುತ್ತದೆ. ಆದ್ದರಿಂದ ಎಲ್ಲಾ ರೈತ ಬಾಂಧವರು ಹೆಚ್ಚಿನ ಆಸಕ್ತಿಯೊಂದಿಗೆ ಪ್ರಸಕ್ತ ಹಂಗಾಮಿನಲ್ಲಿ ಬೆಳೆ ಸಮೀಕ್ಷೆ ಕಾರ್ಯದಲ್ಲಿ ಪಾಲ್ಗೊಂಡು ತಮ್ಮ ಜಮೀನಿನ ಬೆಳೆ ಮಾಹಿತಿಯನ್ನು ತಾವೇ ಖುದ್ದಾಗಿ ದಾಖಲಿಸುವಂತೆ ತಿಳಿಸಿದೆ.

ಹೆಚ್ಚಿನ ಮಾಹಿತಿಗಾಗಿ ರೈತರು ತಮ್ಮ ಹತ್ತಿರದ ರೈತ ಸಂಪರ್ಕ ಕೇಂದ್ರ, ತೋಟಗಾರಿಕೆ, ರೇಷ್ಮೆ, ಕಂದಾಯ ಇಲಾಖೆ ಕಚೇರಿಗಳನ್ನು ಅಥವಾ ಆಯಾ ಗ್ರಾಮಗಳಿಗೆ ನಿಯೋಜಿಸಲಾಗಿರುವ ಖಾಸಗಿ ನಿವಾಸಿಗಳನ್ನು ಅಥವಾ ಬೆಳೆ ಸಮೀಕ್ಷೆ ಸಹಾಯವಾಣಿ 18004253553 ಅನ್ನು ಸಂಪರ್ಕಿಸಬಹುದು ಎಂದು ಮೈಸೂರು ಜಿಲ್ಲೆ ಜಂಟಿ ಕೃಷಿ ನಿರ್ದೇಶಕರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## 'ಕಾಕನಕೋಟೆ' ನಾಟಕ ಪ್ರದರ್ಶನ

ಮೈಸೂರು, ಡಿ. 27– ರಂಗಾಯಣದ ಭಾರತೀಯ ರಂಗಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ಎಸ್. ರಾಮನಾಥ ಅವರ ನಿರ್ದೇಶನದಲ್ಲಿ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ವಿರಚಿತ 'ಕಾಕನಕೋಟೆ' ನಾಟಕ ಪ್ರದರ್ಶನವನ್ನು ಡಿ. 30 ಮತ್ತು 31 ಹಾಗೂ ಜನವರಿ 7, 14, 20, 27, 28 ರಂದು ಸಂಜೆ 6.30ಕ್ಕೆ ರಂಗಾಯಣದ ವನರಂಗ ಬಯಲು ರಂಗಮಂದಿರದಲ್ಲಿ ಏರ್ಪಡಿಸಲಾಗಿದೆ ಎಂದು ರಂಗಾಯಣದ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪಿಹೆಚ್.ಡಿ ಪದವಿ

ಮೈಸೂರು, ಡಿ.27–ವಿದ್ಯುನ್ಮಾನಶಾಸ್ತ್ರ ವಿಷಯದಲ್ಲಿ ಎಂ.ಲಾವಣ್ಯ ಅವರು ಡಾ. ಮಹೇಶ್ ಕೆ.ರಾವ್ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ, ಮಂಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿವಿ ಪಿಹೆಚ್.ಡಿ ಪದವಿಗಾಗಿ ಅಂಗೀಕರಿಸಿದೆ.

## ಇಂದು ರಾಷ್ಟ್ರೀಯ ಗ್ರಾಹಕರ ದಿನಾಚರಣೆ

ಮೈಸೂರು,ಡಿ.27–ಜಿಲ್ಲಾಡಳಿತ, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಮೈಸೂರು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ಶ್ರೀಕಾಂತ ವಿದ್ಯಾಸಂಸ್ಥೆಗಳ ಸಹಯೋಗದೊಂದಿಗೆ ಡಿ.28 ರಂದು ಬೆಳಗ್ಗೆ 11:30ಕ್ಕೆ ಶ್ರೀಕಾಂತ ಮಹಿಳಾ ಪದವಿ ಪೂರ್ವ ಕಾಲೇಜಿನಲ್ಲಿ ರಾಷ್ಟ್ರೀಯ ಗ್ರಾಹಕರ ದಿನಾಚರಣೆ–2023 ಆಯೋಜಿಸಲಾಗಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷರಾದ ಎ.ಕೆ.ನವೀನ್‌ಕುಮಾರಿ ವಹಿಸಲಿದ್ದು, ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಉದ್ಘಾಟನೆ ನೆರವೇರಿಸುವರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಸದಸ್ಯರಾದ ಎನ್.ಕೆ.ಲಲಿತಾ, ಮಾರುತಿ ವಡ್ಡರ್ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದಿನೇಶ್ ಬಿ.ಜಿ. ಪಾಲ್ಗೊಳ್ಳುವರು. ವಿಶೇಷ ಆಹ್ವಾನಿತರಾಗಿ ಕೆ.ಎನ್.ವರದರಾಜ ಅಯ್ಯಂಗಾರ್ ಮೆಮೋರಿಯಲ್ ಟ್ರಸ್ಟ್ ಅಧ್ಯಕ್ಷ ಆರ್.ಜೆ ನರಸಿಂಹ ಅಯ್ಯಂಗಾರ್ ಮತ್ತು ಖಜಾಂಚಿ ಎನ್.ಎಸ್ ರಂಗರಾಜನ್ ಭಾಗವಹಿಸುವರು.

## ಮೋದಿ ಮತ್ತೆ ಪ್ರಧಾನಿ ಆಗುವುದನ್ನು ಯಾರಿಂದಲೂ ತಪ್ಪಿಸಲಾಗದು

### ● ಖ್ಯಾತ ಜ್ಯೋತಿಷಿ ದ್ವಾರಕಾನಾಥ್ ಭವಿಷ್ಯ ● ಸಿದ್ದರಾಮಯ್ಯ ಸರ್ಕಾರಕ್ಕೆ ಯಾವ ಚ್ಯುತಿಯೂ ಇಲ್ಲ ● ಹಾಗೆ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಆಗುವುದು ಶತಸಿದ್ಧ!

ಬೆಂಗಳೂರು,ಡಿ.27(ಕೆಎಂಶಿ)–ನರೇಂದ್ರ ಮೋದಿ ಮತ್ತೆ ಪ್ರಧಾನಿ ಆಗಲಿದ್ದಾರೆ ಎಂದಿರುವ ಖ್ಯಾತ ಜ್ಯೋತಿಷಿ ದ್ವಾರಕಾನಾಥ್, ರಾಜ್ಯದಲ್ಲಿ ಸಿದ್ದರಾಮಯ್ಯ ಅವರ ಅಧಿಕಾರಕ್ಕೆ ಚ್ಯುತಿ ಇಲ್ಲ ಎಂದು ಭವಿಷ್ಯ ನುಡಿದಿದ್ದಾರೆ. ಮುಂದೊಂದು ದಿನ ಈ ರಾಜ್ಯವನ್ನು ಹಾಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಅವರೇ ಆಳುವಂತಹ ಕಾಲ ಬರುತ್ತದೆ, ಅವರು ಮುಖ್ಯಮಂತ್ರಿ ಆಗಲಿದ್ದಾರೆ ಎಂದಿದ್ದಾರೆ. ಸಿದ್ದರಾಮಯ್ಯ ಅವರ ಗ್ರಹಗತಿಗಳು ಚೆನ್ನಾಗಿರುವುದರಿಂದ ಅವರು ಮುಖ್ಯಮಂತ್ರಿಯಾಗಿ ಮುಂದುವರೆ ಯುವ ಜೊತೆಗೆ ಕಾಂಗ್ರೆಸ್ ಸರ್ಕಾರ ಪತನವಾಗುವುದಿಲ್ಲ. ಕೇಂದ್ರದಲ್ಲಿ ಮೋದಿ ಮತ್ತೆ ಪ್ರಧಾನಿ ಆಗುವುದನ್ನು ಯಾರಿಂದಲೂ ತಪ್ಪಿಸಲು ಸಾಧ್ಯವಿಲ್ಲ. ಶಿವಕುಮಾರ್ ತಮ್ಮ ನಡತೆಯಲ್ಲಿ ಸುಧಾರಣೆ ಮಾಡಿಕೊಂಡರೆ ಒಳಿತು, ಅವರಿಗೆ ಧಕ್ಕುವ ಅಧಿಕಾರವನ್ನು ತಪ್ಪಿಸಲು ಸಾಧ್ಯವಿಲ್ಲ ಎಂದಿದ್ದಾರೆ.

## 10800 ಭಕ್ತರಿಂದ ಕೋಟಿ ಗೀತಾ ಲೇಖನ ಯಜ್ಞ ದೀಕ್ಷೆ ಸ್ವೀಕಾರ



ಬುಧವಾರ ಕುಶಾಲನಗರ ಗಾಯತ್ರಿ ಕಲ್ಯಾಣ ಮಂಟಪದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶ್ರೀ ಶ್ರೀ ಡಾ.ಸುಗುಣೇಂದ್ರ ತೀರ್ಥ ಸ್ವಾಮೀಜಿ ಮಹೋನ್ನತ ಧಾರ್ಮಿಕ ಜಾಗತಿಕ ಸಂಕಲ್ಪ ಕೋಟಿ ಗೀತಾ ಲೇಖನ ಯಜ್ಞಕ್ಕೆ 10800 ಯಜ್ಞಕರ್ತರನ್ನು ನೋಂದಣಿ ಮಾಡಿಸಲು ಸ್ವತಃ ಶ್ರೀಪಾದರು ಪ್ರತಿಜ್ಞೆ ವಿಧಿ ಬೋಧಿಸಿದರು. ಕಿರಿಯ ಪಟ್ಟದ ಶ್ರೀ ಸುಶ್ರೀಂದ್ರ ತೀರ್ಥ ಶ್ರೀಪಾದರು ಉಪಸ್ಥಿತರಿದ್ದ ಈ ಬೃಹತ್ ಕಾರ್ಯಕ್ರಮವನ್ನು ಕುಶಾಲನಗರದ ಸಂಕರ್ಷಣಾ ಪ್ರಖಂಡ ಕೋಟಿ ಗೀತಾ ಲೇಖನ ಯಜ್ಞ ಪರಿವಾರ ಆಯೋಜಿಸಿತ್ತು.

## ಜ.20ರಂದು 6ನೇ ತರಗತಿ ನವೋದಯ ಪ್ರವೇಶ ಪರೀಕ್ಷೆ

ಮೈಸೂರು,ಡಿ.27–ಮೈಸೂರು ಜಿಲ್ಲೆಯ ಜವಾಹರ್ ನವೋದಯ ವಿದ್ಯಾಲಯದಿಂದ 2024–25ನೇ ಸಾಲಿನ 6ನೇ ತರಗತಿಗೆ ಆಯ್ಕೆ ಬಯಸಿ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳ ಪ್ರವೇಶ ಪರೀಕ್ಷೆಯು 2024ರ ಜನವರಿ 20 ರಂದು ಜಿಲ್ಲೆಯ ಎಲ್ಲಾ ತಾಲೂಕು ಕೇಂದ್ರಗಳಲ್ಲಿ ನಡೆಯಲಿದೆ. ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಪ್ರವೇಶ ಪತ್ರಗಳನ್ನು www. novodaya.gov.inನಿಂದ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಜವಹಾರ್ ನವೋದಯ ವಿದ್ಯಾಲಯದ ಪ್ರಾಂಶುಪಾಲರನ್ನು ಹಾಗೂ ದೂ.ಸಂಖ್ಯೆ: 0821–2970040 ಸಂಪರ್ಕಿಸಬಹುದು ಎಂದು ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಚಿವ ಶಿವಾನಂದ ಪಾಟೀಲ್ ಹೇಳಿಕೆ ಖಂಡಿಸಿ ರೈತರ ರಸ್ತೆ ತಡೆ



ಮೈಸೂರು,ಡಿ.27(ಜಿಎ)–ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ್ ರೈತ ಸಮುದಾಯದ ಬಗ್ಗೆ ಲಘುವಾಗಿ ಮಾತನಾಡಿರುವುದನ್ನು ಖಂಡಿಸಿ ಕರ್ನಾಟಕ ರಾಜ್ಯ ರೈತಸಂಘ ಮತ್ತು ಹಸಿರುಸೇನೆ ವತಿಯಿಂದ ರಸ್ತೆ ತಡೆದು ಪ್ರತಿಭಟನೆ ನಡೆಸಲಾಯಿತು.

ಮೈಸೂರು ನಂಜನಗೂಡು ರಸ್ತೆಯ ಎಪಿಎಂಸಿ ರಿಂಗ್‌ರೋಡ್ ವೃತ್ತದ ಬಳಿ ಮಾನವ ಸರಪಳಿ ನಿರ್ಮಿಸಿ ರಸ್ತೆ ತಡೆದು ಪ್ರತಿಭಟನೆ ನಡೆಸಿದ ರೈತರು, ಶಿವಾನಂದ ಪಾಟೀಲ್ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಸಚಿವ ಶಿವಾನಂದ ಪಾಟೀಲ್ ರೈತರು ಸಾಲ ಮನ್ನಾಕ್ಕಾಗಿ ಬರದ ನಿರೀಕ್ಷೆ ಮಾಡುತ್ತಾರೆ ಎಂದು ಹೇಳಿಕೆ ನೀಡಿ ರೈತ ಸಮುದಾಯದ ಬಗ್ಗೆ ಅವಹೇಳನ ಮಾಡಿದ್ದಾರೆ. ಯಾವ ರೈತನೂ ಬರ ಬರಲಿ ಎಂದು ಕಾಯುವುದಿಲ್ಲ. ಮಾಡಿದ ಸಾಲದಲ್ಲಿ ಬೆಳೆ ಬೆಳೆದು ನಷ್ಟವಾದಾಗ ಸಾಲ ತೀರಿಸಲು ಸಾಧ್ಯವಾಗುವುದಿಲ್ಲ. ಆದರೆ, ಸಾಲ ಮನ್ನಾ ಮಾಡಿ ಎಂದು ಯಾರೂ ಕೇಳುವುದಿಲ್ಲ. ಜವಾಬ್ದಾರಿಯುತ ಸ್ಥಾನದಲ್ಲಿರುವ ಸಚಿವರು ಈ ರೀತಿಯ ಹೇಳಿಕೆ ನೀಡುವುದು ಖಂಡನೀಯ. ಅವರ ಈ ಹೇಳಿಕೆಯಿಂದ ರೈತರಿಗೆ ತೀವ್ರ ನೋವುಂಟಾಗಿದ್ದು ಕೂಡಲೇ ಕ್ಷಮೆ ಯಾಚಿಸಬೇಕು. ಭವಿಷ್ಯದಲ್ಲಿ ಈ ರೀತಿಯ ಹೇಳಿಕೆಗಳು ಪುನರಾವರ್ತನೆ ಆಗಬಾರದು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶಿವಾನಂದ ಪಾಟೀಲ್ ಅವರಿಗೆ ಸೂಕ್ತ ತಿಳುವಳಿಕೆ ನೀಡಬೇಕೆಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೊಸಕೋಟೆ ಬಸವರಾಜು, ರೈತ ಮುಖಂಡರಾದ ಪಿ.ಮರಂಕಯ್ಯ, ಪ್ರಸನ್ನ ಎನ್.ಗೌಡ, ಶಿರಮಳ್ಳಿ ಸಿದ್ದಪ್ಪ, ವಿಜೇಂದ್ರ, ಮಂಡಕಳ್ಳಿ ಮಹೇಶ್, ಪ್ರೇಮ್‌ರಾಜ್, ಹೆಜ್ಜಿಗೆ ಪ್ರಕಾಶ್, ರಾಘವೇಂದ್ರ ಸೇರಿದಂತೆ ಇನ್ನೂ ಹಲವಾರು ರೈತ ಮುಖಂಡರು ಭಾಗವಹಿಸಿದ್ದರು.

## ನಾಳೆ ವಿದ್ಯಾರ್ಥಿಗಳಿಂದ ಪ್ರತಿಜ್ಞಾ ವಿಧಿ ಸ್ವೀಕಾರ

ಮೈಸೂರು,ಡಿ.27–ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯ, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ವತಿಯಿಂದ 2023–24ನೇ ಸಾಲಿನ ಪ್ರಥಮ ವರ್ಷದ ಬಿ.ಎಸ್ಸಿ ನರ್ಸಿಂಗ್ ವಿದ್ಯಾರ್ಥಿಗಳಿಗಾಗಿ ಜ್ಯೋತಿ ಬೆಳಗಿಸುವ ಮತ್ತು ಪ್ರತಿಜ್ಞಾವಿಧಿ ಸ್ವೀಕಾರ ಕಾರ್ಯಕ್ರಮವನ್ನು ಡಿ.29ರಂದು ಬೆಳಗ್ಗೆ 10 ಗಂಟೆಗೆ ಜೆ.ಕೆ ಮೈದಾನದ ಅಮೃತ ಮಹೋತ್ಸವ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಂಎಂಸಿ ಮತ್ತು ಆರ್.ಐ, ಉಪನಿರ್ದೇಶಕಿ ಡಾ.ಕೆ.ಆರ್. ದಾಕ್ಷಾಯಿಣಿ ವಹಿಸಲಿದ್ದು, ವಿಶೇಷ ಅತಿಥಿಗಳಾಗಿ ಕೆ.ಆರ್.ಆಸ್ಪತ್ರೆಯ ಸರ್ಕಾರಿ ಶುಶ್ರೂಷ ಶಾಲೆ ನಿವೃತ್ತ ಪ್ರಾಂಶುಪಾಲರಾದ ಮೋಹಿನಿ ಭಾಗವಹಿಸುವರು ಎಂದು ಸರ್ಕಾರಿ ಮಹಾವಿದ್ಯಾನಿಲಯದ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮೈಸೂರು ಹಾಗೂ ಸುತ್ತಮುತ್ತ ಇಂದು...



### ಇಂದಿನ ಪಂಚಾಂಗ

**28.12.2023 ಗುರುವಾರ, ಮಳೆ ನಕ್ಷತ್ರ: ಮೂಲ 16.12.2023 ರಿಂದ 28.12.2023**
**ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಕೃಷ್ಣ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಪುನರ್ವಸು, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ**

### ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಮೊಬೈಲ್ ಬಳಸೋಣ ಬನ್ನಿ–ಪ್ರಪಂಚಕ್ಕೆ ಬೆಳಕಿಂಡಿಯಾದ ಸಾಧನದ ಸದುಪಯೋಗ ಕುರಿತ ಬಾನುಲಿ ಸರಣಿ. ಪ್ರಸ್ತುತಿ–ಮೈಸೂರಿನ ಎನ್.ರವಿಶಂಕರ್, 6.40 ಪದ ಸಂಸ್ಕೃತಿ, ಪ್ರಸ್ತುತಿ–ಡಾ.ಹೆಚ್.ವಿ.ನಾಗರಾಜರಾವ್, 8.30 ಬದುಕು ಅಕ್ಷಯವಾಗಲಿ–ಪ್ರಾಯೋಜಿತ ಕಾರ್ಯಕ್ರಮ, 10.00 ಅರುಣಾ ಸಾಯಿರಾಂ–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರ ನಾಮ, 1.20 ಭಾವಗೀತೆ–ಸ್ಟ್ಯಾನ್ಲೀ ಪಾರ್ಕರ್, 4.00 ಜನಪದ ಸಂಗೀತ –ಹೆಗ್ಗಡಹಳ್ಳಿ ಕೃಷ್ಣೇಗೌಡ ಮತ್ತು ಸಂಗಡಿಗರು, 4.30 ಕನ್ನಡ ಭಾರತಿ–ಹಾಡು ಯಾರದು– ಹಾಡುವವನದು. ಗಾಯಕಿ ಕೆ.ಪಿ.ರೇವತಿ ಅವರೊಂದಿಗೆ ಸಂವಾದ. ನಡೆಸಿಕೊಡುತ್ತಾರೆ ದಿವಾಕರ ಹೆಗಡೆ, 6.50 ಕೃಷಿರಂಗ–ಮೇವಿನ ಬೆಳೆಗಳ ಬೇಸಾಯ ಕುರಿತು ಸಂವಾದದಲ್ಲಿ ಭಾಗವಹಿಸುತ್ತಾರೆ ಡಾ.ಪಿ.ಮಹದೇವು ಹಾಗೂ ಎನ್.ನಿತ್ಯಾನಂದ. ಪ್ರಸ್ತುತಿ–ಎನ್.ಕೇಶವಮೂರ್ತಿ, 8.00 ಯುವವಾಣಿ–ಹೊಸ ವರ್ಷ ಹೊಸ ಹರ್ಷ ಕುರಿತ ವಿಶೇಷ ಚಿತ್ರ ಚಿತ್ತಾರ ಕಾರ್ಯಕ್ರಮ, ಪ್ರಸ್ತುತಿ–ಶ್ರಾವಣಿ, 10.00 ನಾಟಕ– ಅಂತರಾತ್ಮ ನೀಡಿದ ಕಣ್ಬೆಳಕು, ರಚನೆ–ವನಮಾಲಾ ಆಚಾರ್, ನಿರ್ದೇಶನ–ಶೇಷಪ್ರಭಾ, 10.30 ಸವಿನೆನಪು

- **ಮೈಸೂರು ಅರಮನೆ ಮಂಡಳಿ:** ಅರಮನೆ ಫಲಪುಷ್ಪ ಪ್ರದರ್ಶನ, ಬೆಳಗ್ಗೆ 10ರಿಂದ ರಾತ್ರಿ 9 ರವರೆಗೆ.
- **ಜೆಎಸ್‌ಎಸ್ ಇಂಗ್ಲೀಷ್ ಮಾಧ್ಯಮ ಶಾಲೆ:** ಶಾಲಾ ವಾರ್ಷಿಕೋತ್ಸವ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ: ಶಾಲಾ ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕ ಹೆಚ್.ಕೆ. ಪಂಡಿತ್, ಮುಖ್ಯ ಅತಿಥಿಗಳು: ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕ ಬಿ. ನಿರಂಜನಮೂರ್ತಿ, ಸ್ಥಳ: ಜಗನ್ಮೋಹನ ಅರಮನೆ, ಬೆಳಗ್ಗೆ 10ಕ್ಕೆ.
- **ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ :** ರಾಷ್ಟ್ರೀಯ ಕಾಂಗ್ರೆಸ್ ಸಂಸ್ಥಾಪನಾ ದಿನ, ಅಧ್ಯಕ್ಷತೆ: ನಗರ ಅಧ್ಯಕ್ಷ ಆರ್.ಮೂರ್ತಿ, ಉದ್ಘಾಟನೆ: ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಉಪಸ್ಥಿತರು : ಗ್ರಾಮಾಂತರ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಸ್ಥಳ: ಕಾಂಗ್ರೆಸ್ ಭವನ, ಬೆಳಗ್ಗೆ 11ಕ್ಕೆ.
- **ಪಾಳ್ಯಂ ಶ್ರೀ ಶಾಸ್ತಾ ಪೀಠಂ ಅಭ್ಯುದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಪೂಜಾ ಲಕ್ಷಾರ್ಚನಾ ಮತ್ತು ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹತೋಬಾರ, ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ರಾಘವೇಂದ್ರನಗರ, ಬೆಳಗ್ಗೆಯಿಂದ.
- **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆಯವರೆಗೆ.
- **ಯುವರಾಜ ಕಾಲೇಜು:** 9ನೇ ಪದವಿ ಪ್ರದಾನ ಸಮಾರಂಭ, ಪದವಿ ಪ್ರಧಾನ ಭಾಷಣ: ಭಾರತೀಯ ವಿಜ್ಞಾನ ಸಂಸ್ಥೆ ಪ್ರಾಧ್ಯಾಪಕ ಪ್ರೊ.ಎಂ.ಆರ್.ಎನ್.ಮೂರ್ತಿ, ಅಧ್ಯಕ್ಷತೆ: ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಸ್ಥಳ: ಅಮೃತ ಮಹೋತ್ಸವ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 11ಕ್ಕೆ
- **ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್:** ಆಭರಣ ವಿನ್ಯಾಸ ಮತ್ತು ತಂತ್ರಜ್ಞಾನ ವಿಭಾಗದ ವಿಶೇಷಚೇತನ ವಿದ್ಯಾರ್ಥಿಗಳಿಂದ ಆಭರಣ ಪ್ರದರ್ಶನ, ಉದ್ಘಾಟನೆ: ಜೆಎಸ್‌ಎಸ್ ಮಹಾವಿದ್ಯಾಪೀಠ ಸಾಮಾನ್ಯ ಆಡಳಿತ ವಿಭಾಗದ ನಿರ್ದೇಶಕ ಶಂಕರಪ್ಪ, ಮುಖ್ಯ ಅತಿಥಿಗಳು: ಪಬ್ಲಿಕ್ ಟಿವಿ ವರದಿಗಾರ ಕೆ.ಪಿ.ನಾಗರಾಜ್, ಸಂಸ್ಥೆಯ ಪ್ರಾಂಶುಪಾಲ ಇಳಂಗೋವನ್, ಸ್ಥಳ: ಪಾಲಿಟೆಕ್ನಿಕ್ ಆವರಣ, ಬೆಳಗ್ಗೆ 11ಕ್ಕೆ.
- **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀ ಮದ್ಭಾಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.
- **ಚಿನ್ಮಯ ಮಿಷನ್ :** ಪಂಡಿತ್ ಕೃಷ್ಣರಾವ್ ಪ್ರಕಾಶ್ ಅವರಿಂದ ಶ್ರೀಮದ್ ಭಾಗವತ–11ನೇ ಸ್ಕಂದ ಕುರಿತು ಉಪನ್ಯಾಸ, ಸ್ಥಳ: ಶ್ರೀ ಚಿನ್ಮಯ ಮಿಷನ್ ಯಜ್ಞಶಾಲೆ, ಗೋಕುಲಂ, ಸಂಜೆ 6ಕ್ಕೆ.
- **ಹೆಬ್ಬಾರ್ ಶ್ರೀ ವೈಷ್ಣವ ಸಭಾ, ಬೆಂಗಳೂರು ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ :** ತಿರುಪ್ಪಾವೈ ಪ್ರವಚನ, ವಿದ್ವಾನ್ ಎಂ.ಕೆ. ಶೆಲ್ವನಾರಾಯಣ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಕೃಷ್ಣಮೂರ್ತಿಪುರಂ ಶ್ರೀರಾಮಮಂದಿರ, ಸಂಜೆ 6.15ರಿಂದ 7.30 ರವರೆಗೆ.
- **ಮೈಸೂರು ವಿಶ್ವವಿದ್ಯಾನಿಲಯ, ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ :** ಸಂವಿಧಾನ ದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸಗಳ ಮಾಲಿಕೆ, ನಿವೃತ್ತ ಕೆಎಎಸ್ ಅಧಿಕಾರಿ ಕೆ.ಎನ್. ಲಿಂಗಪ್ಪ ಅವರಿಂದ ಭಾರತದ ಸಂವಿಧಾನ ಮತ್ತು ಮೀಸಲಾತಿ ಕುರಿತು ಉಪನ್ಯಾಸ, ಅಧ್ಯಕ್ಷತೆ : ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯ ನಿಲಯಪಾಲಕ ನಾಗೇಶ್, ಸ್ಥಳ: ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯ ಆವರಣ, ಮಾನಸಗಂಗೋತ್ರಿ, ಸಂಜೆ 7ಕ್ಕೆ
- **ನಾದರಂಗ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು :** ನಾಟಕೋತ್ಸವ, ನಾದರಂಗ ಕಲಾವಿದರಿಂದ ಸಿರಿವಂತನಾದರು ಕನ್ನಡ ನಾಡಲ್ಲೆ ಮೆರೆವೆ ಖ್ಯಾತಿಯ ಸಿ.ವಿ. ಶಿವಶಂಕರ್ ವಿರಚಿತ ರಣ ಪ್ರಚಂಡ ಐತಿಹಾಸಿಕ ನಾಟಕ ಪ್ರದರ್ಶನ, ನಿರ್ದೇಶನ : ರಂಗಸ್ವಾಮಿ, ರಂಗ ನಿರ್ವಹಣೆ : ಡಿ. ಕೃಷ್ಣಮೂರ್ತಿ, ನಿರ್ಮಾಣ : ಡಿ. ನಾಗೇಂದ್ರಕುಮಾರ್, ಸಂಗೀತ : ಪಾಟೀಲ್, ಎಂ.ಸಿ. ಜಗದೀಶ್, ಮಹದೇವ್, ಸ್ಥಳ: ಕಿರು ರಂಗಮಂದಿರ, ಕಲಾಮಂದಿರ ಆವರಣ, ಸಂಜೆ 7ಕ್ಕೆ.

## ಜ.14ರಿಂದ 'ಭಾರತ ನ್ಯಾಯ ಯಾತ್ರಾ'

# ಮಣಿಪುರದಿಂದ ಮುಂಬೈಗೆ ರಾಹುಲ್ ಗಾಂಧಿ ಪಡೆ ಯಾತ್ರೆ

### 6,200 ಕಿಮೀ ಕಾಂಗ್ರೆಸ್ ಪಾದಯಾತ್ರೆ



ನವದೆಹಲಿ: ದಕ್ಷಿಣದಿಂದ ಉತ್ತರಕ್ಕೆ 'ಭಾರತ್ ಜೋಡೋ ಯಾತ್ರೆ' ಮಾಡಿ ಗಮನ ಸೆಳೆದಿದ್ದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಈಗ ಪೂರ್ವ–ಪಶ್ಚಿಮ ಭಾಗಗಳಲ್ಲಿ ಯಾತ್ರೆ ಮಾಡಲು ಸಜ್ಜಾಗಿದ್ದಾರೆ.

ಜನವರಿ 14ರಿಂದ ಮಣಿಪುರದಿಂದ ಮುಂಬೈಗೆ 6,200 ಕಿಮೀ ಪಾದಯಾತ್ರೆ ಕೈಗೊಳ್ಳಲಿದ್ದಾರೆ. 'ಭಾರತ ನ್ಯಾಯ ಯಾತ್ರೆ'ಯು ಲೋಕಸಭೆ ಚುನಾವಣೆಗೆ ಮುನ್ನ ಮಾರ್ಚ್ 20ರಂದು ಮುಕ್ತಾಯಗೊಳ್ಳಲಿದೆ. ರಾಹುಲ್ ಗಾಂಧಿ ನೇತೃತ್ವದಲ್ಲಿ ಕಾಂಗ್ರೆಸ್ ನಾಯಕರು, ಕಾರ್ಯಕರ್ತರು ಯಾತ್ರೆ ಕೈಗೊಳ್ಳಲಿದ್ದಾರೆ. ಯಾತ್ರೆಯಲ್ಲಿ 14 ರಾಜ್ಯಗಳು ಮತ್ತು 85 ಜಿಲ್ಲೆಗಳನ್ನು ಸುತ್ತಲಿದ್ದಾರೆ ಎಂದು ಕಾಂಗ್ರೆಸ್ ಹೇಳಿದೆ. ಮಣಿಪುರ, ನಾಗಾಲ್ಯಾಂಡ್, ಅಸ್ಸಾಂ, ಮೇಘಾಲಯ, ಪಶ್ಚಿಮ ಬಂಗಾಳ, ಬಿಹಾರ, ಒಡಿಶಾ, ಛತ್ತೀಸ್‌ಗಢ, ಉತ್ತರ ಪ್ರದೇಶ, ಮಧ್ಯಪ್ರದೇಶ, ರಾಜಸ್ತಾನ, ಗುಜರಾತ್ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಪಾದಯಾತ್ರೆ ನಡೆಯಲಿದೆ. ರಾಹುಲ್ ಗಾಂಧಿಯವರು ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಕನ್ಯಾಕುಮಾರಿಯಿಂದ ಭಾರತ್ ಜೋಡೋ ಯಾತ್ರೆ ಕೈಗೊಂಡಿದ್ದರು. ಸಾವಿರಾರು ಕಾಂಗ್ರೆಸ್ ಕಾರ್ಯಕರ್ತರು ಹಾಗೂ ವಿರೋಧ ಪಕ್ಷದ ನಾಯಕರು ಭಾಗವಹಿಸಿದ್ದ 5 ತಿಂಗಳ ಪಾದಯಾತ್ರೆ ಜನವರಿಯಲ್ಲಿ ಶ್ರೀನಗರದಲ್ಲಿ ಕೊನೆಗೊಂಡಿತ್ತು.

ಕರ್ನಾಟಕ ಮತ್ತು ತೆಲಂಗಾಣದಲ್ಲಿ ಪಕ್ಷದ ಚುನಾವಣಾ ಸಾಧನೆಯ ಹಿಂದಿನ ಯಾತ್ರೆಗೆ ಕಾಂಗ್ರೆಸ್ ನಾಯಕರು ವ್ಯಾಪಕವಾಗಿ ಮನ್ನಣೆ ನೀಡಿದ್ದರು. ಈ ವರ್ಷ ನಡೆದ ಚುನಾವಣೆಯಲ್ಲಿ ಕರ್ನಾಟಕದಲ್ಲಿ ಬಿಜೆಪಿ ಮತ್ತು ತೆಲಂಗಾಣದಲ್ಲಿ ಬಿಆರ್‌ಎಸ್‌ನಿಂದ ಕಾಂಗ್ರೆಸ್ ಅಧಿಕಾರವನ್ನು ಕಸಿದುಕೊಂಡಿತು. ಮುಂಬರುವ ಲೋಕಸಭಾ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಮತ್ತೆ ಪಾದಯಾತ್ರೆ ಕೈಗೊಳ್ಳಲು ನಾಯಕ ರಾಹುಲ್ ಗಾಂಧಿ ಮುಂದಾಗಿದ್ದಾರೆ. ಅಪಾರ ಸಂಖ್ಯೆಯಲ್ಲಿ ಕಾಂಗ್ರೆಸ್ ನಾಯಕರು, ಕಾರ್ಯಕರ್ತರು ಪಾಲ್ಗೊಳ್ಳುವ ನಿರೀಕ್ಷೆ ಇದೆ.

## ಶಾಸಕ ಜನಾರ್ಧನ ರೆಡ್ಡಿ ಕಾಟೇಜ್‌ಗೆ ಬೆಂಕಿ

**ಕೊಪ್ಪಳ:** ಕೊಪ್ಪಳ ಜಿಲ್ಲೆ ಗಂಗಾವತಿ ಶಾಸಕ ಹಾಗೂ ಕೆಆರ್‌ಪಿಪಿ ಅಧ್ಯಕ್ಷ ಜನಾರ್ಧನ ರೆಡ್ಡಿ ಅವರ ಕಾಟೇಜ್‌ನಲ್ಲಿ ಬುಧವಾರ ಏಕಾಏಕಿ ಬೆಂಕಿ ಕಾಣಿಸಿಕೊಂಡಿದೆ.



ಗಂಗಾವತಿ ತಾಲೂಕಿನ ಪಂಪಾಸರೋವರ ಬಳಿ ಇರುವ ಕಾಟೇಜ್‌ನಲ್ಲಿ ಅಗ್ನಿ ಅವಘಡ ಸಂಭವಿಸಿದ್ದು, ಇದು ಕಿಡಿಗೇಡಿಗಳ ಕೃತ್ಯ ಇರಬಹುದು ಎಂದು ರೆಡ್ಡಿ ಬೆಂಬಲಿಗರು ಶಂಕೆ ವ್ಯಕ್ತಪಡಿಸಿದ್ದಾರೆ. ರೆಡ್ಡಿ ಅವರ ಖಾಲಿ ಕಾಟೇಜ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ಅಪರಿಚಿತ ವ್ಯಕ್ತಿಯೊಬ್ಬರು ಉದ್ದೇಶಪೂರ್ವಕವಾಗಿ ಬೆಂಕಿ ಹಾಕಿರಬಹುದು ಎಂಬ ಅನುಮಾನ ಅವರ ಅಭಿಮಾನಿಗಳಲ್ಲಿ ಮೂಡಿದೆ. ಗಂಗಾವತಿ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ಅಗ್ನಿಶಾಮಕ ದಳದ ಸಿಬ್ಬಂದಿ ಕೂಡಲೇ ಸ್ಥಳಕ್ಕೆ ಆಗಮಿಸಿ, ಬೆಂಕಿ ನಂದಿಸಿದ್ದಾರೆ. ಖಾಲಿ ಕಾಟೇಜ್ ನಲ್ಲಿ ಬೆಂಕಿ ಕಾಣಿಸಿಕೊಂಡಿದ್ದರಿಂದ ಆಸ್ತಿ ಹಾನಿಯ ಹೊರತಾಗಿ ಯಾವುದೇ ಜೀವ ಹಾನಿ ಅಥವಾ ಗಾಯಗಳಾಗಿಲ್ಲ ಎಂದು ವರದಿಯಾಗಿದೆ.

## 'ಸೋಮಾರಿ ಸಿದ್ದ' ಎನ್ನುವುದು ನಾಮಪದವಲ್ಲ, ವ್ಯಕ್ತಿ ನಿರ್ದಿಷ್ಟವೂ ಅಲ್ಲ

# ಕಲ್ಲು ಹೊಡೆದರೆ ಹಣ್ಣು ಕೊಡಲು ನಾನು ಮಾವಿನ ಮರವಲ್ಲ!

### ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಪ್ರತಾಪ್ ಸಿಂಹ ಮಾರ್ಮಿಕ ನುಡಿ

ಮೈಸೂರು,ಡಿ.27(ಪಿಎಂ)– ಕಲ್ಲು ಬಿಸಾಡಿದರೆ ಹಣ್ಣು ಕೊಡಲು ನಾನು ಮಾವಿನ ಮರವಲ್ಲ. ನಾನು ಪ್ರತಾಪ್ ಸಿಂಹ, ಕಲ್ಲು ಬಿಸಾಡಿದರೆ ಕಲ್ಲನ್ನೇ ವಾಪಸ್ಸು ಬಿಸಾಡುವುದು. ವಿಚಾರ ಮತ್ತು ಅಭಿವೃದ್ಧಿ ಇಟ್ಟುಕೊಂಡು ನಾವು ಫೈಟ್ ಮಾಡೋಣ ಎಂದು ಕಾಂಗ್ರೆಸಿಗರು ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯರನ್ನು ಸಂಸದ ಪ್ರತಾಪ್ ಸಿಂಹ ಮಾರ್ಮಿಕವಾಗಿ ಕುಟುಕಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಪ್ರತಾಪ್ ಸಿಂಹ ನಿಂದಿಸಿದ್ದಾರೆ ಎಂದು ಆರೋಪಿಸಿ ಮಂಗಳವಾರ ರಾತ್ರಿ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದರು. ಈ ಸಂಬಂಧ ಬುಧವಾರ ಫೇಸ್ ಬುಕ್ ಲೈವ್‌ನಲ್ಲಿ ಸಂಸದ ಪ್ರತಾಪ್ ಸಿಂಹ ವಿವರವಾದ ಸ್ಪಷ್ಟನೆ ಕೊಟ್ಟಿದ್ದಾರೆ. 'ಸೋಮಾರಿ ಸಿದ್ದ' ಎನ್ನುವುದು ನಾಮಪದವಲ್ಲ ಮತ್ತು ವ್ಯಕ್ತಿ ನಿರ್ದಿಷ್ಟವೂ ಅಲ್ಲ. ಇದನ್ನು ಆಡುಮಾತಿನಲ್ಲಿ ಬಳಸಲಾಗುತ್ತದೆ. ಆ ರೀತಿ ಒಂದು ಪರಿಸ್ಥಿತಿ ಮತ್ತು ಗುಣವನ್ನು ಸೂಚಿಸುವ ಪದವಾಗಿ ಬಳಸಿದ್ದೇನೆಯೇ ಹೊರತು ನಾನು ವೈಯಕ್ತಿಕವಾಗಿ ಬಳಸಿರುವುದಲ್ಲ ಎಂದು ಸ್ಪಷ್ಟನೆ ನೀಡುವ ಜೊತೆಗೆ ಆಗಾಗ್ಗೆ ತೀಕ್ಷ್ಣವಾಗಿ ಛೇಡಿಸಿದ್ದಾರೆ.

**ನಿಮ್ಮದು ಸರಿಯಾ...!:** ನೀವು ಇಷ್ಟೆಲ್ಲಾ ಬೋಧನೆ ಕೊಡುತ್ತೀರಲ್ಲ. ನಿಮ್ಮ ಕರ್ನಾಟಕ ಕಾಂಗ್ರೆಸ್‌ನ ಫೇಸ್‌ಬುಕ್‌ನಲ್ಲಿ 'ಪ್ರತಾಪ್ ಸಿಂಹ ಭಯೋತ್ಪಾದಕರಿಗೆ ಪಾಸ್ ಕೊಡುವುದರಲ್ಲಿ ಬ್ಯುಸಿ ಆಗಿದ್ದಾನೆ. ಅವನ ತಮ್ಮ ಮರ ಕದಿಯುವರಲ್ಲಿ ಬ್ಯುಸಿಯಾಗಿದ್ದಾನೆ', 'ಪ್ರತಾಪ್ ಸಿಂಹನ ತಮ್ಮ ಕಾಡುಗಳ್ಳ, ಪ್ರತಾಪ್ ಸಿಂಹ ನಾಡುಗಳ್ಳ' ಎಂದು ಹಾಕಿದ್ದೀರಿ. ಈ ಗೌರವವನ್ನು ನಿಮ್ಮ ಪೇಸ್‌ಬುಕ್‌ನಲ್ಲಿ ಕೊಟ್ಟು, ನೀವು ಗೌರವ ಕೊಡಬೇಕೆಂದು ಕೇಳುತ್ತೀರಿ. ಆದರೆ ನನಗೆ ವೈಯಕ್ತಿಕವಾಗಿ ನಿಮ್ಮ ಬಗ್ಗೆ ಗೌರವವಿದೆ. ನಿಮ್ಮಲ್ಲಿ ಪ್ರೀತಿಯೂ ಇದೆ. ಆದರೆ ಒಂದು ತಿಳಿದುಕೊಳ್ಳಿ, ಕಲ್ಲು ಬಿಸಾಡಿದರೆ ಹಣ್ಣು ಕೊಡಲು ನಾನು ಮಾವಿನ ಮರವಲ್ಲ. ನಾನು ಪ್ರತಾಪ್ ಸಿಂಹ, ಕಲ್ಲು ಬಿಸಾಡಿದರೆ ಕಲ್ಲನ್ನೇ ವಾಪಸ್ಸು ಬಿಸಾಡುವುದು. ವಿಚಾರ ಮತ್ತು ಅಭಿವೃದ್ಧಿ ಇಟ್ಟುಕೊಂಡು ನಾವು ಫೈಟ್ ಮಾಡೋಣ ಎಂದು ಕುಟುಕಿದ್ದಾರೆ.

ನಿನ್ನೆ ಹುಣಸೂರಿನಲ್ಲಿ ಹನುಮ ಜಯಂತಿ ನಡೆಯುತ್ತಿತ್ತು. ಈ ಸಂದರ್ಭದಲ್ಲಿ ಮಾಧ್ಯಮ



ಪ್ರತಾಪ್ ಸಿಂಹ ಸಿದ್ದರಾಮಯ್ಯ

ಮಿತ್ರರು ನನ್ನ ತಮ್ಮನ ವಿರುದ್ಧ ಇರುವ ಆರೋಪ ಸಂಬಂಧ ಸ್ಪಷ್ಟನೆ ಕೇಳಲು ಬಂದಿದ್ದರು. ಇದೇ ವೇಳೆ ಪ್ರತಿಯೊಂದರ ಬಗ್ಗೆ ಹೇಳಿ ಸ್ಪಷ್ಟನೆ ನೀಡಿದೆ. ಹಾಗೆಯೇ ಮುಂದುವರೆದು ಪ್ರತಾಪ್ ಸಿಂಹರನ್ನು ವೈಯಕ್ತಿಕವಾಗಿ ಟಾರ್ಗೆಟ್ ಮಾಡಲಾಗುತ್ತಿದೆಯೇ ಎಂದು ಕೇಳಿದ್ರು. ಆಗ ನಾನು, ಕರ್ನಾಟಕದಲ್ಲಿ 28 ಮಂದಿ ಎಂಪಿಗಳಿದ್ದಾರೆ. ಯಾರೊಬ್ಬರ ಬಗ್ಗೆ ಇಷ್ಟೊಂದು ಆಕ್ರಮಣ ನಡೆಯೊಲ್ಲ. ಆದರೆ ಕೊಡಗು ಮತ್ತು ಮೈಸೂರು ಎಂಪಿ ವಿರುದ್ಧ ದಾಳಿ ನಡೆಯುತ್ತಿದೆ. ಇಲ್ಲಿ ರಾಜಕೀಯ ದುರುದ್ದೇಶವಿದೆ ಎಂದಿದ್ದೆ ಎಂದು ಸಂಸದ ಪ್ರತಾಪ್ ಸಿಂಹ ಹೇಳಿದರು.

ಮುಖ್ಯಮಂತ್ರಿಗಳು ಮೈಸೂರಿನವರೇ ಆಗಿದ್ದಾರೆ. ಈ ಬಾರಿ ಚುನಾವಣೆಯಲ್ಲಿ ಸೋತರೆ ಅವರ ಕುರ್ಚಿ ಅಲುಗಾಡಲಿದೆ. ಹಾಗಾಗಿ ನನ್ನ ವಿರುದ್ಧ ವ್ಯವಸ್ಥಿತವಾದ ಪಿತೂರಿ ನಡೆಯುತ್ತಿದೆ. ನನ್ನನ್ನು ಟಾರ್ಗೆಟ್ ಮಾಡಿದ್ದಾರೆ ಎಂದು ಹೇಳುತ್ತಾ, ನಾನು ಕೂಡ ಎಲ್ಲರಂತೆ ಸೋಮಾರಿ ಸಿದ್ಧನ ತರ ಏನೂ ಕೆಲಸ ಮಾಡದೇ ಜಾತಿ ಜಾತಿ ಎತ್ತಿಕಟ್ಟಿ ಜಾತಿ ರಾಜಕಾರಣ ಮಾಡಬಹುದಿತ್ತು. ಆದರೆ ನಾನು ಅಭಿವೃದ್ಧಿ ರಾಜಕಾರಣ ಮಾಡಿದ್ದೇನೆ ಎಂದು ಹೇಳಿದ್ದೆ. ಈ ಸಂದರ್ಭದಲ್ಲಿ ಸೋಮಾರಿ ಸಿದ್ಧ ಪದ ಬಳಸಿದ ಹಿನ್ನೆಲೆಯಲ್ಲಿ ಕಾಂಗ್ರೆಸ್‌ನವರು ರಾತ್ರಿ 8 ಗಂಟೆಗೆ ಜ್ಞಾನೋದಯವಾಗಿ ಪ್ರತಿಭಟನೆ ಮಾಡಿ, ರಸ್ತೆ ತಡೆ ನಡೆಸಿದರು.

**ನನಗೆ ಗೌರವ ಕೊಡುವುದು ಗೊತ್ತು:** ಸೋಮಾರಿ ಸಿದ್ಧ ಎನ್ನವುದು ಸಿದ್ದರಾಮಯ್ಯನವರಿಗೆ ವೈಯಕ್ತಿಕವಾಗಿ ಮಾಡಿರುವ ದಾಳಿ. ಅವರ ಬಗ್ಗೆ ಅವಹೇಳನಕಾರಿಯಾಗಿ ಹೇಳಿದ್ದೇನೆ ಎಂದು ತಿರುಚುವ ಪ್ರಯತ್ನ ಮಾಡಿದ್ದಾರೆ. ಕಾಂಗ್ರೆಸ್‌ನವರಿಗೆ ಹೇಳಬಯಸುತ್ತೇನೆ. ವಿಶೇಷವಾಗಿ ಸಿದ್ದರಾಮಯ್ಯನವರೇ, ಸೋಮಾರಿ ಸಿದ್ದ ಎನ್ನುವುದು ನಾಮಪದವಲ್ಲ, ವ್ಯಕ್ತಿ ನಿರ್ದಿಷ್ಟವೂ ಅಲ್ಲ. ಆಡುಮಾತಿನಲ್ಲಿ ಸೋಮಾರಿ ಸಿದ್ದ ಎನ್ನುತ್ತೇವೆ. ಆ ರೀತಿಯಲ್ಲಿ ಪರಿಸ್ಥಿತಿ, ಗುಣವನ್ನು ಸೂಚಿಸುವ ಪದವಾಗಿ ಬಳಸಿದ್ದೇನೆಯೇ ಹೊರತು ವೈಯಕ್ತಿಕವಾಗಿ ಬಳಸಿಲ್ಲ. ಸಿದ್ದರಾಮಯ್ಯ ಸಾಹೇಬರಿಗೆ ನಾನು ಎಷ್ಟು ಗೌರವ ಕೊಡುತ್ತೇನೆ ಎಂಬುದು ಅವರಿಗೆ ವೈಯಕ್ತಿಕವಾಗಿ ಗೊತ್ತಿದೆ. ಅವರು ಮಾತ್ರವಲ್ಲ ಖರ್ಗೆ ಸಾಹೇಬರು ಸೇರಿದಂತೆ ಯಾರೇ ಹಿರಿಯರು ಸಿಕ್ಕರೂ ಕೊಡಗಿನ ಸಂಸ್ಕೃತಿಗೆ ಪೂರಕವಾಗಿ ಕಾಲಿಗೆ ನಮಸ್ಕರಿಸಿ ಗೌರವ ಕೊಡುತ್ತೇನೆ.

> ### 'ಮಿಸ್ಟರ್' ಅನ್ನಬೇಡಿ
>
> ❝ದೇಶದ 140 ಕೋಟಿ ಜನತೆಗೆ ಇರುವುದು ಒಬ್ಬರೇ ಪ್ರಧಾನಿ. ಅವರನ್ನು 'ಮಿಸ್ಟರ್' ಎಂದು ಕರೆಯಬೇಡಿ. ಅವರು ಸನ್ಮಾನ್ಯ ಪ್ರಧಾನಿಗಳು. 'ಸನ್ಮಾನ್ಯ ಪ್ರಧಾನಿಗಳೇ' ಎಂದು ಅತ್ಯಂತ ಸಭ್ಯವಾದ ಭಾಷೆಯಲ್ಲೇ ಅತ್ಯಂತ ಕಟುವಾದ ಪ್ರಶ್ನೆ ನಾವು ಕೇಳಬಹುದು. ನೀವು ಒಬ್ಬ ಮುಖ್ಯಮಂತ್ರಿಯಾಗಿ ನಿಮ್ಮ ಸೋಶಿಯಲ್ ಮೀಡಿಯಾದಲ್ಲಿ ಸಭ್ಯ ಭಾಷೆ ಬಳಸಿ. ಅದು ಬೇರೆಯವರಿಗೆ ಮೇಲ್ಪಂಕ್ತಿಯಾಗಲಿ. ಎಲ್ಲರಿಗೂ ಮೇಲ್ಪಂಕ್ತಿಯಾಗುವ ಭಾಷೆಯನ್ನು ನೀವು ಬಳಸುವ ಮೂಲಕ ಎಲ್ಲರಿಗೂ ಮಾದರಿಯಾಗಿ.
>
> –ಪ್ರತಾಪ್ ಸಿಂಹ, ಸಂಸದ

**ನಿಮಗೆ ಬಹುವಚನ ಸಂಬೋಧಿಸಿ ಅಭ್ಯಾಸವಿದೆಯೇ!:** ಸಾರ್, ನೀವು ಜೀವನದಲ್ಲಿ ಯಾರನ್ನಾದರೂ ಬಹುವಚನದಲ್ಲಿ ಸಂಬೋಧಿಸಿದ ಉದಾಹರಣೆ ಇದೆಯೇ ಹೇಳಿ? ಎಂದು ಸಿದ್ದರಾಮಯ್ಯರನ್ನು ಪ್ರಶ್ನಿಸಿದ ಪ್ರತಾಪ್ ಸಿಂಹ, ಮೈಸೂರು ಮಹಾರಾಜರು ಎಷ್ಟು ದೊಡ್ಡ ವ್ಯಕ್ತಿಗಳು ಎಂದು ಗೊತ್ತಿದ್ದೂ ಮೈಸೂರಿನ ದೇವರಾಜ ಮಾರುಕಟ್ಟೆ ವಿಚಾರದಲ್ಲಿ ಅವರ ಬಗ್ಗೆ ಏಕವಚನ ಬಳಸುತ್ತೀರಿ. ನಿನ್ನೆ ನೀವು ಒಂದು ಟ್ವೀಟ್ ಮಾಡಿದ್ದೀರಿ. 'ನಾವು ಐದು ಭರವಸೆ ಈಡೇರಿಸಿದ್ದೇವೆ. ಮಿಸ್ಟರ್ ಮೋದಿ 2 ಕೋಟಿ ಜಾಬ್ ಎಲ್ಲಿ ಹೋಯಿತು' ಎಂದು ಕೇಳಿದ್ದೀರಿ. ಅವರು 'ಮಿಸ್ಟರ್' ಅಲ್ಲ. ಈ ದೇಶದ ಗೌರವಯುತ ಪ್ರಧಾನಿಗಳು. ಅವರನ್ನು ಗೌರವಯುತವಾಗಿ ಸಂಬೋಧಿಸಬೇಕು. ಆದರೆ ನೀವು 'ಮಿಸ್ಟರ್' ಎಂದು ಕರೆದಿದ್ದೀರಿ. ನೀವು ಹಿಂದೆ ದೇವೇಗೌಡರನ್ನು ಯಾವತ್ತಾದರೂ ಬಹುವಚನದಲ್ಲಿ ಮಾತನಾಡಿಸಿದ್ದು ಇದೆಯೇ? ದೇವೇಗೌಡ ಅಂತೀರಿ. ಯಡಿಯೂರಪ್ಪನವರನ್ನು, ಯಡಿಯೂರಪ್ಪ ಅಂತೀರಿ. ಜೈಲಿಗೆ ಹೋಗಿ ಬಂದವನು ಎಂದು ತುಚ್ಛವಾಗಿಯೇ ಮಾತನಾಡಿದ್ದು, ನೀವು ಯಾರನ್ನು ಬಿಟ್ಟಿದ್ದೀರಿ. ಕಾಂಗ್ರೆಸ್ ಸೇರುವ ಮೊದಲು ಸೋನಿಯಾ ಗಾಂಧಿಯವರ ಬಗ್ಗೆಯೂ ಏಕವಚನ ಬಳಸಿದ್ದೀರಿ. ನಿಮ್ಮ ಸಾರ್ವಜನಿಕ ಭಾಷಣಗಳನ್ನು ತೆಗೆದು ನೋಡಿ.

**ಬಾಲಬುಡಕರಿಗೆ ಏನು ಬೇಕೋ ಮೊದಲು ಕೊಡಿ:** ನಾನು ನಿಮ್ಮನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಹೇಳಿದ್ದಲ್ಲ. ನಾನು ಕೂಡ ಸೋಮಾರಿ ಸಿದ್ದನಂತೆ ಸುಮ್ಮನೇ ಇರಬಹುದಿತ್ತು. ಆದರೆ ಅಭಿವೃದ್ಧಿ ರಾಜಕಾರಣ ಮಾಡಿದೆ. ಇದರಿಂದ ಬಳಹಷ್ಟು ಜನಕ್ಕೆ ಕಣ್ಣು ಕುಕ್ಕುತ್ತಿದೆ ಎಂದಷ್ಟೇ ಹೇಳಿದ್ದೇನೆ. ಇದರ ಹಿಂದೆ ಬೇರೆ ಯಾವ ಉದ್ದೇಶವೂ ಇಲ್ಲ. ಮೈಸೂರಿನಲ್ಲಿ ಬಹಳಷ್ಟು ಜನ ನಿಮ್ಮ ಬಾಲಬುಡಕರು ಹುಟ್ಟುಕೊಂಡಿದ್ದಾರೆ. ಸಾರ್ ದಯವಿಟ್ಟು 2024ರ ಲೋಕಸಭಾ ಚುನಾವಣೆಯಲ್ಲಿ ನನ್ನ ವಿರುದ್ಧ ಯಾರನ್ನು ಅಭ್ಯರ್ಥಿ ಮಾಡುತ್ತೀರೆಂದು ಈಗಲೇ ಘೋಷಣೆ ಮಾಡಿ, ಆಗ ಈ ಬೊಬ್ಬೆ ಕಡಿಮೆಯಾಗಲಿದೆ. ನಿಮ್ಮಲ್ಲಿ ಪ್ರಭಾವ ಬೀರಲು ಐದಾರು ಆಕ್ಷಾಂಕಿಗಳು ಹೊರಟಿದ್ದಾರೆ. ಮೊದಲು ಯಾರನ್ನಾದರೂ ಘೋಷಣೆ ಮಾಡಿ. ಆ ನಂತರ ಅವರೇ ಬಡಿದಾಡಿಕೊಳ್ಳುತ್ತಾರೆ. ನಿಮ್ಮಲ್ಲಿ ಗುರುತಿಸಿಕೊಳ್ಳಲು ನನ್ನನ್ನು ಆಗಾಗ್ಗೆ ಎಳೆದು ತಂದು ರಾಜಕೀಯವಾಗಿ ಬಳಸಿಕೊಂಡು ನನ್ನನ್ನು ಅವಹೇಳನ ಮಾಡುವ ಕೆಲಸ ಮಾಡುತ್ತಿದ್ದಾರೆ. ನಿಗಮ ಮಂಡಳಿ ಪದಾಧಿಕಾರಿಗಳನ್ನು ಘೋಷಣೆ ಮಾಡಿ ಇನ್ನೊಂದಷ್ಟು ಜನಕ್ಕೆ ಪುನರ್‌ವಸತಿ ಕಲ್ಪಿಸಿ. ಆಗ ಮೈಸೂರಿನಲ್ಲಿ ಹೀಗೆ ಬೊಬ್ಬೆ ಹಾಕುವುದು ನಿಲ್ಲುತ್ತದೆ ಎಂದು ಪ್ರತಾಪ್ ಸಿಂಹ ವ್ಯಂಗ್ಯವಾಡಿದ್ದಾರೆ.

ನಿಮ್ಮ ಪಕ್ಷದ ಸೋಶಿಯಲ್ ಮೀಡಿಯಾದಲ್ಲಿ ವೈಯಕ್ತಿಕವಾಗಿ ಅವಹೇಳನ ಮಾಡುವುದು, ಏಕವಚನ ಬಳಸುವುದನ್ನು ದಯವಿಟ್ಟು ನಿಲ್ಲಿಸಿ, ನಿಮ್ಮ ಮಂತ್ರಿ ಈಶ್ವರ್ ಖಂಡ್ರೆ ಅವರಿಗೇ ಹೇಳಿ ಅವರೇ ಹೋಗಿ ತನಿಖೆ ಮಾಡಲಿ (ಮರ ಕಡಿದ ಪ್ರಕರಣ) ಎಂದು ಸಂಸದರು ಹೇಳಿದ್ದಾರೆ.

## ಬಿಜೆಪಿ ಜಿಲ್ಲಾಧ್ಯಕ್ಷರ ನೇಮಕಕ್ಕೆ 60 ಜನರ ತಂಡ ರಚನೆ

ಬೆಂಗಳೂರು, ಡಿ.27– ಬಿಜೆಪಿ ನೂತನ ಜಿಲ್ಲಾ ಅಧ್ಯಕ್ಷರು, ಪದಾಧಿಕಾರಿಗಳ ನೇಮಕ ಸಂಬಂಧ 60 ಜನರ ತಂಡವು ಏಕಕಾಲದಲ್ಲಿ ರಾಜ್ಯಾದ್ಯಂತ ಪ್ರವಾಸ ಮಾಡಲಿದೆ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್ ತಿಳಿಸಿದರು.

ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಮಾತನಾಡಿದ ಅವರು, ಯತ್ನಾಳ್ ಅವರ ಹೇಳಿಕೆ ಕುರಿತು ಚರ್ಚೆ ಆಗಿದೆಯೇ ಎಂಬ ಪ್ರಶ್ನೆಗೆ ಉತ್ತರ ಕೊಟ್ಟ ಅವರು, ಪಕ್ಷದ ಇತ್ತೀಚಿನ ಎಲ್ಲ ಬೆಳವಣಿಗೆ ಕುರಿತು ಗಂಭೀರ ಚರ್ಚೆ ನಡೆದಿದೆ. ಸಭೆಯಲ್ಲಿ ನಡೆದ ಎಲ್ಲ ಚರ್ಚೆಗಳ ಕುರಿತು ಮಾಹಿತಿ ಕೊಡಲು ಸಾಧ್ಯವಿಲ್ಲ. ಆದರೆ ರಾಜ್ಯದಲ್ಲಿ ಪಕ್ಷದ ಘನತೆಗೆ ಚ್ಯುತಿ ಬರುವಂಥ ಚಟುವಟಿಕೆ, ಹೇಳಿಕೆಗಳನ್ನು ಪಕ್ಷ ಸಹಿಸುವುದಿಲ್ಲ. ಅದರ ಬಗ್ಗೆ ಚರ್ಚೆ ಆಗಿದೆ. ಕೇಂದ್ರದ ನಾಯಕರು ಸೂಕ್ತ ಸಂದರ್ಭದಲ್ಲಿ ಸೂಕ್ತ ನಿರ್ಧಾರವನ್ನು ತೆಗೆದುಕೊಳ್ಳಲಿದ್ದಾರೆ ಎಂದು ತಿಳಿಸಿದರು.

2024ರ ಲೋಕಸಭಾ ಚುನಾವಣೆವರೆಗೆ ಯಾವೊಬ್ಬ ಪದಾಧಿಕಾರಿಯೂ ವಿಶ್ರಾಂತಿ ಪಡೆಯುವಂತಿಲ್ಲ. ಲೋಕಸಭಾ ಚುನಾವಣೆ ಗೆಲುವಿನೊಂದಿಗೆ ಮನೆಗೆ ವಾಪಸ್ ಬರುವಂತೆ ಅಧ್ಯಕ್ಷರು ತಿಳಿಸಿದ್ದಾರೆ. ಅಲ್ಲಿವರೆಗೆ ನಿರಂತರ ಪ್ರವಾಸ ಮಾಡಿ ಪಕ್ಷ ಸಂಘಟಿಸಲು ಸೂಚಿಸಿದ್ದಾರೆ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್ ಹೇಳಿದರು.



ಭಾರತೀಯ ಜನತಾ ಪಾರ್ಟಿ ರಾಜ್ಯ ಕಚೇರಿ ಬೆಂಗಳೂರಿನ ಜಗನ್ನಾಥ ಭವನದಲ್ಲಿ ಬುಧವಾರ ನಡೆದ ನೂತನ ರಾಜ್ಯ ಪದಾಧಿಕಾರಿಗಳ ಸಭೆಯಲ್ಲಿ ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಉಪಾಧ್ಯಕ್ಷರಾಗಿ ಮೈಸೂರಿನ ಎಂ.ರಾಜೇಂದ್ರ, ಹಿಂದುಳಿದ ವರ್ಗದ ಅಧ್ಯಕ್ಷರಾಗಿ ಆರ್.ರಘು ಕೌಟಿಲ್ಯ ಅಲ್ಪಸಂಖ್ಯಾತರ ಮೋರ್ಚಾ ರಾಜ್ಯಾಧ್ಯಕ್ಷರಾಗಿ ಡಾ.ಅನಿಲ್ ಥಾಮಸ್, ರಾಜ್ಯ ಉಪಾಧ್ಯಕ್ಷರಾಗಿ ಮಾಜಿ ಶಾಸಕ ಎನ್.ಮಹೇಶ್, ರಾಜ್ಯ ಕಾರ್ಯದರ್ಶಿಯಾಗಿ ಡಾ.ಲಕ್ಷ್ಮಿ ಅಶ್ವಿನ್‌ಗೌಡ ಅವರನ್ನು ನೇಮಕ ಮಾಡಿ ಅಧಿಕೃತ ನೇಮಕಾತಿ ಪತ್ರ ನೀಡಿದರು.

## ಕಾಂಗ್ರೆಸ್ ಯುವ ನಾಯಕ ರಾಕೇಶ್ ಪಾಪಣ್ಣ ಅವರಿಗೆ ಹುಟ್ಟುಹಬ್ಬದ ಸಂಭ್ರಮ



ಬುಧವಾರ ಹುಟ್ಟಹಬ್ಬ ಆಚರಿಸಿಕೊಂಡ ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ನಾಯಕ ಹಾಗೂ ಜಿಪಂ ಮಾಜಿ ಸದಸ್ಯ ರಾಕೇಶ್ ಪಾಪಣ್ಣ ಅವರನ್ನು ಬೋಗಾದಿ ಕಾಂಗ್ರೆಸ್ ಮುಖಂಡ ತ್ಯಾಗರಾಜ್, ಹೊನ್ನಗಿರಿ ಗೌಡ, ಮಂಜುನಾಥ್, ಸೋಮಶೇಖರ್, ರವಿಕುಮಾರ್, ಪ್ರೇಮಕುಮಾರ್, ತಿಲಕ್, ಚಿದು, ರಾಕಿ, ಆನಂದ, ಸ್ವಾಮಿಗೌಡ, ಭಾಸ್ಕರ್, ಬೋಗಾದಿ ಗ್ರಾಮಸ್ಥರು ಹಾಗೂ ಚಾಮುಂಡೇಶ್ವರಿ ಕ್ಷೇತ್ರದ ಕಾರ್ಯಕರ್ತರು, ಮುಖಂಡರು, ಅಭಿಮಾನಿಗಳು, ಹಿತೈಷಿಗಳು ಅಭಿನಂದಿಸಿ, ಶುಭಾಶಯ ಕೋರಿದರು.

## ಅಗ್ನಿಶಾಮಕ ಅಧಿಕಾರಿಗಳಿಗೆ ಮುಂಬಡ್ತಿ; ವರ್ಗಾವಣೆ

ಮೈಸೂರು, ಡಿ.27(ಎಸ್‌ಪಿಎನ್)– ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಲ್ಲಿನ ಅಗ್ನಿಶಾಮಕ ಠಾಣಾಧಿಕಾರಿ ಹುದ್ದೆಯಿಂದ, ಜಿಲ್ಲಾ ಅಗ್ನಿಶಾಮಕ ದಳದ ಅಧಿಕಾರಿ ಹುದ್ದೆಗೆ 32ರಡಿಯಲ್ಲಿ ಮೈಸೂರು, ಕೊಡಗು ಜಿಲ್ಲೆ ಸೇರಿದಂತೆ ರಾಜ್ಯ ಇತರೆ ಜಿಲ್ಲೆಗಳಿಗೆ ಮುಂಬಡ್ತಿ ನೀಡಿ, ವರ್ಗಾವಣೆ ಮಾಡಿ ರಾಜ್ಯ ಸರ್ಕಾರ ಆದೇಶಿಸಿದೆ.

ಅಗ್ನಿಶಾಮಕ ಠಾಣಾಧಿಕಾರಿಗಳಿಗೆ ಇಲಾಖೆ (ವೃಂದ ಮತ್ತು ನೇಮಕಾತಿ) ನಿಯಮಗಳು 2013ರ ಅನ್ವಯ ಸಂಯುಕ್ತ ಜೇಷ್ಠತೆ ಮತ್ತು ಮೀಸಲಾತಿಯನ್ನು ಪರಿಗಣಿಸಿ, 5 ವರ್ಷ ಅರ್ಹದಾಯಕ ಸೇವೆ ಸಲ್ಲಿಸಿರುವ ಹಾಗೂ ಇಲಾಖೆಯು ನಿಗದಿಪಡಿಸಿರುವ ಎಲ್ಲಾ ಪರೀಕ್ಷೆ ಹಾಗೂ ತರಬೇತಿಯನ್ನು ಪೂರ್ಣಗೊಳಿಸಿರುವ ಅಗ್ನಿಶಾಮಕ ಠಾಣಾಧಿಕಾರಿಗಳಿಗೆ ಕರ್ನಾಟಕ ಸರ್ಕಾರಿ ಸೇವಾ ನಿಯಮಗಳು 1958ರ ನಿಯಮ 32ರಡಿಯಲ್ಲಿ ಕರ್ತವ್ಯ ನಿರ್ವಹಿಸಲು ಅಗ್ನಿಶಾಮಕ ಠಾಣಾಧಿಕಾರಿ ಹುದ್ದೆಯಿಂದ, ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಹುದ್ದೆಗೆ ಪದೋನ್ನತಿ ನೀಡಿ, ಸ್ಥಳ ನಿಯಕ್ತಿಗೊಳಿಸಿದೆ. ಹೆಚ್.ಡಿ.ಕೋಟೆ ತಾಲೂಕಿನ ಅಗ್ನಿಶಾಮಕ ಠಾಣಾಧಿಕಾರಿ ಕೆ.ಸಿ.ರಮೇಶ ಅವರನ್ನು ಬನ್ನಿಮಂಟಪ ಅಗ್ನಿಶಾಮಕ ಠಾಣೆಗೆ, ತಿ.ನರಸೀಪುರ ಅಗ್ನಿಶಾಮಕ ಠಾಣೆಯ ಜಿ.ಸಿ.ಪ್ರದೀಪ್ ಅವರನ್ನು ರಾಜಾಜಿನಗರ ಠಾಣೆಗೆ, ನಾಗಮಂಗಲ ಅಗ್ನಿಶಾಮಕ ಠಾಣೆಯ ಕೆ.ಜಿ.ರಾಜೇಶ ಅವರನ್ನು ಮಡಿಕೇರಿ ಠಾಣೆಗೆ ವರ್ಗಾವಣೆಗೊಂಡಿದ್ದು, ಒಟ್ಟು 14 ಮಂದಿಗೆ ಮುಂಬಡ್ತಿ ನೀಡಿ, ವರ್ಗಾವಣೆಗೊಳಿಸಿ ಆದೇಶಿಸಿದೆ ಎಂದು ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು ಮಹಾನಿರ್ದೇಶಕ ಪರವಾಗಿ ನಿರ್ದೇಶಕ ಶಿವಶಂಕರ ಆದೇಶಿಸಿದ್ದಾರೆ.

## ರೈಲ್ವೆ ನಿಲ್ದಾಣಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಜೊತೆ ಸೆಲ್ಫಿ ಸ್ಪಾಟ್

ನವದೆಹಲಿ: ಹೆಚ್ಚುತ್ತಿರುವ ಪ್ರಧಾನಿ ಮೋದಿ ಅವರ ಜನಪ್ರಿಯತೆಯನ್ನು ಇನ್ನಷ್ಟು ಹೆಚ್ಚಿಸುವ ನಿಟ್ಟಿನಲ್ಲಿ ದೇಶಾದ್ಯಂತ ರೈಲ್ವೆ ನಿಲ್ದಾಣಗಳಲ್ಲಿ ಸೆಲ್ಫಿ ಬೂತ್‌ಗಳನ್ನು ಸ್ಥಾಪಿಸಲಾಗುತ್ತಿದೆ. ದೇಶಾದ್ಯಂತ ಈ 3ಡಿ ಸೆಲ್ಫಿ ಬೂತ್‌ಗಳು ಪ್ರಯಾಣಿಕರಿಗೆ ಮೋದಿ ಕಟೌಟ್ ಜೊತೆ ಸೆಲ್ಫಿ ತೆಗೆದುಕೊಳ್ಳುವುದಕ್ಕೆ ಅನುವು ಮಾಡಿಕೊಡಲಿವೆ.

ಈ ಬಗ್ಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪ್ರತಿಕ್ರಿಯೆ ನೀಡಿದ್ದು, ಇದು ಚುನಾವಣೆಗೆ ಅಗ್ಗದ ಪ್ರಚಾರ ಎಂದಿದ್ದಾರೆ.





ಈ ಹಿಂದೆ ಮೋದಿ ಅವರ ಕಟೌಟ್ ಜೊತೆ ಸೆಲ್ಫಿ ಕ್ಲಿಕ್ಕಿಸಿಕೊಳ್ಳುವುದಕ್ಕೆ 822 ಸ್ಥಳಗಳನ್ನು ಸ್ಥಾಪಿಸುವುದಕ್ಕೆ ಸೇನಾ ಪಡೆಗಳಿಗೆ ಸೂಚಿಸುವ ಮೂಲಕ ನಮ್ಮ ಯೋಧರ ತ್ಯಾಗ, ಬಲಿದಾನಗಳನ್ನು ಬಳಸಿಕೊಳ್ಳಲಾಗಿತ್ತು.

**ಸ್ವ-ಪ್ರಚಾರದ ಗೀಳಿಗೆ ಮಿತಿಯೇ ಇಲ್ವಾ?: ಖರ್ಗೆ**

ಈಗ ರಾಜ್ಯಗಳಿಗೆ ಬರ ಹಾಗೂ ನೆರೆ ಪರಿಹಾರ ನೀಡದೆ ವಿಪಕ್ಷಗಳಿರುವ ರಾಜ್ಯಗಳಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ ನಿಧಿಗಳನ್ನು ಬಿಡುಗಡೆ ಮಾಡದೇ ಈ ಅಗ್ಗದ ಪ್ರಚಾರಕ್ಕೆ ಮುಂದಾಗಿದ್ದಾರೆ ಎಂದು ಖರ್ಗೆ ಅಸಮಾಧಾನ ಹೊರಹಾಕಿದ್ದಾರೆ.

ದೆಹಲಿ ರೈಲ್ವೆ ಮಂಡಳಿ 19 ವಲಯ ರೈಲ್ವೆಗಳ ಜನರಲ್ ಮ್ಯಾನೇಜರ್‌ಗಳಿಗೆ ನಿಲ್ದಾಣಗಳಲ್ಲಿ ಸೆಲ್ಫಿ ಬೂತ್‌ಗಳನ್ನು ಸ್ಥಾಪಿಸಲು ಸೂಚಿಸಲಾಗಿದೆ ಎಂದು ವರದಿಗಳಿವೆ. ಫೈಬರ್, ಕ್ಲೇ ಅಥವಾ ಪ್ಲಾಸ್ಟರ್ ಆಫ್ ಪ್ಯಾರಿಸ್‌ನಂತಹ ವಸ್ತುಗಳಿಂದ ರಚಿಸಲಾದ 3ಡಿ ಶಿಲ್ಪಗಳನ್ನು ಪ್ರದರ್ಶಿಸಲು ಬಾಳಿಕೆ ಬರುವ 3ಡಿ ಫೈಬರ್ ಶಿಲ್ಪಗಳು, ಅಕ್ರಿಲಿಕ್ ಬೋರ್ಡ್‌ಗಳು, ಗಾಜು ಮತ್ತು ಸಂಯೋಜಿತ ಬೆಳಕಿನೊಂದಿಗೆ ಇವುಗಳನ್ನು ವಿನ್ಯಾಸಗೊಳಿಸಬೇಕಿತ್ತು. ಸ್ಥಾಪನೆಗಳು ಸ್ಕಿಲ್ ಇಂಡಿಯಾ, ಉಜ್ವಲ ಯೋಜನೆ, ಚಂದ್ರಯಾನ ಮಿಷನ್‌ನಂತಹ ಕೇಂದ್ರೀಯ ಉಪಕ್ರಮಗಳನ್ನು ಉತ್ತೇಜಿಸುತ್ತವೆ.

## ಮೆಕ್ಕಾ ಯಾತ್ರೆ ನಡೆಸಿದ 18 ಲಕ್ಷ ಭಾರತೀಯರು; ಜಗತ್ತಿನಲ್ಲೇ 3ನೇ ಸ್ಥಾನ

ನವದೆಹಲಿ, ಡಿ.27–ಪ್ರಸಕ್ತ ವರ್ಷದಲ್ಲಿ 18 ಲಕ್ಷ ಭಾರತೀಯ ಮುಸ್ಲಿಮರು ಪವಿತ್ರ ಮೆಕ್ಕಾ ಯಾತ್ರೆ ಕೈಗೊಂಡಿದ್ದು, ಇದು ಜಾಗತಿಕ ಮಟ್ಟದಲ್ಲೇ 3ನೇ ಅತಿ ಹೆಚ್ಚಿನ ಸಂಖ್ಯೆಯಾಗಿದೆ ಎಂದು ಸೌದಿ ಅರೇಬಿಯಾ ಸರ್ಕಾರದ ಅಧಿಕಾರಿಗಳು ಬುಧವಾರ ಹೇಳಿದ್ದಾರೆ.

ಉಮ್ರಾ (ಮೆಕ್ಕಾ ಯಾತ್ರೆ) ವರ್ಷದ ಯಾವುದೇ ಸಮಯದಲ್ಲಿ ಕೈಗೊಳ್ಳಬಹುದಾಗಿದೆ. ಜಗತ್ತಿನಲ್ಲಿ ಅತಿ ಹೆಚ್ಚು ಸಂಖ್ಯೆಯ ಯಾತ್ರಿಗಳು ಭೇಟಿ ನೀಡಿದ ಮೊದಲ ಎರಡು ದೇಶಗಳ ಹೆಸರನ್ನು ಅಧಿಕಾರಿಗಳು ಬಹಿರಂಗಪಡಿಸಿಲ್ಲ.

ಸೌದಿ ಅರೇಬಿಯಾದ ಹಜ್ ಹಾಗೂ ಉಮ್ರಾದ ಸಚಿವ ಡಾ.ತೌಫಿಕ್ ಬಿನ್ ಫರ್‍ಹಾನ್ ಅಲ್ ರಾಬಿಯಾ ಅವರು ಡಿ.4ರಂದು ಭಾರತಕ್ಕೆ ಭೇಟಿ ನೀಡಿದ್ದರು. ಏಕೀಕೃತ ಸರ್ಕಾರಿ ವೇದಿಕೆ ಆಯೋಜಿಸಿದ್ದ 'ನುಸುಕ್'ನಲ್ಲಿ ಪಾಲ್ಗೊಂಡಿದ್ದರು.

ಪವಿತ್ರ ಯಾತ್ರೆ ಕೈಗೊಳ್ಳುವವರಿಗೆ ಸೌದಿ ಸರ್ಕಾರ ನೀಡುತ್ತಿರುವ ಸೌಕರ್ಯಗಳ ಕುರಿತು ಅವರು ಆ ಕಾರ್ಯಕ್ರಮದಲ್ಲಿ ತಿಳಿಸಿದ್ದರು. ಉಮ್ರಾ ಮತ್ತು ಪ್ರವಾದಿ ಅವರ ಮಸೀದಿಗೆ ಭೇಟಿ ನೀಡುವವರ ಅನುಕೂಲಕ್ಕಾಗಿ ಎಲೆಕ್ಟ್ರಾನಿಕ್ ವೀಸಾ ಮತ್ತು ಸ್ವಯಂಚಾಲಿತ ಪ್ರವೇಶ ಸೌಲಭ್ಯಗಳನ್ನು ಹೊಂದಿರುವ ನುಸುಕ್ ಕುರಿತು ಡಾ. ತೌಫಿಕ್ ವಿವರಿಸಿದ್ದರು.

ಇದಾದ ಬಳಿಕ ಉಮ್ರಾ ಯಾತ್ರೆ ಕೈಗೊಳ್ಳುವವರಿಗೆ ನೆರವಾಗುವ ಖಾಸಗಿ ಕಂಪನಿಗಳಿಗೆ ತರಬೇತಿ ಹಾಗೂ ಯಾತ್ರಿಗಳ ಸಂಪರ್ಕ ಹೊಂದುವ ಸೌಲಭ್ಯಗಳ ಕುರಿತು ತರಬೇತಿಯನ್ನೂ ನೀಡಲಾಗಿತ್ತು.

## ನಾಟ್ಯಾಚಾರ್ಯ ವಿಷ್ಣುದಾಸರ ಸಂಸ್ಮರಣಾರ್ಥ ನೃತ್ಯೋತ್ಸವ



ನಾಟ್ಯಾಚಾರ್ಯ ಎಂ.ವಿಷ್ಣುದಾಸ್ ಸಂಸ್ಮರಣಾರ್ಥ ನಡೆದ 32ನೇ ನೃತ್ಯೋತ್ಸವ ಕಾರ್ಯಕ್ರಮದಲ್ಲಿ ಬೆಂಗಳೂರು ಶ್ರೀ ಮಾತೃಕಾ ಕಲ್ಚರಲ್ ಟ್ರಸ್ಟ್‌ನ ವಿದುಷಿ ವಿದ್ಯಾ ರವಿಶಂಕರ್ ಅವರಿಗೆ ನೃತ್ಯ ಕಲಾ ಸಿಂಧು ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು, ಡಿ.27(ಎಸ್‌ಪಿಎನ್)– ಮೈಸೂರು ಕುವೆಂಪುನಗರದ ಗಾನ ಭಾರತಿ ಸಭಾಂಗಣದಲ್ಲಿ ಭಾರತೀಯ ನೃತ್ಯಕಲಾ ಪರಿಷತ್ ವತಿಯಿಂದ ನಾಟ್ಯಾಚಾರ್ಯ ಎಂ.ವಿಷ್ಣುದಾಸ್ ಸಂಸ್ಮರಣಾರ್ಥ ನಡೆದ 32ನೇ ನೃತ್ಯೋತ್ಸವ ಕಾರ್ಯಕ್ರಮವನ್ನು ಹಿರಿಯ ಕಲಾವಿದೆ ಹಾಗೂ ನೃತ್ಯಗಿರಿ ಕಲೆಗಳ ಸಂಶೋಧನಾ ಕೇಂದ್ರದ ವಿದುಷಿ ಡಾ.ಕೃಪಾ ಫಡ್ಕೆ ಬುಧವಾರ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಮೈಸೂರಿನ ನೃತ್ಯ ಕಲಾಕ್ಷೇತ್ರದಲ್ಲಿ ಶಾಸ್ತ್ರೀಯ ನೃತ್ಯಕಲೆಯು ಉಳಿಸಿ, ಬೆಳೆಸುವವರ ಸಾಲಿನಲ್ಲಿ ನಾಟ್ಯಾಚಾರ್ಯ ಎಂ. ವಿಷ್ಣುದಾಸ್ ಅವರ ಕೊಡುಗೆ ಅಪಾರ. ಮೂಲತಃ ಇವರು ಕಾಸರಗೋಡು ತಾಲುಕಿನ ಮುಟ್ಟತ್ತೋಡಿಯ ಮಧೂರಂಬೈಲ್ ಎಂಬ ಹಳ್ಳಿಯಲ್ಲಿ 1927ರಲ್ಲಿ ಜನಿಸಿದರು. ತಮ್ಮ ವಯಸ್ಸಿನಲ್ಲಿ ಮೈಸೂರಿಗೆ ಆಗಮಿಸಿ ಮೈಸೂರಿನ ಹಿರಿಯ ನಾಟ್ಯಾಚಾರ್ಯ ಕೆ.ಎಸ್.ರಾಜಗೋಪಾಲ್ ಹಾಗೂ ನಾಟ್ಯ ವಿದುಷಿ ಪುಟ್ಟಕ್ಕಯ್ಯ ಅವರಿಂದ ಸುಮಾರು 8 ವರ್ಷಗಳ ನೃತ್ಯ ತರಬೇತಿ ಪಡೆದು. ಇದರ ಜೊತೆ ರಾಜಶೇಖರಯ್ಯ ಅವರಿಂದ ಶಾಸ್ತ್ರೀಯ ಸಂಗೀತಾ ಭ್ಯಾಸವನ್ನು ಕಲಿತು ಉತ್ತಮ ಗಾಯಕರಾಗಿ ಹೆಸರು ಮಾಡಿದ್ದರು. ಅಲ್ಲದೆ ನಟುವಾಂಗ ಕಲಾವಿದರಾಗಿ ಹೆಸರುವಾಸಿಯಾಗಿದ್ದರು. ನೃತ್ಯ ಕಲಾವಿದರನ್ನೆಲ್ಲಾ ಸಂಘಟಿಸಿ ಭಾರತೀಯ ನೃತ್ಯಕಲಾ ಪರಿಷತ್ ಅನ್ನು 1977ರಲ್ಲಿ ಸ್ಥಾಪಿಸಿ, 15 ವರ್ಷಗಳ ಇದರ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ ಎಂದು ತಿಳಿಸಿದರು.

ಅಲ್ಲದೆ, ನೃತ್ಯ, ಸಂಗೀತಾಭ್ಯಾಸದಲ್ಲಿ ತೊಡಗಿಸಿಕೊಂಡ ಕಲಾವಿದರಿಗೆ ಆಯಸ್ಸು ವೃದ್ಧಿಸುತ್ತದೆ ಎಂಬುದಕ್ಕೆ ವಿದ್ವಾನ್ ಎಂ. ವಿಷ್ಣುದಾಸ್ ಅವರ ಜೀವನವೇ ಸಾಕ್ಷಿ. ಅಲ್ಲದೆ, ಹಲವು ಕಲಾವಿದರು ತಮ್ಮ ಜೀವಿತಾವಧಿಯವರೆಗೆ ಕಲಾ ಸೇವೆ ಮುಡಿಪ್ಪಿಟ್ಟಿರುವ ಸಾಧಕರನ್ನು ನಾವು ಇಂದಿಗೂ ಕಾಣಬಹುದು ಎಂದರು.

ಈ ವೇಳೆ ಮೈಸೂರು ನೃತ್ಯ ವಿದ್ಯಾಪೀಠ ವಿದುಷಿ ಸಿ.ಎನ್.ಅನಿತಾ ಶಿಷ್ಯವೃಂದ, ಬೆಂಗಳೂರಿನ ಶ್ರೀ ಮಾತೃಕಾ ಕಲ್ಚರಲ್ ಟ್ರಸ್ಟ್‌ನ ವಿದುಷಿ ವಿದ್ಯಾಶಂಕರ್ ಅವರ ಶಿಷ್ಯವೃಂದ, ತುಮಕೂರಿನ ಶ್ರೀ ಸಾಯಿ ರಾಮನ್ ನೃತ್ಯ ಕೇಂದ್ರದ ವಿದ್ವಾನ್ ಟಿ.ಎಸ್.ಸಾಗ್ ಮತ್ತು ಶಿಷ್ಯವೃಂದ, ಭಾರತೀಯ ನೃತ್ಯಕಲಾ ಪರಿಷತ್ ವತಿಯಿಂದ ಸೆಪ್ಟೆಂಬರ್‌ನಲ್ಲಿ ನಡೆಸಿದ ರಾಷ್ಟ್ರೀಯ ನೃತ್ಯ ಕಲಾ ಸ್ಪರ್ಧೆಯಲ್ಲಿ ಬಹುಮಾನ ಗಳಿಸಿದ ತಂಡ, ಬೆಂಗಳೂರಿನ ಶ್ರೀ ಮಾರಿಕಾಂಬ ನೃತ್ಯಕಲಾ ಕೇಂದ್ರದ ವಿದ್ಯಾರ್ಥಿ ತನ್ವಿ ಪ್ರಕಾಶ್ ಅವರಿಂದ, ಆಚಾರ್ಯ ಕಣ್ಣನ್ ರಾಮಾನುಜಂ ಅವರ ಶಿಷ್ಯೆವೃಂದ ಮೇಘನಾ ಭಟ್, ವಿದ್ವಾನ್ ಆರ್.ಪವನ್ ಕುಮಾರ್ , ಮೈಸೂರಿನ ಶ್ರೀ ದುರ್ಗಾ ನೃತ್ಯ ಅಕಾಡೆಮಿಯ ವಿದುಷಿ ವಿದ್ಯಾರಾವ್ ಭರತನಾಟ್ಯ ಪ್ರದರ್ಶನ ಪ್ರೇಕ್ಷಕರ ಮನ ಸೆಳೆಯಿತು. ಈ ವೇಳೆ ಬೆಂಗಳೂರು ಶ್ರೀ ಮಾತೃಕಾ ಕಲ್ಚರಲ್ ಟ್ರಸ್ಟ್‌ನ ವಿದುಷಿ ವಿದ್ಯಾರವಿಶಂಕರ್ ಅವರಿಗೆ ನೃತ್ಯ ಕಲಾ ಸಿಂಧು ಪ್ರಶಸ್ತಿ ಪ್ರದಾನ ಮಾಡಲಾಯಿತು. ವೇದಿಕೆಯಲ್ಲಿ ವಿದುಷಿ ಉಷಾ ವೇಣುಗೋಪಾಲ್, ವಿದುಷಿ ವಿ.ಭಾವನಾ, ವಿದುಷಿ ಕುಮುದಿನಿ ಅಚ್ಚಿ ಉಪಸ್ಥಿತರಿದ್ದರು.

## ನಕ್ಕರೆ ಅದೇ ಸ್ವರ್ಗ

(ಕಮಲಿಗೆ ಹೆರಿಗೆಯಾಗಿತ್ತು. ಸ್ವಲ್ಪ ಹೊತ್ತಿಗೆ ಆಕೆ ಕಣ್ಣು ತೆರೆದು ಗಾಬರಿಯಿಂದ ಹಾಸಿಗೆಯನ್ನು ತಡವುತ್ತಾ ಹುಡುಕಲು ಆರಂಭಿಸಿದಳು.)

ನರ್ಸ್ : "ಗಾಬರಿ ಆಗಬೇಡಿ. ತಗೊಳ್ಳಿ ನಿಮ್ಮ ಮಗು ಇಲ್ಲಿದೆ."

ಕಮಲಿ : "ಅಯ್ಯೋ, ನಾನು ಹುಡುಕುತ್ತಿರುವುದು ಮಗು ಅಲ್ಲ. ನನ್ನ ಮೊಬೈಲ್, ಅದು ಎಲ್ಲಿ ಹೋಯ್ತು?!"

ಮೈಸೂರು ಮಿತ್ರ

ಗುರುವಾರ, 28 ಡಿಸೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

### ಅಮೃತವಾಹಿನಿ..........

ಮರಗಳಂತೆ ಎತ್ತರದ ವ್ಯಕ್ತಿತ್ವದವರಾಗಿ. ಪರ್ವತಗಳಂತೆ ದೃಢವಾಗಿ ಜೀವಿಸಿ. ವಸಂತದ ತಂಗಾಳಿಯಂತೆ ಸಭ್ಯರಾಗಿರಿ. –ನುಡಿಮುತ್ತು

**ವೇದ ಸುಳ್ಳಾದರೂ ಗಾದೆ ಸುಳ್ಳಾಗದು** { ಮರಿ ಮಾಡುವ ಮೊದಲೇ ಮೊಟ್ಟೆಗಳನ್ನು ಎಣಿಸಬೇಡ.

## ನಿಮ್ಮ ಪತ್ರಗಳು

### ಕನ್ನಡಿಗರು ಜಾಗೃತರಾಗಬೇಕು

ಮಾನ್ಯರೆ,

ಬೆಂಗಳೂರಿನಲ್ಲಿ ಅನ್ಯ ಭಾಷೆಗಳ ಹಾವಳಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಕನ್ನಡವೇ ಮಾಯವಾಗುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇಂತಹ ಸಂದರ್ಭದಲ್ಲಿ ಎಚ್ಚೆತ್ತುಕೊಂಡ ಕರವೇ ಕಾರ್ಯಕರ್ತರು ಬೆಂಗಳೂರಿನ ವಾಣಿಜ್ಯ ಮಳಿಗೆ, ಹೋಟೆಲ್‌ಗಳು, ಕಂಪನಿಗಳು, ಇನ್ನಿತರ ಅಂಗಡಿ ಮುಂಗಟ್ಟುಗಳ ಮೇಲೆ ದಾಳಿ ಮಾಡಿ ಬೇರೆ ಭಾಷೆಗಳಲ್ಲಿರುವ ನಾಮಫಲಕಗಳು, ಬ್ಯಾನರ್‌ಗಳನ್ನು ಹರಿದು ಹಾಕಿ ಮಸಿಯನ್ನು ಬಳಿಯುತ್ತಿರುವುದು ಶ್ಲಾಘನೀಯ ಕಾರ್ಯವಾಗಿದೆ. ಕನ್ನಡ ನಾಡಿನಲ್ಲಿ ಕನ್ನಡ ಭಾಷೆಗೆ ಮಾನ್ಯತೆ ಇಲ್ಲದಂತಾಗಿದೆ. ಬೆಂಗಳೂರಿನಲ್ಲಂತೂ ಕನ್ನಡದಲ್ಲಿ ಶೇಕಡಾ 60 ಕನ್ನಡ ನಾಮಫಲಕಗಳಿರಬೇಕೆಂಬ ನಿಯಮವಿದ್ದರೂ ಅದನ್ನು ಗಾಳಿಗೆ ತೂರಿ ಇತರೇ ಭಾಷೆಗಳ ನಾಮಫಲಕಗಳು ಎಗ್ಗಿಲ್ಲದೆ ರಾರಾಜಿಸುತ್ತಿವೆ. ಕಡ್ಡಾಯವಾಗಿ ಕನ್ನಡ ನಾಮಫಲಕ ಇರಲೇಬೇಕು ಎಂದು ಆಗ್ರಹಿಸಿ ಪ್ರತಿಭಟನಾ ಮೆರವಣಿಗೆ ನಡೆಸಿ ಆಕ್ರೋಶವನ್ನು ವ್ಯಕ್ತಪಡಿಸುತ್ತಿದ್ದಾರೆ. ಬೆಂಗಳೂರಿನಲ್ಲಿ ಕನ್ನಡಿಗರಿಗೆ ಗೌರವ ಇಲ್ಲದಂತಾಗಿದೆ. ಹಿಂದಿ, ತಮಿಳು, ಇಂಗ್ಲೀಷ್ ಇನ್ನಿತರ ಭಾಷಿಗರ ದಬ್ಬಾಳಿಕೆ, ಅರ್ಭಟವೇ ಹೆಚ್ಚಾಗಿದೆ. ಅನ್ನ ತಿನ್ನೋದು ಕನ್ನಡದ್ದು, ಭಾಷೆ ಮಾತ್ರ ಬೇರೆಯದು. 'ಕನ್ನಡ ಎಂದರೆ ಎನ್ನಡ ಎನ್ನುವ ಪರಿಸ್ಥಿತಿ' ಪ್ರಸ್ತುತ ದಿನಗಳಲ್ಲಿ ಉಂಟಾಗಿದೆ. ಇದೇ ರೀತಿ ಮುಂದುವರಿದರೆ ಮುಂದೊಂದು ದಿನ ಬೆಂಗಳೂರಿನಲ್ಲಿ ಕನ್ನಡ ಸಂಪೂರ್ಣವಾಗಿ ಮಾಯವಾಗಿ ಅನ್ಯ ಭಾಷಿಕರ ಕೈವಶವಾಗುವುದಂತೂ ನಿಜ. ಇವೆಲ್ಲವನ್ನೂ ಗಮನಿಸುತ್ತಾ ಏನೂ ಅರಿವಿಲ್ಲದಂತೆ ಕರ್ನಾಟಕ ಸರ್ಕಾರ ಮತ್ತು ಬೆಂಗಳೂರು ಮಹಾನಗರ ಪಾಲಿಕೆಯು ಕಣ್ಮುಚ್ಚಿ ಕುಳಿತಿರುವುದಕ್ಕೆ ನಾಚಿಕೆಯಾಗಬೇಕು. ಕನ್ನಡ ನೆಲದಲ್ಲಿಯೇ ಕನ್ನಡದ ಉಳಿವಿಗಾಗಿ ಹೋರಾಟ ಮಾಡುತ್ತಿರುವುದು ವಿಷಾದವೆನಿಸುತ್ತದೆ, ಇಂತಹ ಸಂದರ್ಭದಲ್ಲಿ ನಾಡು, ನುಡಿ, ಸಂಸ್ಕೃತಿ, ನೆಲ, ಜಲಕ್ಕಾಗಿ ಕನ್ನಡಿಗರೆಲ್ಲರೂ ಒಟ್ಟಾಗಿ ಹೋರಾಟವನ್ನು ಮಾಡಬೇಕು. ಇಲ್ಲದಿದ್ದರೆ ಮುಂದೊಂದು ದಿನ ಕನ್ನಡ ಭಾಷೆಯು ನಾಶವಾಗುತ್ತದೆ ಎಂದು ಹೇಳಬಹುದು. ಸರ್ಕಾರ ಮತ್ತು ಮಹಾನಗರ ಪಾಲಿಕೆಯು ಅನ್ಯ ಭಾಷಿಕರ ಮೇಲೆ ಮೃದು ಧೋರಣೆಯನ್ನು ತೋರದೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕು. ಕನ್ನಡ ನಾಡಿನಲ್ಲಿ ಕನ್ನಡವೇ ಸಾರ್ವಭೌಮನಾಗಬೇಕು. ಕರವೇ ಹೋರಾಟಕ್ಕೆ ಬೆಂಬಲವನ್ನು ಸೂಚಿಸುತ್ತಾ ಯಶಸ್ವಿಯಾಗಲೆಂದು ಶುಭ ಹಾರೈಸುತ್ತೇನೆ.

–ಪರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾ.

### ದೂರವಾಣಿ ಕಂಬವೋ ಜೇಡರ ಬಲೆಯೋ!



ಮಾನ್ಯರೆ,

ಮೈಸೂರು ನ್ಯೂ ಸಯ್ಯಾಜಿರಾವ್ ರಸ್ತೆಯ ಮಾರ್ಗವಾಗಿ ಕೆ.ಆರ್.ಆಸ್ಪತ್ರೆಯ ವೃತ್ತದ ಮೂಲಕ ಸಾಗುವಾಗ ಕೂದಲೆಳೆ ಅಂತರದಲ್ಲಿರುವ ಶಿವನ ಮೂರ್ತಿ ಇರುವ ಎದುರಿನ ಈ ದೂರವಾಣಿ ಕಂಬದ ಕರೆಂಟ್ ತಂತಿ ಪವಾಡವಿದು.

ನೆಲದಿಂದ ವೈರಿನ ಸರಮಾಲೆ ಒಂದಕ್ಕೊಂದು ಸುತ್ತಿದಂತೆ ಇದೆ. ಈ ಭಾಗದಲ್ಲಿ ಹಸು ಸಾಕಾಣಿಕೆ ಹೆಚ್ಚಾಗಿದ್ದು, ದನಕರುಗಳು ತನ್ನ ತಲೆ ಇಲ್ಲವೇ ಮೈ ಉಜ್ಜಲು ಪ್ರಯತ್ನಿಸಿದರೆ ಶಾಕ್ ಹೊಡೆದು ನರಳುವುದು, ಸಾಯುವುದೋ ಗ್ಯಾರಂಟಿ. ಕೂಡಲೇ ಸಂಬಂಧಿಸಿದವರು ಜೇಡರ ಬಲೆಯಂತಿರುವ ವೈರ್‌ಗಳನ್ನು ಎತ್ತರಕ್ಕೆ ಸೆಳೆದು ಕಟ್ಟಲಿ. –ಪಡುವಾರಹಳ್ಳಿ ಎಂ.ರಾಮಕೃಷ್ಣ, ವಕೀಲರು.

### ಬದುಕಿಗೆ ನೆರವಾಗಿ

ಮಾನ್ಯರೆ,

ಮೈಸೂರು, ನಂಜನಗೂಡು ಸೇರಿದಂತೆ, ಜಿಲ್ಲೆಯಲ್ಲಿ ಸ್ಥಾಪನೆಯಾಗಿರುವ ಕೈಗಾರಿಕೆಗಳಲ್ಲಿ ಕಡ್ಡಾಯವಾಗಿ ಸ್ಥಳೀಯರಿಗೆ ಉದ್ಯೋಗ ನೀಡಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕೈಗಾರಿಕೋದ್ಯಮಿಗಳಿಗೆ ತಾಕೀತು ಮಾಡಿರುವುದು ಸಕಾರಾತ್ಮಕ ಬೆಳವಣಿಗೆಯಾಗಿದೆ. ಅನೇಕ ಕಾರ್ಖಾನೆಗಳಲ್ಲಿ ಕನ್ನಡಿಗರಿಗೆ ಉದ್ಯೋಗ ದೊರಕುತ್ತಿಲ್ಲ ಎಂಬ ಆರೋಪ ಸಾಮಾನ್ಯವಾಗಿದೆ. ನಮ್ಮ ನೆಲ, ಜಲ ಮತ್ತು ಇತರ ಸಂಪನ್ಮೂಲಗಳನ್ನು ಬಳಸಿಕೊಂಡು, ನಮಗೆ ಉದ್ಯೋಗ ನಿರಾಕರಿಸುತ್ತಿರುವ ಹಲವಾರು ಉದಾಹರಣೆಗಳು ನಮ್ಮ ಮುಂದಿವೆ. ಅನೇಕ ಕೈಗಾರಿಕೆಗಳಲ್ಲಿ ಅನ್ಯ ಭಾಷಿಕರದ್ದೇ ಪಾರುಪತ್ಯವಾಗಿದೆ. ಹೀಗಾಗಿ ಸ್ಥಳೀಯರು ಉದ್ಯೋಗಕ್ಕಾಗಿ ಬೆಂಗಳೂರು, ಮೈಸೂರು ಮುಂತಾದ ಮಹಾನಗರಗಳಿಗೆ ಗುಳೆ ಹೋಗಬೇಕಾದ ಪರಿಸ್ಥಿತಿ ಎದುರಾಗಿದೆ. ರಾಜ್ಯ ಸರ್ಕಾರ, ಕೈಗಾರಿಕೆಗಳನ್ನು ಸ್ಥಾಪಿಸಲು ರೈತರಿಂದ ಭೂಮಿ ವಶಪಡಿಸಿಕೊಂಡ ನಂತರ ಅವರಿಗೆ ಉದ್ಯೋಗ ನಿರಾಕರಿಸುತ್ತಿರುವ ಪ್ರಸಂಗಗಳು ಬೆಳಕಿಗೆ ಬರುತ್ತಿದೆ. ಇಂತಹ ಒಂದು ಪ್ರಸಂಗದಲ್ಲಿ ನಂಜನಗೂಡು ತಾಲೂಕಿನ ಓರ್ವ ಯುವಕ ಇತ್ತೀಚೆಗೆ ಆತ್ಮಹತ್ಯೆ ಮಾಡಿಕೊಂಡ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗಿದೆ. ಇದೊಂದು ರೀತಿಯಲ್ಲಿ ನಮ್ಮ ಮನೆಯಲ್ಲೇ ನಮಗೆ ಜಾಗವಿಲ್ಲ ಎನ್ನುವ ರೀತಿಯ ಹಾಗಿದೆ. ನಿಜ, ಯಾವುದೇ ಉದ್ಯೋಗ ನೀಡಬೇಕಾದರೂ, ಅದಕ್ಕೊಂದು ವಿದ್ಯಾರ್ಹತೆ ಹಾಗೂ ಇತರ ಮಾನದಂಡಗಳು ಇರಬಹುದು. ಆದರೆ ಅದನ್ನೇ ದೊಡ್ಡದು ಮಾಡಿಕೊಂಡು, ನಮ್ಮವರಿಗೆ ಉದ್ಯೋಗವನ್ನು ನಿರಾಕರಣೆ ಮಾಡುವುದು ಸರಿಯಲ್ಲ. ನಮ್ಮವರಿಗೋಸ್ಕರ ನಿಮ್ಮ ಮಾನದಂಡಗಳಲ್ಲಿ ರಿಯಾಯತಿ ನೀಡಿ, ಅರ್ಹ ಕನ್ನಡರಿಗೆ ಅಥವಾ ಸ್ಥಳೀಯರಿಗೆ ಉದ್ಯೋಗ ಕಲ್ಪಿಸಿ ಅವರ ಬದುಕಿಗೆ ನೆರವಾಗಿ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

### ಅಪಾಯಕಾರಿ ಮರದ ಕೊಂಬೆ ಕಡಿಯುವಂತೆ ಮನವಿ

ಮಾನ್ಯರೆ,

ಮೈಸೂರಿನ ಜೆ.ಪಿ. ನಗರದ ಸ್ಪೋರ್ಟ್ಸ್ ಕ್ಲಬ್ ಎದುರಿನಲ್ಲಿರುವ ಮರದ ಕೊಂಬೆಗಳು ಅಪಾಯಕಾರಿಯಾಗಿ ಬೆಳೆದಿದ್ದು, ಎದುರಿನಲ್ಲಿರುವ ಮನೆಗಳ ಕಿಟಕಿಗಳಿಗೆ ತಗಲುತ್ತಿವೆ. ಇಲ್ಲಿ ಅಂಗಡಿಗಳಿದ್ದು, ಈ ರಸ್ತೆಯು ಸದಾ ಜನನಿಬಿಡವಾಗಿರುತ್ತದೆ. ಸಂಜೆ ವೇಳೆ ಇಲ್ಲಿ ಹಿರಿಯ ನಾಗರಿಕರು ಕುಳಿತುಕೊಳ್ಳುತ್ತಾರೆ. ಆದ ಕಾರಣ ಸಂಬಂಧಪಟ್ಟ ನಗರಪಾಲಿಕೆ ಅಧಿಕಾರಿಗಳು ಇತ್ತ ಗಮನಹರಿಸಿ ಆದಷ್ಟು ಶೀಘ್ರ ಅಪಾಯಕಾರಿಯಾಗಿರುವ ಮರದ ಕೊಂಬೆಗಳನ್ನು ಕಡಿಸಲು ಕ್ರಮ ಕೈಗೊಳ್ಳುವಂತೆ ಮನವಿ.


–ಪರಶಿವಮೂರ್ತಿ, ಜೆ.ಪಿ.ನಗರ, ಮೈಸೂರು.



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ : 94815 33167

ಬಹುಮುಖಿ

# ಜಗ–ಯುಗದ ಕವಿ ಕುವೆಂಪು



**ಮಲೆನಾಡಿನ ಶಿವಮೊಗ್ಗ ಜಿಲ್ಲೆಯ ಕುಪ್ಪಳ್ಳಿಯ ವೆಂಕಟಪ್ಪ ಮತ್ತು ಸೀತಮ್ಮ ದಂಪತಿಗಳಿಗೆ ಚಿಕ್ಕಮಗಳೂರು ಜಿಲ್ಲೆಯ ಹಿರಿಕೂಡಿಗೆಯಲ್ಲಿ 1904ರ ಡಿಸೆಂಬರ್ 29 ರಂದು ಗಂಡು ಮಗುವೊಂದು ಜನಿಸಿದಾಗ ಅವರ ಸಂಭ್ರಮ ಹೇಳತೀರದು. ಅಷ್ಟೊಂದು ಸಂತಸಪಟ್ಟ ಆ ಪುಣ್ಯವಂತ ಮಾತಾ–ಪಿತರಿಗೆ ಅದೇ ಮಗು ಮುಂದೊಂದು ದಿನ ಸಮಸ್ತ ಕನ್ನಡನಾಡಿನ ಸಂಭ್ರಮ ವಾಗುತ್ತದೆಂದು ಆಗಲೇ ತಿಳಿದಿದ್ದರೆ ಅದಿನ್ನೆಷ್ಟು ಸಂಭ್ರಮಿಸುತ್ತಿದ್ದರೋ ಏನೋ! ಅಂಥ ಕನ್ನಡದ ಸೌಭಾಗ್ಯ ಆ ಮಗುವೇ ಕನ್ನಡಕ್ಕೆ ಮೊಟ್ಟ ಮೊದಲಿಗೆ 'ಜ್ಞಾನಪೀಠ ಪ್ರಶಸ್ತಿ'ಯನ್ನು ತಂದುಕೊಟ್ಟ ಕನ್ನಡ ಸಾರಸ್ವತ ಲೋಕದ 'ಕುವೆಂಪು' ಎಂಬ ಮೂರಕ್ಷರದ ಕನ್ನಡದ ಗಾಯತ್ರಿ ಮಂತ್ರ.**

**ಡಿಸೆಂಬರ್ 29, ವಿಶ್ವ ಮಾನವ ರಾಷ್ಟ್ರ ಕವಿ ಕುವೆಂಪು ಅವರ ಜನ್ಮದಿನ. ತನ್ನಿಮಿತ್ತ ಈ ಲೇಖನ.**

ರಸ ಋಷಿ ಕುವೆಂಪು ವಿಶ್ವಮಾನ್ಯ ವಿಶೇಷವಾಗಿ ಕನ್ನಡ ಕಂಡ ಶಿಖರ ಸದೃಶ ಪ್ರತಿಭೆ. ನಮ್ಮಲ್ಲಿ 'ಪಂಪನಿಂದ ಕುವೆಂಪುವಿನ ತನಕ' ಎಂಬುದೊಂದು ನಾಣ್ಣುಡಿಯುಂಟು. ಕನ್ನಡ ಸಾಹಿತ್ಯದ ವಿಷಯಕ್ಕೆ ಬಂದರೆ ಹತ್ತನೆಯ ಶತಮಾನಕ್ಕೆ ಪಂಪ ಹೇಗೋ ಹಾಗೆ ಇಪ್ಪತ್ತನೆಯ ಶತಮಾನಕ್ಕೆ ಕುವೆಂಪು. ಹತ್ತನೆ ಶತಮಾನ ಪಂಪ ಯುಗವಾದರೆ ಇಪ್ಪತ್ತನೆಯ ಶತಮಾನ ಕುವೆಂಪು ಯುಗ. ಬಹಳಷ್ಟು ವಿಷಯಗಳಲ್ಲಿ ಪಂಪನಿಗೂ ಕುವೆಂಪುವಿಗೂ ಬೇಕಾದಷ್ಟು ಹೋಲಿಕೆಗಳುಂಟು. ಪಂಪನಿಗಿದ್ದಂಥ ಆತ್ಮಪ್ರತ್ಯೇಯದ ಕೆಚ್ಚಿನ ಧೀರ ವ್ಯಕ್ತಿತ್ವ ಕುವೆಂಪು ಅವರಲ್ಲೂ ಇತ್ತು. ಆದಿ ಪುರಾಣ ರಚಿಸುವಾಗ ಪಂಪ ಹೇಳಿದ'ಪೆರರೀವುದೇಮ್ ಪೆರರಿಂದ ಮಪ್ಪುದೇಮ್' ಎನ್ನುವ ಮಾತಿಗೆ ಸಂವಾದಿ ಆಗಿದೆ 'ದಿವ್ಯ ನಿರ್ಲಕ್ಷ್ಯತೆಯೆ ವರಕವಿಯ ಪಂಥ' ಎಂಬ ಕುವೆಂಪು ಅವರ ಮಾತು. 'ನೆನೆವುದೆನ್ನ ಮನ ಬನವಾಸಿ ದೇಶವಂ' ಎಂದ ಪಂಪ, 'ಕನ್ನಡ ಎನೆ ಕುಣಿದಾಡುವುದೆನ್ನೆದೆ' ಎಂದ ಕುವೆಂಪು ಕನ್ನಡ ನಾಡಿನ ಸಾರಸ್ವತ ಲೋಕದ ಅನರ್ಘ್ಯ ರತ್ನಗಳು.

ಕುವೆಂಪು ಅವರ ವಿಶ್ವ ಮಾನವ ಸಂದೇಶಕ್ಕೆ ಪಂಪನ **'ಮನುಷ್ಯ ಜಾತಿ ತಾನೊಂದೆ ವಲಂ'** ಎಂಬ ನುಡಿ ರತ್ನವೇ ಮೂಲಾಧಾರ. ಇದರ ಮೂಲಕ ಕುವೆಂಪು ಅವರು ಹತ್ತನೆಯ ಹಾಗೂ ಇಪ್ಪತ್ತನೆಯ ಶತಮಾನಗಳನ್ನು ಬೆಸೆದು ಕನ್ನಡ ಸಾಹಿತ್ಯ ಪರಂಪರೆಯ ಪ್ರಭಾವಳಿಯನ್ನು ಬೆಳಗಿದ್ದಾರೆ. ಯುಗದ ಕವಿಯಾಗಿ, ಜಗದ ಕವಿಯಾಗಿ ಜಗಜ್ಯೋತಿಯಾಗಿದ್ದಾರೆ. ಮಹಾ ಕವಿಯಾಗಿ ತಮ್ಮ ಪ್ರಬುದ್ಧ ಸಾಹಿತ್ಯದ ಮೂಲಕ ಕನ್ನಡಕ್ಕೆ ವಿಶ್ವ ಮನ್ನಣೆ ತಂದು ಕೊಟ್ಟಿದ್ದಾರೆ. ಕನ್ನಡ ನಾಡು– ನುಡಿಯ ಮಹಾ ಭಾಗ್ಯವಾಗಿದ್ದಾರೆ. ಇಂಥ ವಿಶ್ವಕವಿ ಕುವೆಂಪು ಅವರು 'ಆಡು ಮುಟ್ಟದ ಸೊಪ್ಪಿಲ್ಲ' ಎಂಬಂತೆ ಬಹುತೇಕ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲೂ ಕೃಷಿ ಮಾಡಿ ಎಲ್ಲದರಲ್ಲೂ ಅದ್ಭುತವನ್ನೇ ಸಾಧಿಸಿದ್ದರೂ ಸಹ ಇವರು ಕವಿಯಾಗಿಯೇ ಹೆಚ್ಚು ಜಗದ್ವಿಖ್ಯಾತರು! ಇದಕ್ಕಾಗಿಯೇ ಇಂಥ ಮೇರುಕವಿ ಕುವೆಂಪು ಅವರನ್ನು ವರಕವಿ ಬೇಂದ್ರೆಯವರು ಹೃನ್ಮನ ಪೂರ್ವಕವಾಗಿ ಬಣ್ಣಿಸಿರುವ ಬಗೆ ಇದು –

**"ಯುಗದ ಕವಿಗೆ, ಜಗದ ಕವಿಗೆ
ಶ್ರೀರಾಮಾಯಣ ದರ್ಶನದಿಂದಲೇ ಕೈ ಮುಗಿದ ಕವಿಗೆ–ಮಣಿಯದವರು ಯಾರು?
ರಾಮಕೃಷ್ಣ ವಚನೋದಿತ ಪ್ರತಿಭೆ ತೆರೆದ ಕವನ ತತಿಗೆ ತಣಿಯದವರು ಆರು?
ಮಲೆನಾಡಿನ ಸೌಂದರ್ಯಕೆ ಕುಣಿದಾಡಿದ ಕವಿಯ ಜತೆಗೆ ಕುಣಿಯದವರು ಆರು?"**

ಮಲೆನಾಡಿನ ಶಿವಮೊಗ್ಗ ಜಿಲ್ಲೆಯ ಕುಪ್ಪಳ್ಳಿಯ ವೆಂಕಟಪ್ಪ ಮತ್ತು ಸೀತಮ್ಮ ದಂಪತಿಗಳಿಗೆ ಚಿಕ್ಕಮಗಳೂರು ಜಿಲ್ಲೆಯ ಹಿರಿಕೂಡಿಗೆಯಲ್ಲಿ 1904ರ ಡಿಸೆಂಬರ್ 29 ರಂದು ಗಂಡು ಮಗುವೊಂದು ಜನಿಸಿದಾಗ ಅವರ ಸಂಭ್ರಮ ಹೇಳತೀರದು. ಅಷ್ಟೊಂದು ಸಂತಸಪಟ್ಟ ಆ ಪುಣ್ಯವಂತ ಮಾತಾ–ಪಿತರಿಗೆ ಅದೇ ಮಗು ಮುಂದೊಂದು ದಿನ ಸಮಸ್ತ ಕನ್ನಡನಾಡಿನ ಸಂಭ್ರಮವಾಗುತ್ತದೆಂದು ಆಗಲೇ ತಿಳಿದಿದ್ದರೆ ಅದಿನ್ನೆಷ್ಟು ಸಂಭ್ರಮಿಸುತ್ತಿದ್ದರೋ ಏನೋ! ಅಂಥ ಕನ್ನಡದ ಸೌಭಾಗ್ಯ ಆ ಮಗುವೇ ಕನ್ನಡಕ್ಕೆ ಮೊಟ್ಟ ಮೊದಲಿಗೆ 'ಜ್ಞಾನಪೀಠ ಪ್ರಶಸ್ತಿ' ಯನ್ನು ತಂದುಕೊಟ್ಟ ಕನ್ನಡ ಸಾರಸ್ವತ ಲೋಕದ 'ಕುವೆಂಪು' ಎಂಬ ಮೂರಕ್ಷರದ ಕನ್ನಡದ ಗಾಯತ್ರಿ ಮಂತ್ರ.

ಪ್ರಾಥಮಿಕ ಶಿಕ್ಷಣವನ್ನು ತೀರ್ಥಹಳ್ಳಿಯಲ್ಲಿ ಮುಗಿಸಿ ಪ್ರೌಢ ಶಿಕ್ಷಣಕ್ಕೆ ಮೈಸೂರಿಗೆ ಬಂದ ಕುವೆಂಪು ಅಲ್ಲಿಂದ ತಮ್ಮ ಸಂಪೂರ್ಣ ವಿದ್ಯಾಭ್ಯಾಸವನ್ನು ಮೈಸೂರಿನಲ್ಲೇ ಪೂರೈಸಿದರು. ಟಿ.ಎಸ್. ವೆಂಕಣ್ಣಯ್ಯ, ಎ.ಆರ್. ಕೃಷ್ಣಶಾಸ್ತ್ರಿ, ಬಿ.ಎಂ.ಶ್ರೀ. ಅವರಂಥ ಗುರುಗಳನ್ನು ಪಡೆದಿದ್ದ ಇವರು ಮೈಸೂರಿನ ಮಹಾರಾಜ ಕಾಲೇಜಿನಿಂದ 1927 ರಲ್ಲಿ ಬಿ.ಎ. ಪದವಿಯನ್ನೂ, 1929 ರಲ್ಲಿ ಕನ್ನಡ ಎಂ.ಎ. ಪದವಿಯನ್ನೂ ಪಡೆದು ಆ ವರ್ಷದಿಂದಲೇ ಪ್ರತಿಷ್ಠಿತ ಮೈಸೂರು ಮಹಾರಾಜ ಕಾಲೇಜಿನ ಕನ್ನಡ ಅಧ್ಯಾಪಕರಾಗಿ ತಮ್ಮ ವೃತ್ತಿಜೀವನ ಆರಂಭಿಸಿದರು. ನಂತರ ಅದೇ ಕಾಲೇಜಿನಲ್ಲಿ ಉಪಪ್ರಾಧ್ಯಾಪಕ ಹಾಗೂ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ 1955 ರಲ್ಲಿ ಪ್ರಿನ್ಸಿಪಾಲ್ ಆಗಿ 1956 ರಿಂದ 1960 ರವರೆಗೆ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಯಾಗಿ ನಿವೃತ್ತರಾದರು. ಕುಲಪತಿಯಾಗಿ ಅವರು ಸಾಧನೆಗೈದು ಕಂಡ ಕನಸನ್ನು ಸಾಕ್ಷಾತ್ಕಾರಗೊಳಿಸಿಕೊಂಡಿದ್ದಕ್ಕೆ ಸಾಕ್ಷಿ ಮೈಸೂರಿನ ಮಾನಸ ಗಂಗೋತ್ರಿಯೇ ಆಗಿದೆ!

ಹೊಸಗನ್ನಡ ಸಾಹಿತ್ಯದ ದಿಗ್ಗಜರಲ್ಲೊಬ್ಬರಾದ ಕುವೆಂಪು ಅವರ ಹುಟ್ಟು ಹೆಸರು ಕೆ.ವಿ. ಪುಟ್ಟಪ್ಪ. ಬರೆಯುತ್ತಾ, ಬೆಳೆಯುತ್ತಾ 'ಕುವೆಂಪು' ಕಾವ್ಯನಾಮದಿಂದ ಪ್ರಸಿದ್ಧಿಯ ಹಿಮಾಚಲವಾಗಿ ರೂಪುಗೊಂಡ ಇವರು ತಮ್ಮ ಬರವಣಿಗೆಯ ಆರಂಭದ ದಿನಗಳಲ್ಲಿ 'ಕಿಶೋರಚಂದ್ರ' ಎಂಬ ಹೆಸರಿನಿಂದಲೂ ಸಾಹಿತ್ಯ ಕೃಷಿಯನ್ನು ಮಾಡಿದ್ದರು. ಜೈಮಿನಿ ಭಾರತ, ತೊರವೆ ರಾಮಾಯಣಗಳ ವಾಚನ ಮತ್ತು ಅಕ್ಷರಾಭ್ಯಾಸದ ಮೂಲಕ ಬಾಲ್ಯದಲ್ಲೇ ಸಾಹಿತ್ಯ ಸಂಸ್ಕಾರ ಪಡೆದಿದ್ದ ಕುವೆಂಪು ಅವರು ತೀರ್ಥಹಳ್ಳಿ ಮತ್ತು ಮೈಸೂರಿನಲ್ಲಿ ಓದುತ್ತಿರುವಾಗಲೇ ಓದಿನ ಜೊತೆ ಜೊತೆಗೆ ಶೆಲ್ಲಿ, ವರ್ಡ್ಸ್‌ವರ್ಥ್, ಕೀಟ್ಸ್ ಮುಂತಾದ ಆಂಗ್ಲಕವಿಗಳನ್ನು ಚೆನ್ನಾಗಿ ಓದಿಕೊಂಡಿದ್ದರು. ಪರಿಣಾಮ ಇವರೆಲ್ಲರ ಪ್ರಭಾವದಿಂದಾಗಿ ಇಂಗ್ಲೀಷ್ ಸಾಹಿತ್ಯದತ್ತ ಹೆಜ್ಜೆಯಿರಿಸಿದ ಇವರು 1922ರಲ್ಲಿ ತಮ್ಮ 18ನೇ ವಯಸ್ಸಿಗೇ 'ಬಿಗಿನರ್ಸ್ ಮ್ಯೂಸ್' ಎಂಬ ಇಂಗ್ಲೀಷ್ ಕವನ ಸಂಕಲನವನ್ನು ಪ್ರಕಟಿಸಿದ್ದರು. ಇದನ್ನು ಓದಿದ ಐರಿಸ್ ಕವಿ ಜೇಮ್ಸ್ ಕಸಿನ್ಸ್ ಅವರು ಕುವೆಂಪು ಅವರ ಪ್ರತಿಭೆಯನ್ನು ಮೆಚ್ಚಿ 'ಹುಟ್ಟಿನೊಡನೆ ಬಂದ ಭಾಷೆಯಲ್ಲಿ ಮಾತ್ರ ಸೃಜನಶೀಲ ಸಾಹಿತ್ಯ ಉತ್ತಮವಾಗಿ ಸೃಷ್ಟಿಯಾಗಬಲ್ಲದು' ಎಂದು ಕನ್ನಡದಲ್ಲೇ ಬರೆಯುವಂತೆ ಕುವೆಂಪು ಅವರಿಗೆ ಸಲಹೆ ನೀಡಿದ ಪರಿಣಾಮವಾಗಿ ಇವರು ಕನ್ನಡ ಸಾಹಿತ್ಯ ರಚನೆಯತ್ತ ಸಾಗಿದರು.

ಕುವೆಂಪು ಅವರು ಕನ್ನಡದಲ್ಲೇ ಬರೆಯಲು, ಕನ್ನಡದಲ್ಲೇ ಉಳಿಯಲು ಬಹು ಮುಖ್ಯ ಕಾರಣ ಐರಿಸ್ ಕವಿ ಜೇಮ್ಸ್ ಕಸಿನ್ಸ್. ಹಾಗಾಗಿ ಕುವೆಂಪು ಅವರ ಕನ್ನಡ ಸಾಹಿತ್ಯದ ಕೀರ್ತಿಯ ಕ್ರೆಡಿಟ್ ಈ ಐರಿಸ್ ಕವಿಗೇ ಸಲ್ಲಬೇಕು. ಏಕೆಂದರೆ ಅಂದು ಅವರು ಕುವೆಂಪು ಅವರಿಗೆ ಮಾತೃಭಾಷೆಯ ಅಗಾಧ ಶಕ್ತಿ ಬಗ್ಗೆ ಮನವರಿಕೆ ಮಾಡಿಕೊಡದಿದ್ದರೆ ಕುವೆಂಪು ಅಂಥ ದೈತ್ಯ ಪ್ರತಿಭೆ ದಾರ್ಶನಿಕ ಮಹಾಕವಿ ಕನ್ನಡಕ್ಕೆ ದಕ್ಕುತ್ತಿರಲಿಲ್ಲವೇನೋ!

ಐರಿಸ್ ಕವಿ ಜೇಮ್ಸ್ ಕಸಿನ್ಸ್ ಅವರ ಪ್ರಭಾವದಿಂದ ಕನ್ನಡದಲ್ಲಿ ಕುವೆಂಪು ಮಕ್ಕಳಿಗಾಗಿ ಲಘು ಕಾಲ್ಪನಿಕ ಕಾವ್ಯ 'ಅಮಲನ ಕಥೆ' ಕೃತಿಯನ್ನು 1924 ರಲ್ಲಿ ಪ್ರಕಟಿಸಿದರು. ಇದು ಕುವೆಂಪು ಅವರ ಪ್ರಪ್ರಥಮ ಕನ್ನಡ ಪುಸ್ತಕ. ಅಲ್ಲಿಂದೀಚೆಗೆ 'ದೀಕ್ಷೆಯ ತೊಡು ಇಂದೇ; ಕಂಕಣ ಕಟ್ಟಿಂದೇ; ಕನ್ನಡ ನಾಡೊಂದೇ....' ಎನ್ನುತ್ತಲೇ ಎಣೆಯಿಲ್ಲದ ಕನ್ನಡಾಭಿಮಾನವನ್ನು ಎದೆಯಲ್ಲಿ ತುಂಬಿಕೊಂಡು ತಮ್ಮ ಲೇಖನಿಯ ಮೂಲಕ ಕನ್ನಡ ಕೃತಿಗಳ ಮಾಲೆಯನ್ನೇ ಕಟ್ಟತೊಡಗಿದರು. ಇಲ್ಲಿ ಪ್ರಕೃತಿಯ ಮಹತ್ತೆಲ್ಲವನ್ನೂ ತೆರೆದಿಡುವ ಕೊಳಲು, ಪಕ್ಷಿಕಾಶಿ, ನವಿಲು, ಕದರಡಕೆ, ಕಲಾಸುಂದರಿಯಂಥ ಕವನ ಸಂಕಲನಗಳಿವೆ. ಪ್ರೇಮ ಕಾಶ್ಮೀರ, ಚಂದ್ರಮಂಚಕೆ ಬಾ ಚಕೋರಿ, ಷೋಡಶಿ, ಜೇನಾಗುವ, ಅನುತ್ತರಾದಂತಹ ಹದಿಹರೆಯದವರೆದೆ ಅರಳಿಸುವ ಮಹದದ್ಭುತ ಪ್ರೇಮಗೀತಾ ಗುಚ್ಛಗಳಿವೆ. ಮೇಘಪುರ, ಮರಿವಿಜ್ಞಾನಿ, ನನ್ನ ಮನೆ ತರಹದ ಅರಿವಿನ ಬೆಳಕಿನ ಶಿಶುಗೀತಾ ಸಂಗ್ರಹಗಳಿವೆ.

ಪಾಂಚಜನ್ಯ, ಕ್ರಾಂತಿ ಕಹಳೆ, ಕೋಗಿಲೆ ಮತ್ತು ಸೋವಿಯತ್ ರಷ್ಯಾ ರೀತಿಯ ನಾಡಿಗೆ ಕ್ರಾಂತಿ ದೀವಿಗೆ ಹಚ್ಚುವ ಕ್ರಾಂತಿ ಗೀತೆಗಳಿವೆ. ಚಿತ್ರಾಂಗದಾ, ಸಮುದ್ರ ಲಂಘನಾ, ಮಹಾದರ್ಶನ ಮತ್ತು ಪ್ರಾಯಶ್ಚಿತ್ತದಂಥ ಅಪೂರ್ವವಾದ ಸರಳ ರಗಳೆಯ ಖಂಡ ಕಾವ್ಯಗಳಿವೆ. ಬೊಮ್ಮನಹಳ್ಳಿಯ ಕಿಂದರಿ ಜೋಗಿ, ಶ್ರೀಸ್ವಾತಂತ್ರ್ಯೋದಯದಂತಹ ಮಹಾ ಪ್ರಾಥಗಳು ಹಾಗೂ ಕಿಂಕಿಣಿಯಂತಹ ಅತ್ಯಪೂರ್ವ ಧ್ವನಿಯುಳ್ಳ ಕಾವ್ಯ ಶಕ್ತಿಯ ವಚನಗಳಿವೆ.

**ಮಹಾ ಕಾದಂಬರಿಗಳು:** ಹಾಗೆಯೇ ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು ಅಂತಹ ಮಹಾ ಕಾದಂಬರಿಗಳೂ ಇವೆ. ಶ್ರೀ ರಾಮಾಯಣದರ್ಶನಂ ನಂಥ ಮಹಾಕಾವ್ಯವೂ ಇದೆ. ಮಹಾ ಶಿವರಾತ್ರಿ, ಯಮುನ ಸೋಲು, ಸ್ಮಶಾನ ಕುರುಕ್ಷೇತ್ರಂ, ಶೂದ್ರ ತಪಸ್ವಿಯಂತಹ ಉತ್ತಮೋತ್ತಮ ನಾಟಕಗಳಿವೆ. ಮೋಡಣ್ಣನ ತಮ್ಮ, ನನ್ನ ಗೋಪಾಲದಂತಹ ಚಿಣ್ಣರ ಸೆಳೆವ ಮಕ್ಕಳ ನಾಟಕಗಳಿವೆ. ಸನ್ಯಾಸಿ ಮತ್ತು ಇತರ ಕಥೆಗಳು, ನನ್ನ ದೇವರು ಮತ್ತು ಇತರ ಕಥೆಗಳು, ಕಥೆಗಳೊಡನೆ ಆರಂಭದಂತಹ ಶಕ್ತಿಪೂರ್ಣ ಕಥಾ ಸಂಕಲನಗಳಿವೆ. ಮಲೆನಾಡಿನ ಚಿತ್ರಗಳು ರೀತಿಯ ಸಶಕ್ತ ಗದ್ಯ ಚಿತ್ರಗಳ ಸಂಕಲನಗಳಿವೆ. ಕಾವ್ಯ ವಿಹಾರ, ವಿಭೂತಿ ಪೂಜೆ, ತಪೋನಂದನ, ದ್ರೌಪದಿಯ ಶ್ರೀಮುಡಿಯಂತಹ ಸಾಹಿತ್ಯ ವಿಮರ್ಶೆ ಮತ್ತು ಕಾವ್ಯ ಮೀಮಾಂಸೆಗಳಿವೆ. ವಿಚಾರಕ್ರಾಂತಿಗೆ ಆಹ್ವಾನ, ಮನುಜ ಮತ ವಿಶ್ವಪಥ, ಜನತಾ ಪ್ರಜ್ಞೆ ಮತ್ತು ವೈಚಾರಿಕ ಜಾಗೃತಿಯಂತಹ ಸಾರಸ್ವತ ಲೋಕದಲ್ಲಿ ವೈಚಾರಿಕ ಬೆಳಕು ಚೆಲ್ಲುವ ಭಾಷಣಗಳ ಸಂಗ್ರಹಗಳಿವೆ. ಸ್ವಾಮಿ ವಿವೇಕಾನಂದ, ಶ್ರೀ ರಾಮಕೃಷ್ಣ ಪರಮಹಂಸರಂತಹ ಮಹನೀಯರ ಜೀವನ ಚರಿತ್ರೆಗಳಿವೆ. ಆತ್ಮಕಥೆ ಪ್ರಕಾರದಲ್ಲೇ ಅದ್ಭುತವೆನಿಸುವ ನೆನಪಿನ ದೋಣಿಯಂತಹ ಆತ್ಮಕಥೆಯೂ ಇದೆ. ಜನಪ್ರಿಯ ವಾಲ್ಮೀಕಿ ರಾಮಾಯಣ, ಗುರುವಿನೊಡನೆ ದೇವರಡಿಗೆ, ವಿವೇಕವಾಣಿ, ವೇದಾಂತದಂತಹ ಶ್ರೇಷ್ಠ ಅನುವಾದಿತ ಕೃತಿಗಳೂ ಇವೆ. ಕರ್ನಾಟಕ ಭಾರತ ಕಥಾ ಮಂಜರಿಯಂಥ ಅಗ್ರಮಾನ್ಯ ಸಂಪಾದಿತ ಗ್ರಂಥವೂ ಉಂಟು.


ಹೀಗೆ ಅವರಿಂದ ಸೃಷ್ಟಿಯಾದ ಕನ್ನಡ ಸಾಹಿತ್ಯ ಕೃತಿ ಮಾಲೆಯಲ್ಲಿ ಕಾವ್ಯ, ಸಣ್ಣಕಥೆ, ಕಾದಂಬರಿ, ನಾಟಕ, ಜೀವನ ಚರಿತ್ರೆ ಪ್ರಬಂಧ, ಖಂಡಕಾವ್ಯ, ಹರಟೆ, ಸಂಶೋಧನೆ, ವಿಮರ್ಶೆ, ನೀಳ್ಗವಿತೆ, ಹನಿಗವಿತೆ ಸೇರಿದಂತೆ ಮಕ್ಕಳ ಸಾಹಿತ್ಯದಿಂದ ಹಿಡಿದು ಮಹಾಕಾವ್ಯದವರೆಗೂ ಎಲ್ಲಾ ಬಗೆಯ ಸಾಹಿತ್ಯ ಪುಷ್ಪಗಳುಂಟು. ಸಂಖ್ಯೆಯ ದೃಷ್ಟಿಯಿಂದ ಕುವೆಂಪು ಅವರ ಕೃತಿಗಳು ಎಪ್ಪತ್ತೈದನ್ನೂ ದಾಟದಿದ್ದರೂ ಕೂಡ ಸತ್ವದ ದೃಷ್ಟಿಯಲ್ಲಿ ಇವರಿಂದ ರಚಿತವಾಗಿರುವ ಒಂದೊಂದು ಕೃತಿ ರತ್ನಗಳೂ ಸಾಹಿತ್ಯದ ಮಹತ್ವಗಳಾಗಿವೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಬಹುಮಾನವನ್ನು ಮತ್ತು ಭಾರತೀಯ ಜ್ಞಾನಪೀಠ ಪ್ರಶಸ್ತಿಯನ್ನು ಪಡೆದಿರುವ ಇವರ 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯವೊಂದೇ ಸಾಕು ಕೋಟಿ ಕೃತಿಗಳನ್ನು ಮೀರಿಸೀತು! ಅದಕ್ಕೇ ವರಕವಿ ಬೇಂದ್ರೆಯವರು ಕುವೆಂಪು ಅವರನ್ನು 'ಯುಗದ ಕವಿ ಜಗದ ಕವಿ' ಎಂದು ಎದೆತುಂಬಿ ಹಾಡಿ ಹೊಗಳಿರುವುದು.

ಪ್ರಶಸ್ತಿ–ಪುರಸ್ಕಾರ, ಮಾನ–ಸನ್ಮಾನ, ಹೆಸರು–ಕೀರ್ತಿ, ಅಂತ ಕುವೆಂಪು ಅವರು ಎಂದೂ ಕೂಡ ಅವುಗಳ ಹಿಂದೆ ಬಿದ್ದವರಲ್ಲ. 'ಕೀರ್ತಿ ಶನಿ ತೊಲಗಾಚೆ' ಎಂದವರು ಅವರು. ಆದರೆ ಅವುಗಳೇ ಅವರನ್ನು ಬೆನ್ನತ್ತಿ ಬಂದು ಆಲಂಗಿಸಿಕೊಂಡವು. ಹಾಗಾಗಿ ತಮ್ಮ ಸಾಹಿತ್ಯ ಸಾಧನೆಯಿಂದ ಹಲವು ಮೊದಲುಗಳಿಗೆ ಮುನ್ನುಡಿ ಬರೆದ ಕುವೆಂಪು ಅವರು ತಮ್ಮ ಮಹತ್ಕೃತಿ "ಶ್ರೀರಾಮಾಯಣ ದರ್ಶನಂ" ಮಹಾಕಾವ್ಯದ ಮೂಲಕ ರಾಷ್ಟ್ರದ ಪ್ರತಿಷ್ಠಿತ ಪ್ರಶಸ್ತಿಗಳಾದ 'ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ' ಮತ್ತು 'ಜ್ಞಾನಪೀಠ ಪ್ರಶಸ್ತಿ' ಸೇರಿದಂತೆ ಹಲವು ಹತ್ತು ಪ್ರಶಸ್ತಿಗಳನ್ನು ಮೊಟ್ಟ ಮೊದಲಿಗೆ ಕನ್ನಡಕ್ಕೆ ತಂದುಕೊಟ್ಟ ಕೀರ್ತಿಯೊಡನೆ ಕರ್ನಾಟಕ ಸರ್ಕಾರದ ಪ್ರಮುಖ ನಾಗರಿಕ ಪ್ರಶಸ್ತಿಗಳಾದ 'ಕರ್ನಾಟಕ ರತ್ನ ಪ್ರಶಸ್ತಿ' ಮತ್ತು ಪಂಪ ಪ್ರಶಸ್ತಿ ಪಡೆದ ಮೊದಲಿಗರೆನಿಸಿದ್ದಾರೆ. ಹಾಗೆಯೇ ಕೇಂದ್ರ ಸರ್ಕಾರದಿಂದ 'ಪದ್ಮಭೂಷಣ' ಪಡೆದ ಕನ್ನಡ ಭಾಷೆಯ ಮೊದಲ ಕವಿಯೂ ಆಗಿದ್ದಾರೆ.

ಕುವೆಂಪು ವಿಶೇಷವೆಂದರೆ ಕನ್ನಡಕ್ಕೊಂದು ಓಜಸ್ವಿಯಾದ ಶೈಲಿಯನ್ನು ತಂದುಕೊಟ್ಟದ್ದು. ಹಾಗೆಯೇ ಸಾಹಿತ್ಯದ ಮೂಲಕ ಕನ್ನಡ ಪ್ರಜ್ಞೆ, ವೈಜ್ಞಾನಿಕ ಪ್ರಜ್ಞೆ, ವೈಚಾರಿಕ ಪ್ರಜ್ಞೆ, ಭಾವೈಕ್ಯ ಪ್ರಜ್ಞೆ, ಮನುಜ ಮತ ಪ್ರಜ್ಞೆ, ವಿಶ್ವಪಥ ಪ್ರಜ್ಞೆ ಒಟ್ಟಾರೆ ವಿಶ್ವಮಾನವ ಪ್ರಜ್ಞೆ ಮೂಡಿಸಿದರು. ಸಾವಿರ ವರ್ಷಗಳ ಹಿಂದೆ ಆದಿಕವಿ ಪಂಪ ನುಡಿದ 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬುದನ್ನು ತಮ್ಮ ಬದುಕಿನ ಧ್ಯೇಯ ವಾಕ್ಯವನ್ನಾಗಿಸಿಕೊಂಡು ಅದರಂತೆಯೇ ಬರೆದು ಬದುಕಿದವರು. "ಗುಡಿ ಚರ್ಚು ಮಸೀದಿಗಳ ಬಿಟ್ಟು ಹೊರಬನ್ನಿ; ಬಡತನವ ಬುಡಮಟ್ಟ ಕೀಳಬನ್ನಿ; ಮೌಢ್ಯತೆಯ ಮಾರಿಯನು ಹೊರ ದೂಡಲೈತನ್ನಿ; ವಿಜ್ಞಾನ ದೀವಿಗೆಯ ಹಿಡಿಯ ಬನ್ನಿ" ಎಂದವರು. ಅದರಲ್ಲೂ ಕುವೆಂಪು ಅವರು ತಮ್ಮ ಜೀವನ ಸಂಧ್ಯಾ ಕಾಲದಲ್ಲಿ ವಿಶ್ವಮಾನವತ್ವಕ್ಕೆ ಮಿಡಿದ ಬಗೆ ಇಡೀ ಮಾನವ ಕುಲಕ್ಕೆ ಮಾದರಿ. ತಮ್ಮ ಬದುಕಿನ ಕಟ್ಟಕಡೆಯ ಸಂದೇಶ ವಿಶ್ವ ಮಾನವ ಸಂದೇಶ ಎನ್ನುತ್ತಲೇ 1994ರ ನವೆಂಬರ್ 11 ರಂದು ನಿಸರ್ಗಲೀನರಾದ ಕುವೆಂಪು ಮಹಾ ಮಾನವತಾವಾದಿಯಾಗಿ ಬದುಕಿದವರು. ಅಂತೆಯೇ ಕನ್ನಡ ಸಾಹಿತ್ಯ ಮತ್ತು ಭಾರತೀಯ ಸಾಹಿತ್ಯಕ್ಷೇತ್ರ ಅಲ್ಲದೆ ವಿಶ್ವ ಸಾಹಿತ್ಯಕ್ಕೆ ವಿಚಾರ ಕ್ರಾಂತಿಯ ಮಹಾಬೆಳಕು ನೀಡಿದ ಯುಗಪುರುಷರು.

# ಅಯೋಧ್ಯೆ ರೈಲು ನಿಲ್ದಾಣದ ಹೆಸರು 'ಅಯೋಧ್ಯಾ ಧಾಮ'

**ದೆಹಲಿ:** ಜನವರಿ 22 ರಂದು ರಾಮ ಮಂದಿರ ಉದ್ಘಾಟನೆಗೂ ಮುನ್ನ ಅಯೋಧ್ಯೆ ರೈಲು ನಿಲ್ದಾಣದ ಹೆಸರನ್ನು 'ಅಯೋಧ್ಯಾ ಧಾಮ" ಜಂಕ್ಷನ್ ಎಂದು ಬದಲಾಯಿಸಲಾಗಿದೆ ಎಂದು ಬಿಜೆಪಿ ಸಂಸದ ಲಲ್ಲು ಸಿಂಗ್ ಮಾಹಿತಿ ನೀಡಿದ್ದಾರೆ.





ಪ್ರಧಾನಮಂತ್ರಿ ನರೇಂದ್ರಮೋದಿ ಅವರ ಮಾರ್ಗದರ್ಶನದಲ್ಲಿ 'ಅಯೋಧ್ಯಾ ಜಂಕ್ಷನ್' 'ಅಯೋಧ್ಯಾ ಧಾಮ' ಜಂಕ್ಷನ್ ಆಗಿ ಮಾರ್ಪಟ್ಟಿದೆ. ನಿಲ್ದಾಣವನ್ನು ಮರುನಾಮಕರಣ ಮಾಡಲು ಉತ್ತರ ಪ್ರದೇಶ ಸರ್ಕಾರವು ಹಂಚಿಕೊಂಡ ಪ್ರಸ್ತಾವನೆಯನ್ನು ಭಾರತೀಯ ರೈಲ್ವೇ ಒಪ್ಪಿಕೊಂಡಿದೆ. ಆದಾಗ್ಯೂ, ನಿಲ್ದಾಣದ ಕೋಡ್ ಒಂದೇ ಆಗಿರುತ್ತದೆ.

**ರಾಜಸ್ಥಾನದ ಭರತ್‌ಪುರ ಜಿಲ್ಲೆಯಿಂದ ಕಲ್ಲು:** ಜಂಕ್ಷನ್ ನಿರ್ಮಾಣಕ್ಕೆ ಕಲ್ಲುಗಳನ್ನು ರಾಜಸ್ಥಾನದ ಭರತ್‌ಪುರ ಜಿಲ್ಲೆಯ ಬನ್ಸಿ ಪಹಾರ್‌ಪುರ ಪ್ರದೇಶದಿಂದ ತರಲಾಗಿದ್ದು, ಅದೇ ಸ್ಥಳದಿಂದ ರಾಮಮಂದಿರ ನಿರ್ಮಾಣಕ್ಕೂ ಕಲ್ಲುಗಳನ್ನು ಸರಬರಾಜು ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ. ಗುಣಮಟ್ಟ ಮತ್ತು ಅನುಕೂಲತೆಯ ದೃಷ್ಟಿಯಿಂದ ವಿಮಾನ ನಿಲ್ದಾಣದ ಸೌಲಭ್ಯಗಳನ್ನು ಸಹ ಮೀರಿಸುವಂತಹ ಅದು ನಿಖರವಾದ ಯೋಜಿತ ಅಭಿವೃದ್ಧಿ ಈ ನಿಲ್ದಾಣವನ್ನು ಪ್ರತ್ಯೇಕಿಸುತ್ತದೆ.

ಶಿಶುಗಳ ಆರೈಕೆ, ಅನಾರೋಗ್ಯದ ಕೋಣೆ, ಪ್ರವಾಸಿ ಮಾಹಿತಿ ಕೇಂದ್ರ, ಅಗ್ನಿಶಾಮಕ ನಿರ್ಗಮನ ಮತ್ತು ದೇಶದ ಅತಿದೊಡ್ಡ ಕಾನ್ಕೋರ್ಸ್ ರೈಲು ನಿಲ್ದಾಣದಲ್ಲಿ ಲಭ್ಯವಿದೆ. ಪ್ರಯಾಣದ ಸಮಯದಲ್ಲಿ ಗಾಯ ಅಥವಾ ಅನಾರೋಗ್ಯದ ಸಂದರ್ಭದಲ್ಲಿ, ಪ್ರಥಮ ಚಿಕಿತ್ಸೆ ಮತ್ತು ವೈದ್ಯಕೀಯ ಸಹಾಯಕ್ಕಾಗಿ ನಿಲ್ದಾಣದಲ್ಲಿ ಮೀಸಲಾದ ಅನಾರೋಗ್ಯ ಕೊಠಡಿ ಲಭ್ಯವಿದೆ.

ನಿಲ್ದಾಣವು ಪ್ರಯಾಣಿಕರ ಸೌಲಭ್ಯಗಳ ಡೆಸ್ಕ್ ಮತ್ತು ಪ್ರವಾಸಿ ಮಾಹಿತಿ ಕೇಂದ್ರವನ್ನು ಸಹ ಹೊಂದಿದೆ, ಪ್ರಯಾಣಿಕರಿಗೆ ಶ್ರೀರಾಮ ದೇವಾಲಯ ಸೇರಿದಂತೆ ಆ ಪ್ರದೇಶದಲ್ಲಿನ ಆಧ್ಯಾತ್ಮಿಕ ಮತ್ತು ಪ್ರವಾಸಿ ತಾಣಗಳ ಬಗ್ಗೆ ಸಮಗ್ರ ಮಾಹಿತಿಯನ್ನು ಒದಗಿಸುತ್ತದೆ, ಜೊತೆಗೆ ಅನುಕೂಲಕರ ಪ್ರವೇಶ ವಿಧಾನಗಳನ್ನು ಒದಗಿಸುತ್ತದೆ.


ಈ ಸೌಕರ್ಯಗಳ ಜೊತೆಗೆ, ಅಯೋಧ್ಯಾ ಧಾಮವು ಹೊಸದಾಗಿ ಅಭಿವೃದ್ಧಿಪಡಿಸಿದ ನಿಲ್ದಾಣಗಳಲ್ಲಿ ಕಂಡುಬರುವ ಗುಣಮಟ್ಟದ ಸೌಲಭ್ಯಗಳನ್ನು ಒದಗಿಸುತ್ತದೆ. ಉದಾಹರಣೆಗೆ ಕ್ಲೋಕ್‌ರೂಮ್‌ಗಳು, ಆಹಾರ ಪ್ಲಾಜಾ, ಕಾಯುವ ಹಾಲ್‌ಗಳು, ಮೆಟ್ಟಿಲುಗಳು, ಎಸ್ಕಲೇಟರ್‌ಗಳು, ಲಿಫ್ಟ್‌ಗಳು ಮತ್ತು ಶೌಚಾಲಯಗಳು ಇಲ್ಲಿವೆ. ಎಲ್ಲಾ ಮಹಡಿಗಳು ಅಗ್ನಿಶಾಮಕ ನಿರ್ಗ ಮನಗಳಿಗೆ ಸಂಪರ್ಕ ಹೊಂದಿವೆ, ಯಾವುದೇ ಅನಿರೀಕ್ಷಿತ ಸಂದರ್ಭದಲ್ಲಿ ಸುರಕ್ಷಿತ ಸ್ಥಳಾಂತ ರಿಸುವ ಮಾರ್ಗವನ್ನು ಖಾತ್ರಿಪಡಿಸುತ್ತದೆ. ಮೊದಲ ಮಹಡಿಯಲ್ಲಿ ಆಹಾರ ಪ್ಲಾಜಾ, ವೇಟಿಂಗ್ ಹಾಲ್, ಶೌಚಾಲಯಗಳು, ಕುಡಿಯುವ ನೀರಿನ ನಿಲ್ದಾಣಗಳು, ಎಸ್ಕಲೇಟರ್‌ಗಳು, ಲಿಫ್ಟ್‌ಗಳು, ಸಿಬ್ಬಂದಿ ಕೊಠಡಿಗಳು, ಅಂಗಡಿಗಳು, ಕಾಯುವ ಕೊಠಡಿಗಳು ಮತ್ತು ಪ್ರವೇಶ ಪಾದಚಾರಿ ಸೇತುವೆಯಂತಹ ಹೆಚ್ಚುವರಿ ಸೌಲಭ್ಯ ಸಹ ಒಳಗೊಂಡಿರುತ್ತದೆ.

## ಅಯೋಧ್ಯೆಯ ರಾಮಮಂದಿರಕ್ಕೆ ಹನುಮಾನ್ ಧ್ವಜ ಹೊಲಿದ ಮುಸ್ಲಿಂ ಟೈಲರ್

**ಅಯೋಧ್ಯೆ:** ಅಯೋಧ್ಯೆಯ ರಾಮ ಮಂದಿರದಲ್ಲಿ ರಾಮಲಲ್ಲಾ ಪ್ರಾಣ ಪ್ರತಿಷ್ಠಾಪನೆಗೆ ಇನ್ನು ಒಂದು ತಿಂಗಳು ಬಾಕಿ ಇರುವಾಗಲೇ ರಾಮ ಮತ್ತು ಹನುಮಾನ್ ಧ್ವಜಗಳಿಗೆ ಭಾರಿ ಬೇಡಿಕೆ ಕಂಡು ಬಂದಿದೆ.

ಇನ್ನು 40 ಅಡಿ ಉದ್ದ ಮತ್ತು 42 ಅಡಿ ಅಗಲದ ಹನುಮಾನ್ ಧ್ವಜವನ್ನು ಮುಸ್ಲಿಂ ಟೈಲರ್ ಗುಲಾಮ್ ಜಿಲಾನಿ(55) ಅವರು ಹೊಲಿದಿದ್ದಾರೆ. ಈ ಭವ್ಯವಾದ ಧ್ವಜ ಜನವರಿ 22 ರಂದು ಅಯೋಧ್ಯೆಯ ರಾಮಮಂದಿರದ ಮೇಲೆ ಹಾರಿಸಲು ಸಿದ್ಧವಾಗಿದೆ. ಜಿಲಾನಿ ಮೂರನೇ ತಲೆಮಾರಿನ ಟೈಲರ್ ಆಗಿದ್ದು, ಜಾರ್ಖಂಡ್‌ನ ಹಜಾರಿಬಾಗ್ ಜಿಲ್ಲೆಯಲ್ಲಿ ಧಾರ್ಮಿಕ 'ಮಹಾವೀರಿ' ಧ್ವಜಗಳನ್ನು ತಯಾರಿಸುವಲ್ಲಿ ಪರಿಣತಿ ಪಡೆದಿದ್ದಾರೆ.

100 ಕೋಟಿಗೂ ಹೆಚ್ಚು ಜನರು ಕನಸು ಕಾಣುತ್ತಿರುವ ಐತಿಹಾಸಿಕ ರಾಮ ಮಂದಿರವನ್ನು ನಾನೇ ಹೊಲಿದ ಧ್ವಜ ಅಲಂಕರಿಸುತ್ತಿದೆ ಎಂಬ ಹೆಮ್ಮೆ ನನಗೆ ಇದೆ. ನನಗೆ ಅವಕಾಶ ಸಿಕ್ಕರೆ, ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಲು ಖಂಡಿತವಾಗಿಯೂ ಅಯೋಧ್ಯೆಗೆ ಹೋಗುತ್ತೇನೆ ಎಂದು ಜಿಲಾನಿ ಪಿಟಿಐಗೆ ತಿಳಿಸಿದ್ದಾರೆ.



ಪ್ರಧಾನಿ ನರೇಂದ್ರ ಮೋದಿ ಜನವರಿ 22 ರಂದು ರಾಮ ಮಂದಿರದಲ್ಲಿ 'ಪ್ರಾಣ ಪ್ರತಿಷ್ಠಾಪನೆ' ಅಥವಾ ರಾಮಲಲ್ಲಾ ಮೂರ್ತಿಯ ಪ್ರತಿಷ್ಠಾಪನೆ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ತಮ್ಮ ತಂದೆ ದಿ. ಅಬ್ದುಲ್ ಶಕುರ್ ಅವರಿಂದ ತಾನು ಹೊಲಿಗೆ ಕಲಿತಿರುವುದಾಗಿ ಜಿಲಾನಿ ಹೇಳಿದ್ದಾರೆ. ನಾನು ನನ್ನ ತಂದೆಯೊಂದಿಗೆ ವೀರ್ ವಸ್ತ್ರಾಲಯದ ಮುಂಭಾಗದಲ್ಲಿರುವ ಫತೇಲಾಲ್ ಅಗರ್ವಾಲ್ ಒಡೆತನದ ಭೋಲಾ ವಸ್ತ್ರಾಲಯದಲ್ಲಿ ಕೆಲಸ ಮಾಡುತ್ತಿದ್ದೆ, ಅಲ್ಲಿ ನಾನು ಪ್ರಸ್ತುತ ಉದ್ಯೋಗದಲ್ಲಿದ್ದೇನೆ ಎಂದು ಅವರು ತಿಳಿಸಿದ್ದಾರೆ. 40 ಅಡಿಯ ಹನುಮಾನ್ ಧ್ವಜದಲ್ಲಿ ಒಂದು ಬದಿಯಲ್ಲಿ ಹನುಮಾನ್ ಮತ್ತು ಇನ್ನೊಂದು ಬದಿಯಲ್ಲಿ ಹನುಮಂತನ ಭುಜದ ಮೇಲೆ ರಾಮ ಮತ್ತು ಲಕ್ಷ್ಮಣನ ಚಿತ್ರಗಳನ್ನು ಹೊಂದಿದೆ ಎಂದು ವೀರ್ ವಸ್ತ್ರಾಲಯದ ಮಾಲೀಕ ದೇವೇಂದ್ರ ಜೈನ್ ಹೇಳಿದ್ದಾರೆ.

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com*

ಮೈಸೂರು ಮಿತ್ರ ಗುರುವಾರ 28 ಡಿಸೆಂಬರ್ 2023

# ಕನ್ನಡ ನಾಮಫಲಕ ಕಡ್ಡಾಯಕ್ಕೆ ಆಗ್ರಹ: ಹಿಂಸಾಚಾರಕ್ಕೆ ತಿರುಗಿದ ಪ್ರತಿಭಟನೆ

● ಕರವೇ ಅಧ್ಯಕ್ಷ ನಾರಾಯಣಗೌಡ ಸೇರಿ ಹಲವರು ವಶಕ್ಕೆ ● ಇಂಗ್ಲಿಷ್ ನಾಮಫಲಕ ಧ್ವಂಸ ಪ್ರಕರಣದಲ್ಲಿ 15 ಮಂದಿ ವಿರುದ್ಧ ಎಫ್ಐಆರ್

**ಬೆಂಗಳೂರು:** ಕನ್ನಡ ನಾಮಫಲಕ ಕಡ್ಡಾಯ ಗೊಳಿಸುವಂತೆ ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ನಡೆಸುತ್ತಿದ್ದ ಪ್ರತಿಭಟನಾ ರ್‍ಯಾಲಿ ಹಿಂಸಾಚಾರಕ್ಕೆ ತಿರುಗಿದ್ದು, ಕರವೇ ಅಧ್ಯಕ್ಷ ನಾರಾಯಣಗೌಡ ಸೇರಿ ಹಲವು ಕಾರ್ಯಕರ್ತರನ್ನು ಪೊಲೀಸರು ಬುಧವಾರ ವಶಕ್ಕೆ ಪಡೆದುಕೊಂಡಿದ್ದಾರೆ. ಇಂಗ್ಲಿಷ್ ನಾಮಫಲಕಗಳನ್ನು ಧ್ವಂಸ ಮಾಡಿದ ಆರೋಪದ ಮೇರೆಗೆ 15 ಮಂದಿ ಕರವೇ ಕಾರ್ಯಕರ್ತರ ವಿರುದ್ಧ ಕಬ್ಬನ್ ಪಾರ್ಕ್ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದೆ.

ಬುಧವಾರ ಬೆಳಗ್ಗೆ 11 ಗಂಟೆಗೆ ಕರವೇ ಕಾರ್ಯಕರ್ತರು ದೇವನಹಳ್ಳಿಯ ಸಾದಹಳ್ಳಿ ಟೋಲ್‌ನಿಂದ ಬೆಂಗಳೂರು ಕಬ್ಬನ್ ಪಾರ್ಕ್‌ವರೆಗೆ ರ್‍ಯಾಲಿ ಆರಂಭಿಸಿದ್ದರು. ಅಲ್ಲದೆ, ಕಾರ್ಯಕರ್ತರು ನಗರದ ವಿವಿಧೆಡೆ ವಿಶೇಷವಾಗಿ ವ್ಯಾಪಾರ ಕೇಂದ್ರಗಳಾದ ಎಂಜಿ ರಸ್ತೆ, ಬ್ರಿಗೇಡ್ ರಸ್ತೆ, ಲ್ಯಾವೆಲ್ಲೆ ರಸ್ತೆ, ಚಾಮರಾಜಪೇಟೆ, ಚಿಕ್ಕಪೇಟೆ, ಕೆಂಪೇಗೌಡ ರಸ್ತೆ, ಗಾಂಧಿನಗರ, ಸೇಂಟ್ ಮಾರ್ಕ್ಸ್ ರಸ್ತೆ, ಕನ್ನಿಂಗ್‌ಹ್ಯಾಮ್ ರಸ್ತೆ, ರೆಸಿಡೆನ್ಸಿ ರಸ್ತೆ, ಕೆಆರ್ ಪುರಂ, ಹೆಬ್ಬಾಳದಲ್ಲಿ ರ್‍ಯಾಲಿ ನಡೆಸಿದರು. ಇದರಂತೆ ಲಾವೆಲ್ಲೆ ರಸ್ತೆ ಮತ್ತು



ಯುಬಿ ಸಿಟಿ ಸುತ್ತಮುತ್ತಲು ಕರವೇ ಕಾರ್ಯಕರ್ತರು ಕಲ್ಲು ತೂರಾಟ ನಡೆಸಿದ್ದು, ಇಂಗ್ಲಿಷ್‌ನಲ್ಲಿದ್ದ ಕೆಲವು ಬೋರ್ಡ್‌ಗಳಿಗೆ ಕಪ್ಪು ಬಣ್ಣ ಬಳಿದು ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆ ವೇಳೆ ಉಪಸ್ಥಿತರಿದ್ದ ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ನಾರಾಯಣಗೌಡ ಮಾತನಾಡಿ, ಮಾಲ್ ಆಫ್ ಏಷ್ಯಾ ಮಾಲೀಕರು ಮತ್ತು ಇತರ ಮಾಲ್ ಮಾಲೀಕರು ಶೇ. 60 ಕನ್ನಡ ನಾಮಫಲಕ ನಿಯಮಗಳನ್ನು ಪಾಲನೆ ಮಾಡುತ್ತಿಲ್ಲ. ಇವರು ಪೊಲೀಸರ ರಕ್ಷಣೆ ತೆಗೆದುಕೊಂಡಿರಬಹುದು. ಆದರೆ, ನಿಯಮಗಳನ್ನು ಪಾಲಿಸದಿದ್ದರೆ, ಕನ್ನಡಕ್ಕೆ ಆದ್ಯತೆ ನೀಡದಿದ್ದರೆ, ಕರವೇ ಕಾರ್ಯಕರ್ತರು ಆಸ್ತಿಪಾಸ್ತಿಗಳನ್ನು ನಾಶಪಡಿಸುತ್ತಾರೆಂದು ಎಚ್ಚರಿಸಿದರು.

ಇದೇ ವೇಳೆ ದೇವನಹಳ್ಳಿ ಟೋಲ್‌ಗೇಟ್ ಬಳಿ ಪೊಲೀಸರು ನಾರಾಯಣಗೌಡ ಮತ್ತು ರಾಜ್ಯ ಕಾರ್ಯದರ್ಶಿ ಸಣ್ಣ ಈರಪ್ಪ ಅವರನ್ನು ಮುಂಜಾಗ್ರತಾ ಕ್ರಮವಾಗಿ ವಶಕ್ಕೆ ಪಡೆದುಕೊಂಡರು.

ನಿನ್ನೆಯಷ್ಟೇ ವಾಣಿಜ್ಯ ಮಳಿಗೆಗಳ ನಾಮಫಲಕಗಳಲ್ಲಿ ಶೇ.60ರಷ್ಟು ಕನ್ನಡ ಭಾಷೆಯನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸುವ ಕುರಿತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಸಭೆ ನಡೆಸಿ, 15 ದಿನಗಳಲ್ಲಿ ಕನ್ನಡ ನಾಮಫಲಕಗಳ ಹಾಕುವಂತೆ ವಾಣಿಜ್ಯ ಮಳಿಗೆಗಳ ಮಾಲೀಕರಿಗೆ ಸೂಚನೆ ನೀಡಿದ್ದರು.

## 5, 8, 9ನೇ ತರಗತಿ ವಿದ್ಯಾರ್ಥಿಗಳಿಗೆ ಪಬ್ಲಿಕ್ ಪರೀಕ್ಷೆ: ವೇಳಾಪಟ್ಟಿ ಪ್ರಕಟ



**ಬೆಂಗಳೂರು:** ಪ್ರಸಕ್ತ ಶೈಕ್ಷಣಿಕ ವರ್ಷದಿಂದ 5, 8 ಮತ್ತು 9ನೇ ತರಗತಿಗಳಿಗೆ ಪಬ್ಲಿಕ್ ಪರೀಕ್ಷೆ ನಡೆಸಲು ನಿರ್ಧರಿಸಿರುವ ಕರ್ನಾಟಕ ಶಾಲಾ ಪರೀಕ್ಷಾ ಮಂಡಳಿ ವೇಳಾಪಟ್ಟಿಯನ್ನು ಪ್ರಕಟಿಸಿದೆ.

ಶೈಕ್ಷಣಿಕ ವರ್ಷ 2023–24ರಲ್ಲಿ 5, 8 ಮತ್ತು 9ನೇ ತರಗತಿಗಳಿಗೆ 2024ರ ಮಾರ್ಚ್‌ನಲ್ಲಿ ಪಬ್ಲಿಕ್ ಪರೀಕ್ಷೆ ನಡೆಸಲು ಕರ್ನಾಟಕ ಶಾಲಾ ಪರೀಕ್ಷಾ ಮಂಡಳಿ ಯೋಜಿಸಿದೆ. ವೇಳಾಪಟ್ಟಿ ಪ್ರಕಾರ, ಮಾರ್ಚ್ 11ರಿಂದ 18ರವರೆಗೆ ಪಬ್ಲಿಕ್ ಪರೀಕ್ಷೆ ನಡೆಯಲಿದೆ. ಹೀಗಾಗಿ ಪರೀಕ್ಷೆಗೆ ಸಜ್ಜಾಗುವಂತೆ ಕರ್ನಾಟಕ ಶಾಲಾ ಪರೀಕ್ಷಾ ಮಂಡಳಿ ಸೂಚನೆ ನೀಡಿದೆ. ಪರೀಕ್ಷಾ ತಾತ್ಕಾಲಿಕ ವೇಳಾಪಟ್ಟಿ ಬಗ್ಗೆ ಅಧಿಕೃತ ವೆಬ್‌ಸೈಟ್‌ನಲ್ಲೂ ಕಾಣಬಹುದು. ಗಮನಾರ್ಹವಾಗಿ, 5, 8 ಮತ್ತು 9ನೇ ತರಗತಿಗಳಿಗಾಗಿ ನಡೆಯಲಿರುವ ಪಬ್ಲಿಕ್ ಪರೀಕ್ಷೆಗೆ ಈ ಬಾರಿ ಪರೀಕ್ಷಾ ಮಂಡಳಿಯೇ ಪ್ರಶ್ನೆ ಪತ್ರಿಕೆ ಸಿದ್ಧಪಡಿಸಲಿದೆ.

**5ನೇ ತರಗತಿ ಪರೀಕ್ಷಾ ವೇಳಾ ಪಟ್ಟಿ:** ಮಾ.11–ಪ್ರಥಮ ಭಾಷೆ ಕನ್ನಡ, ಮಾ.12 ದ್ವಿತೀಯ ಭಾಷೆ ಇಂಗ್ಲಿಷ್, ಮಾ.13 ಪರಿಸರ ಅಧ್ಯಯನ, ಮಾ.14ರಂದು ಗಣಿತ ಪರೀಕ್ಷೆ ನಡೆಯಲಿದೆ. ಈ ಎಲ್ಲ ಪರೀಕ್ಷೆಗಳು ಮಧ್ಯಾಹ್ನ 2.30ರಿಂದ 4.30ರವರೆಗೆ ನಡೆಯಲಿವೆ.

**8–9ನೇ ತರಗತಿ ಪಬ್ಲಿಕ್ ಪರೀಕ್ಷೆ ವೇಳಾಪಟ್ಟಿ:** ಮಾ.11 ಪ್ರಥಮ ಭಾಷೆ ಕನ್ನಡ, ಮಾ.12 ದ್ವಿತೀಯ ಭಾಷೆ ಇಂಗ್ಲಿಷ್, ಮಾ.13 ತೃತೀಯ ಭಾಷೆ ಹಿಂದಿ, ಮಾ.14 ಗಣಿತ, ಮಾ.15 ವಿಜ್ಞಾನ, ಮಾ.16 ಸಮಾಜ ವಿಜ್ಞಾನ, ಮಾ.18ರಂದು ದೈಹಿಕ ಶಿಕ್ಷಣ.

ಪರೀಕ್ಷೆಗಳು ಮಧ್ಯಾಹ್ನ 2.30ರಿಂದ ಸಂಜೆ 5ರವರೆಗೆ ನಡೆಯಲಿವೆ. ಎಲ್ಲ ವಿದ್ಯಾರ್ಥಿಗಳಿಗೆ ಆಯಾ ಶಾಲಾ ಹಂತದಲ್ಲಿಯೇ ಪರೀಕ್ಷೆಗಳನ್ನು ನಡೆಸಲಾಗುತ್ತದೆ. ತಾಲೂಕು ಹಂತದಲ್ಲಿ ಮೌಲ್ಯಮಾಪನ ನಡೆಸಲಾಗುತ್ತದೆ. ಆದರೆ, ಮಂಡಳಿಯಿಂದಲೇ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ ಬಿಇಓಗಳಿಗೆ ಕಳುಹಿಸಲಾಗುತ್ತದೆ. ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮಗೆ ಅವಶ್ಯವಿರುವಷ್ಟು ಪ್ರಶ್ನೆಪತ್ರಿಕೆಗಳನ್ನು ಮುದ್ರಿಸಿಕೊಂಡು ತಮ್ಮ ವ್ಯಾಪ್ತಿಯ ಶಾಲೆಗಳಿಗೆ ವಿತರಣೆ ಮಾಡಲಿದ್ದಾರೆ.

## ಜ.1ರಂದು ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ



ಮೈಸೂರು ಡಿ.27– ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೈಸೂರು ಮತ್ತು ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಜಯಂತ್ಯುತ್ಸವ ಸಮಿತಿ, ಸಂಯುಕ್ತಾಶ್ರಯದಲ್ಲಿ 2024ರ ಜನವರಿ 1ರಂದು ಬೆಳಗ್ಗೆ 10.30ಕ್ಕೆ ಕಲಾಮಂದಿರದಲ್ಲಿ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಘನ ಉಪಸ್ಥಿತಿಯಲ್ಲಿ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಉದ್ಘಾಟಿಸಲಿದ್ದು, ಪಶುಸಂಗೋಪನೆ ಸಚಿವ ಕೆ.ವೆಂಕಟೇಶ್ ಉಪಸ್ಥಿತಿಯಲ್ಲಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ಕೆ.ಹರೀಶ್‌ಗೌಡ ವಹಿಸುವರು. ಮುಖ್ಯ ಅತಿಥಿಗಳಾಗಿ ಸಂಸದರಾದ ಪ್ರತಾಪ್ ಸಿಂಹ, ಶ್ರೀನಿವಾಸ್ ಪ್ರಸಾದ್, ಸುಮಲತಾ ಅಂಬರೀಶ್ ಭಾಗವಹಿಸುವರು. ಸಮಾರಂಭದ ಅತಿಥಿಗಳಾಗಿ ಶಾಸಕರಾದ ತನ್ವೀರ್ ಸೇಠ್, ಅನಿಲ್‌ಕುಮಾರ್, ಜಿ.ಟಿ.ದೇವೇಗೌಡ, ರವಿಶಂಕರ್, ಶ್ರೀವತ್ಸ, ದರ್ಶನ್ ಧ್ರುವನಾರಾಯಣ್, ಜಿ.ಡಿ.ಹರೀಶ್‌ಗೌಡ, ವಿಧಾನಪರಿಷತ್ ಸದಸ್ಯರಾದ ಮರಿತಿಬ್ಬೇಗೌಡ, ಹೆಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಮಧು ಜಿ.ಮಾದೇಗೌಡ ಹಾಗೂ ಸಿ.ಎನ್. ಮಂಜೇಗೌಡ ಭಾಗವಹಿಸುವರು. ಮುಖ್ಯ ಭಾಷಣಕಾರರಾಗಿ ಪ್ರಾಧ್ಯಾಪಕ ಡಾ.ಕೆಂಪೇಗೌಡ ಭಾಗವಹಿಸುವರು ಎಂದು ಕನ್ನಡ–ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಡಿ.27–ಡಿಸೆಂಬರ್ 28ರಂದು ಬೆಳಗ್ಗೆ 10ರಿಂದ ಸಂಜೆ 5.30ರವರೆಗೆ ನಿರ್ವಹಣಾ ಕಾಮಗಾರಿ ಹಮ್ಮಿಕೊಳ್ಳಲಾಗಿದ್ದು, ದೂರ, ತಳೂರು, ಮುರುಡಗಳ್ಳಿ, ದೊಡ್ಡಕಾಟೂರು, ಚಿಕ್ಕ ಕಾಟೂರು, ಸಿಂಧುವಳ್ಳಿ ಗ್ರಾಮ, ನಂಜುಂಡೇಶ್ವರ ಬಡಾವಣೆ ಹಾಗೂ ಸುತ್ತ–ಮುತ್ತ ಮತ್ತು ನಂಜನಗೂಡು ವಿಭಾಗ ವ್ಯಾಪ್ತಿಗೆ ಒಳಪಡುವ ಹಳ್ಳಿಕೆರೆ ಹುಂಡಿ, ಬಿದರಗೂಡು, ಮೂಡಲಹುಂಡಿ (ಕಾಟೂರು) ನೀರು ಸರಬರಾಜು ಕೇಂದ್ರ ಹಾಗೂ ಸುತ್ತಮುತ್ತ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ನರಾಮೊಹಲ್ಲಾ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಂಯಮ ಪ್ರಶಸ್ತಿಗೆ ಅರ್ಜಿ ಆಹ್ವಾನ

ಮೈಸೂರು,ಡಿ.27–ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ 2023–24ನೇ ಸಾಲಿನ ಸಂಯಮ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ. ವ್ಯಸನ ಮುಕ್ತ ಸಮಾಜ ನಿರ್ಮಿಸುವಲ್ಲಿ ವಿಶಿಷ್ಟ ಸಾಧನೆ ಮಾಡಿರುವ ಸಾಧಕರು ಹಾಗೂ ಸಂಘ ಸಂಸ್ಥೆಗಳು 2024 ಜನವರಿ 15ರೊಳಗೆ ಅರ್ಜಿ ಸಲ್ಲಿಸಬಹುದು. ಅರ್ಜಿಯನ್ನು kar-tempera nce@gmail.com ಕಾರ್ಯದರ್ಶಿಗಳು, ರಾಜ್ಯ ಮದ್ಯಪಾನ ಸಂಯಮ ಮಂಡಳಿ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, 6ನೇ ಮಹಡಿ, ಡಾ.ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು–560001 ಈ ವಿಳಾಸಕ್ಕೆ ಕಳುಹಿಸುವಂತೆ ಪ್ರಕಟಣೆ ತಿಳಿಸಿದೆ.

## ಕಮಿಷನ್ ಆಸೆಗೆ ಬಿದ್ದು 10.57 ಲಕ್ಷ ಕಳೆದುಕೊಂಡ ಉದ್ಯೋಗಿ




ಮೈಸೂರು,ಡಿ. 27–ಹಣ ಹೂಡಿಕೆ ಮಾಡಿ ಟಾಸ್ಕ್ ಕಂಪ್ಲೀಟ್ ಮಾಡಿದರೆ ದುಪ್ಪಟ್ಟು ಕಮಿಷನ್ ಸಿಗುತ್ತದೆ ಎಂದು ನಂಬಿಸಿ ಕಂಪ್ಯೂಟರ್ ಉದ್ಯೋಗಿಗೆ ಆನ್‌ಲೈನ್ ಮೂಲಕ 10.57 ಲಕ್ಷ ರೂ. ವಂಚಿಸಲಾಗಿದೆ.

ಮೈಸೂರಿನ ಹೂಟಗಳ್ಳಿ ಎಸ್‌ಆರ್‌ಎಸ್ ಕಾಲೋನಿ ನಿವಾಸಿ ಬಿ.ಎಸ್.ಪದ್ಮನಾಭ (28) ವಂಚನೆಗೊಳಗಾದವರಾಗಿದ್ದು, ಇವರಿಗೆ ಟೆಗ್ರಾಂ ಆ್ಯಪ್ ಮೂಲಕ ಪಾರ್ಟ್‌ಟೈಂ ಕೆಲಸ ಇರುವುದಾಗಿ ಸಂದೇಶ ರವಾನಿಸಲಾಗಿದೆ. ಸಂದೇಶಕ್ಕೆ ಅವರು ಸ್ಪಂದಿಸಿದಾಗ ವೆಬ್‌ಸೈಟ್‌ವೊಂದರಲ್ಲಿ ರಿಜಿಸ್ಟರ್ ಆಗುವಂತೆ ತಿಳಿಸಿದ್ದು, ವೆಬ್‌ಸೈಟ್ ಮೂಲಕ ಟಾಸ್ಕ್ ಕಂಪ್ಲೀಟ್ ಮಾಡಿದರೆ ದುಪ್ಪಟ್ಟು ಕಮಿಷನ್ ದೊರೆಯುತ್ತದೆ ಎಂದು ನಂಬಿಸಲಾಗಿದೆ. ಪದ್ಮನಾಭ ಅವರು ಮೊದಲಿಗೆ 10 ಸಾವಿರ ರೂ. ಹೂಡಿಕೆ ಮಾಡಿ ಟಾಸ್ಕ್ ಪೂರೈಸಿದಾಗ ಅವರ ಖಾತೆಗೆ ಕಮಿಷನ್ ಸೇರಿ 20,535 ರೂ. ವರ್ಗಾವಣೆ ಮಾಡಲಾಗಿದೆ. ನಂತರ ಅವರು 50,023 ರೂ. ಹೂಡಿಕೆ ಮಾಡಿ ಟಾಸ್ಕ್ ಕಂಪ್ಲೀಟ್ ಮಾಡಿದಾಗ ಕಮಿಷನ್ ಸೇರಿ 72,723 ರೂ. ವರ್ಗಾವಣೆ ಮಾಡಲಾಗಿದೆ. ಇದರಿಂದಾಗಿ ಪದ್ಮನಾಭ ಅವರಿಗೆ ಈ ಟಾಸ್ಕ್ ಬಗ್ಗೆ ನಂಬಿಕೆ ಹುಟ್ಟಿದ್ದು, ಅವರು, ಹಂತ ಹಂತವಾಗಿ 10,57,476 ರೂ. ಹೂಡಿಕೆ ಮಾಡಿದ್ದಾರೆ. ನಂತರ ತಮ್ಮ ಹಣವನ್ನು ಹಿಂಪಡೆಯಲು ಅವರು ಪ್ರಯತ್ನಿಸಿದಾಗ ಮತ್ತೆ 5.40 ಲಕ್ಷ ರೂ. ಡಿಪಾಸಿಟ್ ಮಾಡಿದರೆ ಮಾತ್ರ ಹೂಡಿಕೆ ಮಾಡಿದ ಹಣ ಮತ್ತು ಕಮಿಷನ್ ಡ್ರಾ ಮಾಡಬಹುದು ಎಂದು ತಿಳಿಸಿದಾಗ ಅವರಿಗೆ ತಾವು ಮೋಸ ಹೋಗಿರುವುದು ಅರಿವಾಗಿ ಮೈಸೂರು ನಗರ ಸೆನ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ.

## ಬೈಕ್‌ಗೆ ಬಸ್ ಡಿಕ್ಕಿ: ಸರ್ವೇಯರ್ ಸಾವು

ಬನ್ನೂರು,ಡಿ.27–ಬೈಕ್‌ಗೆ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದ ಪರಿಣಾಮ ಸರ್ವೇಯರ್ ಸಾವನ್ನಪ್ಪಿದ ಘಟನೆ ಮಳವಳ್ಳಿ–ಮೈಸೂರು ಮುಖ್ಯ ರಸ್ತೆಯ ನಂಜಾಪುರ ಬಳಿ ಸಂಭವಿಸಿದೆ.

ತಿ.ನರಸೀಪುರ ತಾಲೂಕು ಚಾಮನಹಳ್ಳಿ ಗ್ರಾಮದ ಸರ್ವೇಯರ್ ಪಿ. ಪ್ರವೀಣ್(28) ಅಪಘಾತದಲ್ಲಿ ಸಾವನ್ನಪ್ಪಿದವರಾಗಿದ್ದು, ಇವರು ಡಿ. 25ರಂದು ಮಧ್ಯಾಹ್ನ 3 ಗಂಟೆ ಸುಮಾರಿನಲ್ಲಿ ಮಳವಳ್ಳಿ–ಮೈಸೂರು ಮುಖ್ಯ ರಸ್ತೆಯಲ್ಲಿ ತಮ್ಮ ಬೈಕ್ (ಕೆಎ 09–ಹೆಚ್‌ಎಲ್ 3565)ನಲ್ಲಿ ಬರುತ್ತಿದ್ದಾಗ ಹಿಂಬದಿಯಿಂದ ಬಂದ ಕೆಎಸ್‌ಆರ್‌ಟಿಸಿ ಬಸ್ (ಕೆಎ 11–ಎಫ್ 0391) ಚಾಲಕ ಅಜಾಗರೂಕತೆಯಿಂದ ಇವರ ಬೈಕ್ ಅನ್ನು ಓವರ್‌ಟೇಕ್ ಮಾಡಿ ಎಡಕ್ಕೆ ತಿರುಗಿಸಿದ ವೇಳೆ ಬಸ್‌ನ ಲಗ್ಗೇಜ್ ಬಾಕ್ಸ್ ಭಾಗ ಬೈಕ್‌ನ ಬಲಭಾಗಕ್ಕೆ ಡಿಕ್ಕಿ ಹೊಡೆದ ಪರಿಣಾಮ ರಸ್ತೆಯಲ್ಲಿ ಬಿದ್ದ ಪ್ರವೀಣ್ ತೀವ್ರವಾಗಿ ಗಾಯಗೊಂಡಿದ್ದು, ಇವರಿಗೆ ಬನ್ನೂರು ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಚಿಕಿತ್ಸೆ ಫಲಕಾರಿಯಾಗದೇ ಅವರು ಡಿಸೆಂಬರ್ 26ರಂದು ಮುಂಜಾನೆ 4.15ರ ಸುಮಾರಿನಲ್ಲಿ ಸಾವನ್ನಪ್ಪಿದ್ದಾರೆ. ಈ ಸಂಬಂಧ ಬನ್ನೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಕಾಂತರಾಜು ವರದಿ ಜಾರಿಗೆ ಒತ್ತಾಯಿಸಿ ಚಿತ್ರದುರ್ಗದಲ್ಲಿ ಜ.28, ಅಹಿಂದಾ ಸಮಾವೇಶ

**ಬೆಂಗಳೂರು:** ಕಾಂತರಾಜು ಕಮಿಟಿ ವರದಿ ಜಾರಿಗೆ ಒತ್ತಾಯಿಸಿ ಜ. 28ರಂದು ಬೃಹತ್ ಅಹಿಂದಾ ಸಮಾವೇಶ ನಡೆಸಲು ಶೋಷಿತ ಹಾಗೂ ಹಿಂದುಳಿದ ವರ್ಗಗಳ ಮಹಾ ಒಕ್ಕೂಟ ನಿರ್ಧರಿಸಿದೆ.

ಕೋಟೆ ನಾಡು ಚಿತ್ರದುರ್ಗದಲ್ಲಿ ಸಮಾವೇಶ ನಡೆಯಲಿದೆ. ಈ ಹಿಂದೆ ಡಿಸೆಂಬರ್ 30ಕ್ಕೆ ಸಮಾವೇಶ ನಿಗದಿಯಾಗಿತ್ತು. ಅಂತಿಮವಾಗಿ ಜನವರಿ 28ರಂದು ಸಮಾವೇಶ ಆಯೋಜನೆಗೆ ತೀರ್ಮಾನ ಮಾಡಲಾಗಿದೆ. ಶೋಷಿತರ ಜಾಗೃತಿ ಸಮಾವೇಶ ಎಂಬ ಹೆಸರಿನಡಿಯಲ್ಲಿ ಕಾರ್ಯಕ್ರಮ ನಡೆಸಲು ತೀರ್ಮಾನಿಸಲಾಗಿದ್ದು, ಬೆಳಗ್ಗೆ 11 ಗಂಟೆಗೆ ಚಿತ್ರದುರ್ಗದ ಶ್ರೀ ಬಸವ ಮೂರ್ತಿ ಮಾದರ ಚೆನ್ನಯ್ಯ ಪೀಠದ ಪಕ್ಕದ ಮೈದಾನದಲ್ಲಿ ಸಮಾವೇಶ ಆಯೋಜಿಸಲಾಗಿದೆ.

ಪ್ರಬಲ ಸಮುದಾಯಗಳ ವಿರೋಧಕ್ಕೆ ಸೆಡ್ಡು ಹೊಡೆಯಲು ಸಮಾವೇಶ ಆಯೋಜಿಸಲಾಗಿದ್ದು, ಸಿಎಂ ಸಿದ್ದರಾಮಯ್ಯ ಅವರನ್ನು ಸಮಾವೇಶಕ್ಕೆ ಆಹ್ವಾನಿಸಲು ತೀರ್ಮಾನಿಸಲಾಗಿದೆ. ಅಲ್ಪಸಂಖ್ಯಾತ, ದಲಿತ, ಎಸ್‌ಸಿ, ಎಸ್‌ಟಿ ರಾಜಕೀಯ ನಾಯಕರಿಗೂ ಆಹ್ವಾನ ನೀಡಲು ತೀರ್ಮಾನಿಸಲಾಗಿದ್ದು, ಈ ಮೂಲಕ ಅಹಿಂದಾ ವರ್ಗ ಶಕ್ತಿ ಪ್ರದರ್ಶನಕ್ಕೆ ಸಜ್ಜಾಗಿದೆ.


**ಸಮಾವೇಶದ ಹಕ್ಕೊತ್ತಾಯಗಳು**

* ಹೆಚ್. ಕಾಂತರಾಜು ವರದಿಯನ್ನು ರಾಜ್ಯ ಸರ್ಕಾರ ಸ್ವೀಕರಿಸಿ, ಯಥವತ್ತಾಗಿ ಅಂಗೀಕರಿಸಿ ಜಾರಿಗೊಳಿಸಬೇಕು. * ಕೇಂದ್ರ ಸರ್ಕಾರವು ಜಾತಿವಾರು ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸಮೀಕ್ಷೆ ಮಾಡಿಸಬೇಕು. * EWS 10% ಮೀಸಲಾತಿಯನ್ನು ರದ್ದುಪಡಿಸುವಂತೆ ಒತ್ತಾಯಿಸುವುದು. * ಮಹಿಳಾ ರಾಜಕೀಯ ಮೀಸಲಾತಿ ಕಾಯ್ದೆಯನ್ನು ಕೂಡಲೇ ಜಾರಿ ಮಾಡಬೇಕು. ರಾಜಕೀಯ ಕ್ಷೇತ್ರದಲ್ಲೂ ಒಳ ಮೀಸಲಾತಿ ಕಲ್ಪಿಸಬೇಕು. * ರಾಜಕೀಯ ಮೀಸಲಾತಿಯನ್ನು ಲೋಕಸಭೆ, ವಿಧಾನ ಸಭೆಗಳಲ್ಲಿ ಹಿಂದುಳಿದ ಜಾತಿಗಳಿಗೆ ಮತ್ತು ಅಲ್ಪಸಂಖ್ಯಾತರಿಗೆ ಅವಕಾಶ ಕಲ್ಪಿಸಬೇಕು * ಜನಸಂಖ್ಯೆ ಅನುಗುಣವಾಗಿ ಶೇಕಡವಾರು ಪ್ರಮಾಣದಲ್ಲಿ ಮೀಸಲಾತಿಯನ್ನು ಹೆಚ್ಚಿಸಬೇಕು. ಖಾಸಗಿ ಕ್ಷೇತ್ರಕ್ಕೂ ಮೀಸಲಾತಿ ವಿಸ್ತರಿಸಬೇಕು.

ಈ ಎಲ್ಲಾ ಹಕ್ಕೊತ್ತಾಯದೊಂದಿಗೆ ಅಹಿಂದ ಸಮಾವೇಶಕ್ಕೆ ನಿರ್ಧರಿಸಲಾಗಿದೆ. ಸಮಾವೇಶಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಆಹ್ವಾನ ನೀಡಿ ಶೋಷಿತ ಸಮುದಾಯಗಳ ಮಹಾ ಒಕ್ಕೂಟ ಕುತೂಹಲ ಮೂಡಿಸಿದೆ. ತಾಂತ್ರಿಕವಾಗಿ ಸಿಎಂ ಸಿದ್ದರಾಮಯ್ಯ ಸಮಾವೇಶದಲ್ಲಿ ಭಾಗವಹಿಸುವುದು ಕಷ್ಟ, ಆದ್ದರಿಂದ ಈ ಬೃಹತ್ ಸಮಾವೇಶದಲ್ಲೇ ಎರಡನೇ ಬಾರಿಗೆ ಮುಖ್ಯಮಂತ್ರಿ ಆದ ಸಿದ್ದರಾಮಯ್ಯ ಅವರಿಗೆ ಬೃಹತ್ ಅಭಿನಂದನೆ ಹಾಗೂ ಸನ್ಮಾನ ಮಾಡುವ ಬಗ್ಗೆಯೂ ಅಹಿಂದ ವರ್ಗದ ನಾಯಕರು ಚಿಂತನೆ ನಡೆಸಿದ್ದಾರೆ. ಸಮಾವೇಶದಲ್ಲೇ ಸಿದ್ದರಾಮಯ್ಯ ಅವರಿಗೆ ಸನ್ಮಾನ ಇಟ್ಟುಕೊಂಡು ಆಹ್ವಾನಿಸುವ ಬಗ್ಗೆ ಚರ್ಚೆ ನಡೆದಿದೆ. ಆದರೆ ಇದು ಯಾವುದಕ್ಕೂ ಸಿಎಂ ಸಿದ್ದರಾಮಯ್ಯ ಇದುವರೆಗೆ ಸಮ್ಮತಿ ನೀಡಿಲ್ಲ.

## ಯೋಗಗುರು ಡಾ.ಬಿ.ಕೆ.ಎಸ್.ಐಯ್ಯಂಗಾರ್ ಸಂಸ್ಮರಣೋತ್ಸವ ಇಂದು

### ಯೋಗ ಶಿಕ್ಷಕ ಎನ್.ಅನಂತ ಸಂಪಾದಿತ 'ಯೋಗ ಭೀಷ್ಮ' ಕೃತಿ ಲೋಕಾರ್ಪಣೆ



ಮೈಸೂರು, ಡಿ.27–ಮೈಸೂರಿನ ಕೆ.ಆರ್.ಎಸ್.ರಸ್ತೆಯಲ್ಲಿರುವ ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಕಾಲೇಜು ಮತ್ತು ಹಿಮಾಲಯ ಪ್ರತಿಷ್ಠಾನ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಡಿ.28ರ ಗುರುವಾರ ಬೆಳಗ್ಗೆ 11.30ಕ್ಕೆ ಕಾಲೇಜಿನ ಪತಂಜಲಿ ಸಭಾಂಗಣದಲ್ಲಿ ಯೋಗ ಗುರು ಡಾ.ಬಿ.ಕೆ.ಎಸ್.ಐಯ್ಯಂಗಾರ್ ಅವರ ಸಂಸ್ಮರಣೋತ್ಸವ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಇದೇ ಸಂದರ್ಭ ಯೋಗ ಶಿಕ್ಷಕ ಎನ್.ಅನಂತ ಸಂಪಾದಿತ ಕೃತಿ 'ಯೋಗಭೀಷ್ಮ' ಲೋಕಾರ್ಪಣೆಗೊಳ್ಳಲಿದೆ.

ಕಾರ್ಯಕ್ರಮವನ್ನು ಯೋಗ ಶಿಕ್ಷಕರಾದ ಎನ್.ಮಲ್ಲೇಶ್ ಬಿಕೆಎಸ್ ಐಯ್ಯಂಗಾರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಲಿದ್ದು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಕೃತಿಯನ್ನು ಬಿಡುಗಡೆಗೊಳಿಸಲಿದ್ದಾರೆ. ಕೃತಿ ಕುರಿತು ಹಿರಿಯ ಸಮಾಜ ಸೇವಕ ಡಾ.ರಘುರಾಂ ವಾಜಪೇಯಿ ಮಾತನಾಡಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಕಾಲೇಜಿನ ಪ್ರಾಂಶುಪಾಲರಾದ ಡಾ.ಗಜಾನನ ಹೆಗಡೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಅಂತರಾಷ್ಟ್ರೀಯ ಯೋಗ ಶಿಕ್ಷಕರಾದ ಡಾ. ಸಿ.ರಮೇಶ್ ಶೆಟ್ಟಿ, ಕೃತಿಯ ಸಂಪಾದಕ ಎನ್.ಅನಂತ, ಪ್ರಕೃತಿ ಚಿಕಿತ್ಸಕ ಡಾ.ಎನ್.ಸಂದೀಪ್ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

## ಸರ್ನಾ ಧರ್ಮಕ್ಕೆ ಮಾನ್ಯತೆ ನೀಡುವಂತೆ ಒತ್ತಾಯಿಸಿ ಡಿ.30, ಭಾರತ್ ಬಂದ್‌ಗೆ ಕರೆ



**ಜೆಮ್‌ಶೆಡ್‌ಪುರ:** ಬುಡಕಟ್ಟು ಸಂಘಟನೆ ಆದಿವಾಸಿ ಸೆಂಗೆಲ್ ಅಭಿಯಾನ್ (ಎಎಸ್‌ಎ) ತನ್ನ ದೀರ್ಘಕಾಲದ ಬೇಡಿಕೆಯಾದ ಸರ್ನಾ ಧರ್ಮಕ್ಕೆ ಮಾನ್ಯತೆ ನೀಡುವಂತೆ ಒತ್ತಾಯಿಸಿ ಡಿಸೆಂಬರ್ 30ರಂದು 'ಸಾಂಕೇತಿಕ' ಭಾರತ್ ಬಂದ್‌ಗೆ ಬುಧವಾರ ಕರೆ ನೀಡಿದೆ.

ಎಎಸ್‌ಎ ಅಧ್ಯಕ್ಷ ಸಲ್ಖಾನ್ ಮುರ್ಮು ಮಾತನಾಡಿ, ಸರ್ನಾ ಧರ್ಮ ಸಂಹಿತೆಯು ದೇಶದ 15 ಕೋಟಿ ಬುಡಕಟ್ಟು ಜನಾಂಗದವರ ಗುರುತಾಗಿದೆ ಮತ್ತು ಬುಡಕಟ್ಟು ಸಮುದಾಯದ ಧರ್ಮಕ್ಕೆ ಮಾನ್ಯತೆ ನಿರಾಕರಿಸುವುದು 'ಸಾಂವಿಧಾನಿಕ ಅಪರಾಧಕ್ಕೆ ಸಮಾನ' ಎಂದಿದ್ದಾರೆ.

ಇತರ ಧರ್ಮಗಳನ್ನು ಅಳವಡಿಸಿಕೊಳ್ಳುವಂತೆ ನಮ್ಮ ಸಮುದಾಯವನ್ನು ಒತ್ತಾಯಿಸುವುದು 'ಧರ್ಮದ ಗುಲಾಮಗಿರಿ ಒಪ್ಪಿಕೊಳ್ಳುವಂತೆ ಒತ್ತಾಯಿಸಿದಂತೆ' ಎಂದ ಅವರು, ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಬುಡಕಟ್ಟು ಜನಾಂಗದವರ ಧಾರ್ಮಿಕ ಸ್ವಾತಂತ್ರ್ಯವನ್ನು ಕಸಿದುಕೊಂಡಿವೆ ಎಂದು ಆರೋಪಿಸಿದ್ದಾರೆ.

1951ರ ಜನಗಣತಿಯು ಸರ್ನಾ ಧರ್ಮಕ್ಕೆ ಪ್ರತ್ಯೇಕ ಕೋಡ್ ಅನ್ನು ನೀಡಿತ್ತು. ಆದರೆ ನಂತರ ಕಾಂಗ್ರೆಸ್ ಅದನ್ನು ತೆಗೆದು ಹಾಕಿತು ಎಂದ ಮುರ್ಮು, ಈಗ ಬಿಜೆಪಿ ಆದಿವಾಸಿಗಳನ್ನು ಹಿಂದೂಗಳಾಗಿ ಪರಿವರ್ತಿಸಲು ಪ್ರಯತ್ನಿಸುತ್ತಿದೆ ಎಂದು ಆರೋಪಿಸಿದ್ದಾರೆ. ಎಎಸ್‌ಎ ಬುಡಕಟ್ಟು ಸಮುದಾಯದ ಹಿತಾಸಕ್ತಿ ಕಾಪಾಡುವ ಪರವಾಗಿದೆ. ಯಾವ ಪಕ್ಷ ಸರ್ನಾ ಧರ್ಮಕ್ಕೆ ಮಾನ್ಯತೆ ನೀಡುತ್ತದೆಯೋ ಆ ಪಕ್ಷಕ್ಕೆ ನಾವು ಮತ ಹಾಕುತ್ತೇವೆ ಎಂದು ಹೇಳಿದ್ದಾರೆ.

## ದೇಶದಲ್ಲಿ ಒಟ್ಟಾರೆ 109 ಜೆಎನ್.1 ಪ್ರಕರಣ ಪತ್ತೆ; 529 ಜನರಿಗೆ ಕೊರೊನಾ ಪಾಸಿಟಿವ್, ಮೂವರು ಸಾವು



ನವದೆಹಲಿ: ದೇಶದಲ್ಲಿ ಕೋವಿಡ್–19 ಪ್ರಕರಣಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಇಂದು ಒಂದೇ ದಿನ 529 ಜನರಿಗೆ ಕೊರೊನಾ ಸೋಂಕು ದೃಢಪಟ್ಟಿದ್ದು, ಮೂವರು ಸಾವನ್ನಪ್ಪಿದ್ದಾರೆ.


ಕಳೆದ 24 ಗಂಟೆಗಳಲ್ಲಿ 529 ಹೊಸ ಕೋವಿಡ್–19 ಪಾಸಿಟಿವ್ ಪ್ರಕರಣಗಳು ವರದಿಯಾಗಿದ್ದು, ಇದರೊಂದಿಗೆ ಒಟ್ಟು ಕೋವಿಡ್ ಪ್ರಕರಣಗಳ ಸಂಖ್ಯೆ 4,50,10,189 ಮತ್ತು ಸಕ್ರಿಯ ಪ್ರಕರಣಗಳ ಸಂಖ್ಯೆ 4,093ಕ್ಕೆ ಏರಿಕೆಯಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಮಾಹಿತಿ ನೀಡಿದೆ. ಕೋವಿಡ್‌ನಿಂದ ಈವರೆಗೆ ಸಾವನ್ನಪ್ಪಿರುವವರ ಒಟ್ಟು ಸಂಖ್ಯೆ 5,33,340ಕ್ಕೆ ಏರಿಕೆಯಾಗಿದ್ದು, ಒಟ್ಟು ಚೇತರಿಸಿಕೊಂಡವರ ಸಂಖ್ಯೆ 4,44,72,756ಕ್ಕೆ ತಲುಪಿದೆ.

ಇನ್ನು ದೇಶದಲ್ಲಿ ಕಳೆದ 24 ಗಂಟೆಗಳಲ್ಲಿ 17,605 ಮಂದಿಯನ್ನು ಕೊರೊನಾ ಪರೀಕ್ಷೆಗೊಳಪಡಿಸಲಾಗಿದ್ದು, ಈವರೆಗೂ 93,58,79,495 ಮಂದಿಯನ್ನು ಪರೀಕ್ಷೆಗೊಳಪಡಿಸಲಾಗಿದೆ ಎಂದು ಐಸಿಎಂಆರ್ ಮಾಹಿತಿ ನೀಡಿದೆ.

ಕೇಂದ್ರ ಸರ್ಕಾರ ಮಾಹಿತಿ ನೀಡಿರುವ ಪ್ರಕಾರ ಲಸಿಕೆ ಅಭಿಯಾನ ಆರಂಭವಾಗಿ ಇಲ್ಲಿಯವರೆಗೂ 220,67,79,081 ಜನರಿಗೆ ಲಸಿಕೆಯನ್ನು ನೀಡಲಾಗಿದೆ ಎಂದು ತಿಳಿಸಿದೆ. ಈ ನಡುವೆ ಮಹಾಮಾರಿ ಕೊರೊನಾ ವೈರಸ್‌ನ ರೂಪಾಂತರಿ ಜೆಎನ್.1 ಮೊದಲ ಪ್ರಕರಣ ಕೇರಳದಲ್ಲಿ ಪತ್ತೆಯಾದ ನಂತರ ದೇಶಾದ್ಯಂತ ಆತಂಕ ಹೆಚ್ಚಾಗತೊಡಗಿದೆ.

ಕೋವಿಡ್–19 ಸೋಂಕಿತರ ಜೊತೆ ಜೊತೆಗೆ ರೂಪಾಂತರಿ ಜೆಎನ್.1 ಪ್ರಕರಣಗಳ ಸಂಖ್ಯೆ ಹೆಚ್ಚಾಗತೊಡಗಿದ್ದು, ದೇಶದಲ್ಲಿ 24 ಗಂಟೆಗಳಲ್ಲಿ 109 ಪ್ರಕರಣಗಳು ಪತ್ತೆಯಾಗಿವೆ ಎಂದು ತಿಳಿದುಬಂದಿದೆ.

ದೇಶದ ಒಟ್ಟು 8 ರಾಜ್ಯಗಳಲ್ಲಿ (ಗೋವಾ, ಮಹಾರಾಷ್ಟ್ರ, ಕರ್ನಾಟಕ, ಕೇರಳ, ತಮಿಳುನಾಡು, ತೆಲಂಗಾಣ, ಗುಜರಾತ್, ರಾಜಸ್ಥಾನ್) ರೂಪಾಂತರಿ ವೈರಸ್ ಜೆಎನ್.1 ಪತ್ತೆಯಾಗಿದ್ದು, ಈ ಪೈಕಿ ಗುಜರಾತ್ ರಾಜ್ಯದಲ್ಲಿ ಅತೀ ಹೆಚ್ಚು 36 ಪ್ರಕರಣಗಳು ಪತ್ತೆಯಾಗಿವೆ. ಉಳಿದಂತೆ ಕರ್ನಾಟಕದಲ್ಲಿ 34, ಗೋವಾ 14, ಮಹಾರಾಷ್ಟ್ರ 9, ಕೇರಳ 6, ರಾಜಸ್ಥಾನ 4, ತಮಿಳುನಾಡು 4 ಮತ್ತು ತೆಲಂಗಾಣದಲ್ಲಿ 2 ಪ್ರಕರಣಗಳು ಪತ್ತೆಯಾಗಿವೆ ಎಂದು ವರದಿಗಳು ತಿಳಿಸಿವೆ.



ಮೈಸೂರು ನಗರ ಕಾಂಗ್ರೆಸ್ ಅಧ್ಯಕ್ಷರಾದ ಆರ್.ಮೂರ್ತಿ ಹಾಗೂ ಪ್ರಧಾನ ಕಾರ್ಯದರ್ಶಿ ಸಿ.ಎಸ್.ರಘು ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅವರಿಬ್ಬರನ್ನೂ ಕಾಂಗ್ರೆಸ್ ಮುಖಂಡರಾದ ಆರ್.ರವಿ (ಡೆಲ್ಲಿ), ಯೂತ್ ಕಾಂಗ್ರೆಸ್ ಅಧ್ಯಕ್ಷ ಸೈಯದ್ ಅಬ್ರಾರ್, ಮೈಸೂರು ಬಸವಣ್ಣ ಇತರರು ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರಿದರು.

## ವ್ಯವಸ್ಥಾಪಕ ನಿರ್ದೇಶಕರಿಂದ ಫಲಾನುಭವಿಗಳ ಘಟಕಗಳಿಗೆ ಭೇಟಿ



ಮೈಸೂರು,ಡಿ.27–ಕರ್ನಾಟಕ ಆರ್ಯ ವೈಶ್ಯ ಸಮುದಾಯ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಕೆ.ದೀಪಶ್ರೀ ಮೈಸೂರು ಜಿಲ್ಲಾ ಕಚೇರಿಗೆ ಭೇಟಿ ನೀಡಿ, ಫಲಾನುಭವಿಗಳ ಸಾಲದ ಕಡತಗಳನ್ನು ಪರಿಶೀಲಿಸಿದರು.

ನಿಗಮದಿಂದ ಜಿಲ್ಲೆಯಲ್ಲಿ ಸ್ವಯಂ ಉದ್ಯೋಗ ನೇರಸಾಲ ಯೋಜನೆಯಡಿಯಲ್ಲಿ 2019–20ರಿಂದ 2022–23ನೇ ಸಾಲಿನವರೆಗೆ ಒಟ್ಟು 29 ಫಲಾನುಭವಿಗಳಿಗೆ 23,20,000 ರೂ.ಗಳ ಸಾಲ ಹಾಗೂ 5,80,000 ರೂ.ಗಳ ಸಹಾಯ ಧನದ ಸೌಲಭ್ಯ ನೀಡಿದ್ದು, ಈ ಫಲಾನುಭವಿಗಳ ಘಟಕಗಳಿಗೆ ಭೇಟಿ ನೀಡಿ ನಿಗಮದಿಂದ ಪಡೆದ ಸಾಲವನ್ನು ಬಳಕೆ ಮಾಡಿರುವ ಕುರಿತು ಪರಿಶೀಲಿಸಿದರು. ನಿಗಮದಿಂದ ಪಡೆದ ಸಾಲವನ್ನು ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳುವುದರ ಮೂಲಕ ಆರ್ಥಿಕವಾಗಿ ಅಭಿವೃದ್ಧಿಯಾಗಬೇಕು. ಪಡೆದ ಸಾಲವನ್ನು ಪ್ರತಿ ತಿಂಗಳು ತಪ್ಪದೇ ಮರುಪಾವತಿ ಆ್ಯಪ್ ಬಳಸಿ ಆನ್‌ಲೈನ್ ಪಾವತಿ ಮಾಡುವಂತೆ ತಿಳಿಸಿದರು. ಈ ಸಂದರ್ಭದಲ್ಲಿ ಕರ್ನಾಟಕ ಆರ್ಯವೈಶ್ಯ ಸಮುದಾಯ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕಿ ಹೆಚ್.ಎ. ಶೋಭ ಸೇರಿದಂತೆ ಸಿಬ್ಬಂದಿಗಳು ಭಾಗವಹಿಸಿದ್ದರು.

## ವ್ಯಕ್ತಿ ನಾಪತ್ತೆ



ಮೈಸೂರು, ಡಿ. 27– ವ್ಯಕ್ತಿಯೊಬ್ಬರು ನಾಪತ್ತೆಯಾಗಿರುವ ಬಗ್ಗೆ ನರಸಿಂಹರಾಜ ಉಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೈಸೂರಿನ ನಾಯ್ಡುನಗರ ನಿವಾಸಿ ಜವನಯ್ಯ ಕಾಣೆಯಾದವರು. ಇವರು ಡಿ.10ರಂದು ಮಧ್ಯಾಹ್ನ 12 ಗಂಟೆ ಸಮಯದಲ್ಲಿ ಮನೆಯಿಂದ ಹೊರ ಹೋದವರು ಇದುವರೆಗೂ ವಾಪಸ್ ಬಂದಿಲ್ಲ ಎಂದು ಇವರ ಪುತ್ರಿ ಎನ್.ಜೆ.ಸುಮಿತ್ರ ದೂರು ದಾಖಲಿಸಿದ್ದಾರೆ. ಇವರ ಬಗ್ಗೆ ಮಾಹಿತಿ ತಿಳಿದಲ್ಲಿ ಮೊ. 7090392357 ಸಂಪರ್ಕಿಸಲು ಕೋರಲಾಗಿದೆ.

## ಪ್ರೀತಿಸುವವರಿಂದ ಮಾತ್ರ ರಂಗಭೂಮಿ ಉಳಿಯಲು ಸಾಧ್ಯ

### ಹಿರಿಯ ರಂಗಕರ್ಮಿ ಪ್ರೊ. ಎಚ್.ಎಸ್.ಉಮೇಶ್ ಅಭಿಮತ

ಮೈಸೂರು, ಡಿ.27 (ಎಸ್‌ಪಿಎನ್)– ದುಡ್ಡು ಕೊಟ್ಟು ನಾಟಕ ನೋಡುವವರು ನಮಗೆ ಬೇಡ. ಬದಲಾಗಿ ನಾಟಕವನ್ನು ಪ್ರೀತಿಯಿಂದ ನೋಡುವ ಸಹೃದಯರಷ್ಟೆ ನಮಗೆ ಬೇಕು ಎಂದು ಹಿರಿಯ ರಂಗಕರ್ಮಿ ಪ್ರೊ. ಎಚ್.ಎಸ್.ಉಮೇಶ್ ಅಭಿಪ್ರಾಯಪಟ್ಟರು.

ಮೈಸೂರು ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ನಾದರಂಗ ಸಂಸ್ಥೆ ವತಿಯಿಂದ ಆಯೋಜಿಸಿದ್ದ 2 ದಿನಗಳ ನಾಟಕೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ರಂಗಭೂಮಿಯನ್ನು ಪ್ರೀತಿಸುವವರಿಂದ ಮಾತ್ರ ರಂಗಭೂಮಿ ಉಳಿಯಲು ಸಾಧ್ಯ ಎಂದರು.

ಪ್ರಸ್ತುತ ಈ ವೇದಿಕೆಯಲ್ಲಿ ಪ್ರದರ್ಶನಗೊಳ್ಳುವ ಸುಶೀಲೇಂದ್ರರಾವ್ ಕುಲಕರ್ಣಿ ರಚಿತ, ಎಚ್.ಎಸ್.ಕವಿತಾ ಧನಂಜಯ ನಿರ್ದೇಶನದ 'ಶ್ರೀ ಕೃಷ್ಣ ಲೀಲಾಮೃತ'



ನಾಟಕ ವೀಕ್ಷಣೆಗೆ ಎಷ್ಟು ಮಂದಿ ಇದ್ದಾರೆ ಎಂಬುದು ಮುಖ್ಯವಲ್ಲ. ಬದಲಾಗಿ, ಇಲ್ಲಿರುವವರಲ್ಲಿ ರಂಗಭೂಮಿಯನ್ನು ಎಷ್ಟು ಮಂದಿ ಪ್ರೀತಿಸುತ್ತಾರೆ ಎಂಬುದಷ್ಟೇ ಮುಖ್ಯ ಎಂದರು. ಸಾವಿರಾರು ಜನಕ್ಕೆ ನಾಟಕ ಮುಟ್ಟಬೇಕೆಂಬ ಅಲಿಖಿತ ನಿಯಮವೇನೂ ಇಲ್ಲ. ಸಹೃದಯದ ಇಬ್ಬರಿಗೆ ನಾಟಕ ತಲುಪಿದರೆ ಸಾಕು. ದುಡ್ಡು ಕೊಟ್ಟು ನಾಟಕ ನೋಡಲು ಬರುವವರು ಪ್ರೀತಿಯಿಂದ ನಾಟಕ ನೋಡುವುದಿಲ್ಲ. ಹಾಗಾಗಿ ಪ್ರೀತಿಯಿಂದ ನಾಟಕ ನೋಡುವ ಸಹೃದಯರಷ್ಟೆ ಸಾಕು. ದುಡ್ಡು ಕೊಟ್ಟವರು ಶಿಳ್ಳೆ ಹೊಡೆಯ



ಬಹುದು, ಚಪ್ಪಾಳೆ ತಟ್ಟಬಹುದು. ಆದರೆ ಅವರು ನಾಟಕದೊಂದಿಗೆ ಹೃದಯ ಸಂವಾದ ನಡೆಸುವುದಿಲ್ಲ. ನಾಟಕ ನೋಡಲು ಜನ ಬರಬೇಕು. ಆದರೆ ಬರಲಿಲ್ಲವೆಂದರೆ ವ್ಯಥೆ ಪಡಬೇಕಾದ ಅವಶ್ಯಕತೆ ಇಲ್ಲ ಎಂದು ಹೇಳಿದರು. ಹಿರಿಯ ರಂಗಕರ್ಮಿ ರಾಜಶೇಖರ ಕದಂಬ ಮಾತನಾಡಿ, ಕೊರೊನಾ ನಂತರ ರಂಗಭೂಮಿ ಚಟುವಟಿಕೆಗಳು ಸಂಪೂರ್ಣವಾಗಿ ನಶಿಸುತ್ತವೆ ಎಂಬ ಭಾವನೆ ಅನೇಕರಲ್ಲಿತ್ತು. ಆದರೆ, ಪ್ರಸ್ತುತ ರಂಗ ಚಟುವಟಿಕೆಗಳು ದೇಶಾದ್ಯಂತ ಅನಾವರಣಗೊಂಡಿವೆ. ಹವ್ಯಾಸಿ ರಂಗತಂಡಗಳು ರಂಗೋತ್ಸವ, ನಾಟಕೋತ್ಸವ ಆಯೋಜಿಸುತ್ತಿರುವುದು ನಿಜಕ್ಕೂ ಒಳ್ಳೆಯ ಬೆಳವಣಿಗೆ. ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ನಿರಂತರವಾಗಿ ರಂಗಚಟುವಟಿಕೆ ನಡೆಯಬೇಕು. ರಂಗಭೂಮಿ ಮನೋರಂಜನೆ ಮಾಧ್ಯಮ. ಇದಕ್ಕೆ ಎಲ್ಲಾ ಮಾಧ್ಯಮಗಳು ಹೆಚ್ಚಿನ ಪ್ರಚಾರ ನೀಡುತ್ತಿರುವುದು ಸ್ವಾಗತಾರ್ಹ ಎಂದರು. ವೇದಿಕೆಯಲ್ಲಿ ಮಹಾರಾಜ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಎನ್.ಉದಯಶಂಕರ್, ನಾದರಂಗದ ನಾಗೇಂದ್ರ ಇತರರು ಇದ್ದರು. ನಂತರ ಮೈಸೂರು ಗುರುಕಲಾ ಶಾಲೆ ವಿದ್ಯಾರ್ಥಿಗಳು 'ಶ್ರೀ ಕೃಷ್ಣ ಲೀಲಾಮೃತ' ಅಭಿನಯಿಸಿ, ಪ್ರೇಕ್ಷಕರ ಮನಗೆದ್ದರು.

ಮೈಸೂರು ಮಿತ್ರ ಗುರುವಾರ 28 ಡಿಸೆಂಬರ್ 2023

## ಪುರಸಭೆ ಉಪಚುನಾವಣೆ: ಶಾಂತಿಯುತ ಮತದಾನ



ಪಾಂಡವಪುರ, ಡಿ.27–ಪುರಸಭೆಯ 2 ಮತ್ತು 9ನೇ ವಾರ್ಡ್‌ಗಳ ಉಪ ಚುನಾವಣೆಯ ಮತದಾನ ಮಂಗಳವಾರ ಬಹುತೇಕ ಶಾಂತಿಯುತವಾಗಿ ನಡೆಯಿತು.

ಬೆಳಗ್ಗೆಯಿಂದಲೇ ಬಿರುಸಿನ ಮತದಾನ ನಡೆಯಿತು. ಮಧ್ಯಾಹ್ನದ ವೇಳೆಗೆ ಬಿಸಿಲಿನಿಂದ ಮಂದಗತಿ ಮತದಾನ ನಡೆದರೂ ಸಂಜೆ ವೇಳೆಗೆ ಮತ್ತೆ ಬಿರುಸಿನ ಮತದಾನ ನಡೆಯಿತು. ಬೆಳಗ್ಗೆ 7 ರಿಂದ ಸಂಜೆ 5 ಗಂಟೆವರೆಗೂ ನಡೆಯಿತು. ಮತಗಟ್ಟೆ ಕೇಂದ್ರದ ಬಳಿ ಅಭ್ಯರ್ಥಿಗಳ ಬೆಂಬಲಿಗರು ಮತಯಾಚನೆ ಮಾಡುತ್ತಿದ್ದರು. 2ನೇ ವಾರ್ಡ್‌ನಲ್ಲಿ ಒಟ್ಟು 686 ಮತದಾರರಿದ್ದು, ಇದರಲ್ಲಿ 620 ಮಂದಿ ಮತದಾನ ಮಾಡಿದ್ದು ಶೇ.90.36ರಷ್ಟು ಮತದಾನ ವಾಗಿದೆ. 9ನೇ ವಾರ್ಡ್‌ನಲ್ಲಿ ಒಟ್ಟು 438 ಮತದಾರರಿದ್ದು, 385 ಮತ ಚಲಾವಣೆಗೊಂಡು ಶೇ.87.90 ರಷ್ಟು ಮತದಾನವಾಗಿದೆ. 2ನೇ ವಾರ್ಡ್‌ನಲ್ಲಿ ಜೆಡಿಎಸ್ ಅಭ್ಯರ್ಥಿ ಯಶವಂತ್ ಕುಮಾರ್, ಸರ್ವೋದಯ ಕರ್ನಾಟಕ ಪಕ್ಷದಿಂದ ಆರ್.ರಾಜೇಂದ್ರ, ಬಿಜೆಪಿಯಿಂದ ಮಧು ಹಾಗೂ ಕೆಆರ್‌ಎಸ್ ಪಕ್ಷದಿಂದ ರೂಪಾ ಶಾಂತಿಪ್ರಸಾದ್ ಹಾಗೂ 9ನೇ ವಾರ್ಡ್‌ನಲ್ಲಿ ಬಿಜೆಪಿ ಅಭ್ಯರ್ಥಿ ಎನ್.ಸೋಮ ಶೇಖರ್, ಜೆಡಿಎಸ್ ಅಭ್ಯರ್ಥಿ ಜ್ಯೋತಿಲಕ್ಷ್ಮೀ ಹಾಗೂ ಸರ್ವೋದಯ ಕರ್ನಾಟಕ ಪಕ್ಷದ ಅಭ್ಯರ್ಥಿ ಎಸ್.ರಾಜು ಕಣದಲ್ಲಿದ್ದಾರೆ.

# 20 ಸಾವಿರ ಕುಟುಂಬಗಳಿಗೆ ನೀರಿನ ದರ ಇಳಿಕೆ

●ಮಂಡ್ಯ ಅಭಿವೃದ್ಧಿಗೆ ಪೂರಕ ಯೋಜನೆ ●ಶಾಸಕ ಗಣಿಗ ರವಿಕುಮಾರ್ ಮಾಹಿತಿ

ಮಂಡ್ಯ, ಡಿ.27–ಕಳೆದ ವಿಧಾನಸಭಾ ಚುನಾವಣೆಯಲ್ಲಿ ಭರವಸೆ ನೀಡಿದಂತೆ ಮಂಡ್ಯ ನಗರ ವ್ಯಾಪ್ತಿಯ ಸುಮಾರು 20 ಸಾವಿರ ಕುಟುಂಬಗಳ ಕುಡಿಯುವ ನೀರಿನ ದರ ಇಳಿಕೆ ಹಾಗೂ ನಗರದ ಅಭಿವೃದ್ಧಿಗೆ ಪೂರಕ ಯೋಜನೆಗಳನ್ನು ಕಾರ್ಯಗತಗೊಳಿಸಲು ಮುಂದಾಗಿರುವುದಾಗಿ ಶಾಸಕ ಗಣಿಗ ರವಿಕುಮಾರ್ ಹೇಳಿದರು.

120 ರೂ. ಮಾಸಿಕ ಕುಡಿಯುವ ನೀರಿನ ದರವನ್ನು 2011ರಲ್ಲಿ ಏಕಾಏಕಿ ದುಪ್ಪಟ್ಟು ಮಾಡಲಾಗಿತ್ತು. 2019ರಲ್ಲಿ 282 ರೂ.ಗೆ ಹೆಚ್ಚಳ ಮಾಡಿ ನಾಗರಿಕರಿಗೆ ನೀರಿನ ಕರಭಾರ ಹೇರಲಾಗಿತ್ತು. ನಾಗರಿಕರ ಒತ್ತಾಸೆಯಂತೆ ಪ್ರಸ್ತುತ 225 ರೂ.ಗೆ ದರವನ್ನು ಕಡಿತಗೊಳಿಸಲಾಗಿದ್ದು, ಪ್ರಸಕ್ತ ತಿಂಗಳಿನಿಂದ ಹೊಸ ಆದೇಶ ಅನುಷ್ಠಾನವಾಗಲಿದೆ ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ಸ್ಪಷ್ಟಪಡಿಸಿದರು.

ನಗರ ವ್ಯಾಪ್ತಿಯ ನೀರು ಬಳಕೆದಾರರಿಂದ ಜಲಮಂಡಳಿಗೆ 44.51 ಕೋಟಿ ರೂ. ಬಾಕಿ ಇದ್ದು, 27.66 ಕೋಟಿ ರೂ. ಅಸಲು ಹಾಗೂ 16.91 ಕೋಟಿ ರೂ. ದಂಡ ಹಾಗೂ ಬಡ್ಡಿಮನ್ನಾ ಮಾಡಿಸಿ, ಅಸಲು ಪಾವತಿಗೆ ರಿಯಾಯಿತಿ ನೀಡಿ



ಒಂದೇ ಹಂತದ ಪಾವತಿಗೆ ಆದೇಶ ಹೊರಡಿಸಲು ಸರ್ಕಾರದೊಂದಿಗೆ ಪ್ರಯತ್ನಿಸಲಾಗುವುದೆಂದು ತಿಳಿಸಿದರು.

ನಗರದ ಸಮಗ್ರ ಅಭಿವೃದ್ಧಿ ದೃಷ್ಟಿಯಿಂದ ಅಮರಾವತಿ ಹೋಟೆಲ್‌ನಿಂದ ಜ್ಯೋತಿ ಇಂಟರ್‌ನ್ಯಾಷನಲ್ ಹೋಟೆಲ್ ವರೆಗೆ ಮೈಸೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿಪಡಿಸಲು 33 ಕೋಟಿ ರೂ. ವೆಚ್ಚದ ಯೋಜನೆ ಸಾಕಾರಗೊಳ್ಳಲಿದೆ. ಹಲವು ವರ್ಷಗಳಿಂದ ವಾಹನ ಪ್ರಯಾಣಿಕರಿಗೆ ಕಿರಿಕಿರಿ ಉಂಟುಮಾಡುತ್ತಿದ್ದ ಮಂಡ್ಯ–ಯಡಿಯೂರು ರಸ್ತೆ ಮಾರ್ಗದ ಉಳಿಕೆ ಕಾಮಗಾರಿ ಪೂರ್ಣಗೊಳಿಸಲು 11 ಕೋಟಿ ರೂ. ವೆಚ್ಚದ ಯೋಜನೆ ಕೈಗೆತ್ತಿಕೊಳ್ಳಲಾಗಿದೆ ಎಂದು ವಿವರಿಸಿದರು.

ಮಂಡ್ಯ ವ್ಯಾಪ್ತಿಯ ಬನ್ನೂರು ರಸ್ತೆಯನ್ನು ಕನ್ನಿಕಾ ಪರಮೇಶ್ವರಿ ದೇವಾಲಯ ಹಾಗೂ ಗೌರಿಶಂಕರ ಕಲ್ಯಾಣ ಮಂಟಪದವರೆಗೆ ಆಧುನಿಕ ರೀತಿ ಅಭಿವೃದ್ಧಿ ಪಡಿಸಲು 1.70 ಕೋಟಿ ರೂ. ಅನುದಾನ ಮಂಜೂರಾಗಿದ್ದು, ಪ್ರಯಾಣಿಕರ ಹಿತ ದೃಷ್ಟಿಯಿಂದ ಗುಂಡಿ ಮುಚ್ಚಲು 16 ಲಕ್ಷ ರೂ. ಕಾಮಗಾರಿಗೆ ಚಾಲನೆ ನೀಡಲಾಗಿದೆ. ತಕ್ಷಣ ಕಾರ್ಯಾರಂಭ ಮಾಡಲಾಗುವುದು ಎಂದು ತಿಳಿಸಿದರು.

ನಗರಸಭೆ ವ್ಯಾಪ್ತಿಯ ವಿವಿಧ ಬಡಾವಣೆಗಳ ಚರಂಡಿ ನಿರ್ಮಾಣಕ್ಕೆ 30 ಕೋಟಿ ರೂ., ವಾರ್ಡ್ ಅಭಿವೃದ್ಧಿಗಾಗಿ ನಗರದ 35 ವಾರ್ಡ್‌ಗಳಿಗೆ ತಲಾ 13 ಲಕ್ಷ ರೂ. ಅನುದಾನ ಹಂಚಿಕೆಗೆ ಕ್ರಮ ವಹಿಸಲಾಗಿದೆ. ಇದಕ್ಕಾಗಿ 5 ಕೋಟಿ ರೂ. ಅನುದಾನ 50:53ರ ನಿಧಿಯಡಿ ಬಿಡುಗಡೆಯಾಗಿದೆ. ಬೀಡಿ ಕಾಲೋನಿ ಹಾಗೂ ಚಿಕ್ಕ ಮಂಡ್ಯ ನಿವಾಸಿಗಳಿಗೆ ಮಳೆ ಹಾವಳಿಯಿಂದ ಉಂಟಾಗುತ್ತಿದ್ದ ನಷ್ಟ ನಿವಾರಣೆಗೆ ಶಾಶ್ವತ ರಕ್ಷಣಾ ಗೋಡೆ ನಿರ್ಮಾಣಕ್ಕೆ 5 ಕೋಟಿ ರೂ. ವ್ಯಯಿಸಲಾಗುತ್ತಿದೆ. ನಗರದ ಗಾಂಧಿ ಪಾರ್ಕ್ ಅಭಿವೃದ್ಧಿಗೂ ಅನುದಾನ ಬಿಡುಗಡೆ ಮಾಡಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ನಗರಾಧ್ಯಕ್ಷ ರುದ್ರಪ್ಪ, ನಗರಸಭಾ ಸದಸ್ಯರಾದ ಶ್ರೀಧರ್, ನಯೀಂ, ಶಿವಪ್ರಕಾಶ್, ಪೂರ್ಣಿಮಾ, ಜಾಕೀರ್, ಹಾಲಹಳ್ಳಿ ರವಿ ಉಪಸ್ಥಿತರಿದ್ದರು.

### ಸುಮಲತಾ ಅವಶ್ಯಕತೆ ಕಾಂಗ್ರೆಸ್‌ಗಿಲ್ಲ

ಮುಂಬರುವ ಲೋಕಸಭಾ ಚುನಾವಣೆಗೆ ಮಂಡ್ಯ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಲು ಹಲವಾರು ಪ್ರಬಲ ಆಕಾಂಕ್ಷಿಗಳ ದಂಡೇ ಇದ್ದು, ಬಿಜೆಪಿ ಸೇರಿರುವ ಸಂಸದೆ ಸುಮಲತಾ ಅಂಬರೀಶ್ ಅವಶ್ಯಕತೆ ಕಾಂಗ್ರೆಸ್‌ಗೆ ಇಲ್ಲ ಎಂದು ಶಾಸಕ ಗಣಿಗ ರವಿಕುಮಾರ್ ಹೇಳಿದರು.

ಮಂಡ್ಯ ಲೋಕಸಭಾ ಕ್ಷೇತ್ರ ವ್ಯಾಪ್ತಿಯ 7 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಶಾಸಕರಿದ್ದಾರೆ. ವಿಧಾನಪರಿಷತ್ ಸದಸ್ಯರು ನಮ್ಮ ಪಕ್ಷದವರೇ ಆಗಿದ್ದು, ಯಾರೇ ಅಭ್ಯರ್ಥಿಯಾದರೂ ಮಂಡ್ಯ ಕ್ಷೇತ್ರದಿಂದ ಕನಿಷ್ಠ 30 ಸಾವಿರ ಅಂತರದಿಂದ ಗೆಲುವು ಸಾಧಿಸಲಿದ್ದಾರೆ. ಸಂಸದೆ ಸುಮಲತಾ, ಕಳೆದ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಪರವಾಗಿ ಹಾಗೂ ನನ್ನ ವಿರುದ್ಧ ಬೀದಿ ಬೀದಿ ಪ್ರಚಾರ ನಡೆಸಿದ್ದು, ಅವರು ಕಾಂಗ್ರೆಸ್ ಸೇರುವ ಅವಶ್ಯಕತೆ ಇಲ್ಲ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪರ ಪ್ರಚಾರಕ್ಕೆ ಬಂದಿದ್ದ ಮಾಜಿ ಸಂಸದೆ ರಮ್ಯಾಗೆ ಲೋಕಸಭೆಗೆ ಸ್ಪರ್ಧಿಸುವಂತೆ ಒತ್ತಾಯಿಸಲಾಗಿದೆ. ಇಲ್ಲವೇ ಜಿಲ್ಲೆಯ ಪ್ರಬಲ ನಾಯಕ ಚಲುವರಾಯಸ್ವಾಮಿ ಕುಟುಂಬದವರ್ಯಾರಾದರೂ ಸ್ಪರ್ಧಿಸಲಿ ಎಂದರು.

ಮಾಜಿ ಸಂಸದೆ ರಮ್ಯಾ, ಸಚಿವ ಚಲುವರಾಯಸ್ವಾಮಿ ಪತ್ನಿ ಧನಲಕ್ಷ್ಮೀ, ಎಸ್.ಎಂ.ಕೃಷ್ಣ ಪುತ್ರಿ ಶಾಂಭವಿ, ಉದ್ಯಮಿ ಚಂದ್ರು, ಕೆ.ಬಿ.ಚಂದ್ರಶೇಖರ್, ಬಿ.ರೇವಣ್ಣ, ಡಾ.ರವೀಂದ್ರ, ಡಾ.ಕೃಷ್ಣ, ಕೀಲಾರ ರಾಧಾಕೃಷ್ಣ ಸೇರಿದಂತೆ ಹಲವಾರು ಆಕಾಂಕ್ಷಿಗಳಿದ್ದು, ಯಾರೇ ಸ್ಪರ್ಧಿಸಿದರೂ ಗೆಲುವು ಶತಸಿದ್ಧ ಎಂದು ವಿಶ್ವಾಸ ವ್ಯಕ್ತಪಡಿಸಿದರು.

## ಫೆ.7ರಂದು ಬೆಂಗಳೂರಿನಲ್ಲಿ ಅರ್ಚಕರ ಸಮಾವೇಶ



ನಾಗಮಂಗಲ, ಡಿ.27– ಅರ್ಚಕರು ಹಾಗೂ ಆಗಮಿಕರ ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಫೆ.7ರಂದು ಬೆಂಗಳೂರಿನ ಟೌನ್‌ಹಾಲ್ ಬಳಿ ಬೃಹತ್ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಅಖಿಲ ಕರ್ನಾಟಕ ಹಿಂದೂ ದೇವಾಲಯಗಳ ಅರ್ಚಕರ–ಆಗಮಿಕರ ಹಾಗೂ ಉಪಾಧಿವಂತರ ಒಕ್ಕೂಟದ ಮುಖ್ಯ ಪ್ರಧಾನ ಕಾರ್ಯದರ್ಶಿ ಡಾ.ಕೆ.ಎಸ್.ಎನ್.ದೀಕ್ಷಿತ್ ತಿಳಿಸಿದರು.

ರಾಜ್ಯದ ಹಿಂದೂ ದೇವಾಲಯಗಳಲ್ಲಿ ಅರ್ಚಕರಿಗೆ ಸರ್ಕಾರದಿಂದ 5000 ಸಾವಿರ ರೂ. ಗೌರವಧನ ನೀಡುತ್ತಿದ್ದು, ಇದರಿಂದ ಜೀವನ ನಿರ್ವಹಣೆ ಕಷ್ಟವಾಗುತ್ತಿದೆ. ಸರ್ಕಾರ ಕನಿಷ್ಠ 10 ಸಾವಿರ ರೂ.ಗೆ ಏರಿಸಬೇಕು ಹಾಗೂ ನಿವೃತ್ತಿ ನಿಯಮ ರದ್ದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಸಮಾವೇಶದಲ್ಲಿ ಆಗ್ರಹಿಸಲಾಗುವುದು ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಹಿಂದೆ ಅರ್ಚಕರಿಗೆ ಜಮೀನುಗಳನ್ನು ನೀಡಲಾಗುತ್ತಿತ್ತು. ಆದರೆ, ಅವೆಲ್ಲವನ್ನು ಸರ್ಕಾರ ವಾಪಸ್ ಪಡೆದಿದೆ. ಈಗಿನ ಸನ್ನಿವೇಶದಲ್ಲಿ ರಾಜ್ಯದ ಅರ್ಚಕರು ಹಾಗೂ ದೇವಾಲಯಗಳಿಗೆ ಅನೇಕ ಸಂಕಷ್ಟ ಎದುರಾಗಿದೆ. ಅಖಿಲ ಕರ್ನಾಟಕ ಹಿಂದೂ ದೇವಾಲಯಗಳ ಒಕ್ಕೂಟ ಹಾಗೂ ರಾಜ್ಯ ಧಾರ್ಮಿಕ ದತ್ತಿ ದೇವಾಲಯಗಳ ಅರ್ಚಕರ ಹಾಗೂ ಆಗಮಿಕರ ಸಹಭಾಗಿತ್ವದಲ್ಲಿ ಈ ಸಮಾವೇಶ ನಡೆಯಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಸಂಘದ ರಾಜ್ಯಾಧ್ಯಕ್ಷ ಎಂ.ಎಸ್ ವೆಂಕಟಾಚಲಯ್ಯ, ಗೌರವಾಧ್ಯಕ್ಷ ಜಾನಕಿ ರಾಮ್, ಕಾರ್ಯಾಧ್ಯಕ್ಷ ಎಂ.ವಿ.ಕೃಷ್ಣಮೂರ್ತಿ, ಪ್ರಧಾನ ಕಾರ್ಯದರ್ಶಿ, ಡಿ.ಕೆ.ಶ್ರೀನಿವಾಸ್ ಮೂರ್ತಿ, ಸದಸ್ಯರು ಉಪಸ್ಥಿತರಿದ್ದರು.

## ಅನೈತಿಕ ತಾಣವಾದ ತಾಲೂಕು ಕ್ರೀಡಾಂಗಣ

ಕೆ.ಆರ್.ಪೇಟೆ, ಡಿ.27–ಪಟ್ಟಣದ ತಾಲೂಕು ನಾಲ್ವಡಿ ಕೃಷ್ಣರಾಜ ಒಡೆಯರ್ ಕ್ರೀಡಾಂಗಣ ಹಾಗೂ ಶ್ರೀ ಬಾಲಗಂಗಾಧರ ಸ್ವಾಮೀಜಿ ಒಳಾಂಗಣ ಕ್ರೀಡಾಂಗಣ ಅನೈತಿಕ ಚಟುವಟಿಕೆಗಳ ತಾಣವಾಗಿದೆ.

ಇಲ್ಲಿಗೆ ನಿತ್ಯ ನೂರಾರು ಕ್ರೀಡಾಪಟುಗಳು ಆಟವಾಡಲು ಬರುತ್ತಾರೆ. ಜೊತೆಗೆ ಬೆಳಗ್ಗೆ ಹಾಗೂ ಸಂಜೆ ಮಹಿಳೆಯರು, ಹಿರಿಯ ನಾಗರಿಕರು ವಾಯುವಿಹಾರಕ್ಕೆ ಆಗಮಿಸುತ್ತಾರೆ. ಆದರೆ, ಇಲ್ಲಿ ವಿದ್ಯುತ್ ದೀಪಗಳು ಕೆಟ್ಟು ಹೋಗಿರುವ ಕಾರಣ ಸಂಜೆ ಆಗುತ್ತಿದ್ದಂತೆ ಕ್ರೀಡಾಂಗಣ ಕಗ್ಗತ್ತಲಾಗುತ್ತದೆ. ಇದರಿಂದ ಕುಡುಕರು ಗುಂಪು ಗುಂಪಾಗಿ ಬಂದು ಮದ್ಯಪಾನ, ಧೂಮ



ಪಾನ ಮಾಡುವ ಮೂಲಕ ಅನೈತಿಕ ಚಟುವಟಿಕೆಗಳ ತಾಣವಾಗಿಸಿದ್ದಾರೆ.

ಇಡೀ ಕ್ರೀಡಾಂಗಣ ಅವ್ಯವಸ್ಥೆಯ ಆಗರವಾಗಿದ್ದು, ಜೊತೆಗೆ ವಿದ್ಯುತ್ ಇಲ್ಲದ ಕಾರಣ ಕ್ರೀಡಾಂಗಣ ರಾತ್ರಿಯಾಗುತ್ತಿದ್ದಂತೆ ಅನೈತಿಕ ಚಟುವಟಿಕೆಗಳಿಗೆ ಕಾರಣವಾಗಿದೆ. ಕ್ರೀಡಾಂಗಣದ ಸುತ್ತ ವಿದ್ಯುತ್ ಪೂರೈಕೆ ಮಾಡಬೇಕು. ಗಿಡಗಂಟಿಗಳು ಬೆಳೆದು ಹಾವುಗಳು, ಕ್ರಿಮಿಕೀಟಗಳು ಕ್ರೀಡಾಂಗಣದಲ್ಲಿ ಹೆಚ್ಚಾಗಿವೆ. ಕ್ರೀಡಾಪಟುಗಳು ಹಾಗೂ ವಾಯುವಿಹಾರಿಗಳು ಕ್ರೀಡಾಂಗಣದೊಳಗೆ ಹೋಗಲು ಹೆದರುವಂತಾಗಿದೆ. ಕ್ರೀಡಾಂಗಣದ ಅವ್ಯವಸ್ಥೆಯನ್ನು ಸರಿಪಡಿಸದ ಕ್ರೀಡಾ ಇಲಾಖೆಯ ಅಧಿಕಾರಿಗಳ ವಿರುದ್ಧ ನಾಗರಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕ್ರೀಡಾ ಇಲಾಖೆಯ ಅಧಿಕಾರಿಗಳು, ಕ್ಷೇತ್ರದ ಶಾಸಕರು ಇತ್ತ ಗಮನ ಹರಿಸಿ, ಸೆಕ್ಯೂರಿಟಿ ಗಾರ್ಡ್‌ಗಳು ಹಾಗೂ ಕ್ರೀಡಾಂಗಣ ನಿರ್ವಹಣೆಗೆ ಹೊಸ ಗುತ್ತಿಗೆದಾರರನ್ನು ನೇಮಿಸಲು ಟೆಂಡರ್ ಕರೆದು ಕ್ರೀಡಾಂಗಣ ಉಳಿಸುವಂತೆ ಸಾರ್ವಜನಿಕರು ಆಗ್ರಹಿಸಿದ್ದಾರೆ.

### ಮತದಾನ ಹೆಚ್ಚಳಕ್ಕೆ ಕಿರುಚಿತ್ರ ಆಹ್ವಾನ

ಮಂಡ್ಯ, ಡಿ.27–ಚುನಾವಣಾ ಆಯೋಗ ಮತದಾನ ಪ್ರಮಾಣ ಹೆಚ್ಚಿಸುವ ನಿಟ್ಟಿನಲ್ಲಿ ಒಂದು ನಿಮಿಷದೊಳಗಿನ ಕಿರುಚಿತ್ರ ಆಹ್ವಾನಿಸಿದೆ. ಶಾಲಾ–ಕಾಲೇಜುಗಳ ಮತದಾರರ ಸಾಕ್ಷರತಾ ಸಂಘಗಳು ಹಾಗೂ ಸಾರ್ವಜನಿಕರು ಮುಕ್ತವಾಗಿ ವಿಡಿಯೋ ಚಿತ್ರೀಕರಿಸಿ ಜ.10ರೊಳಗೆ ಸಲ್ಲಿಸಬೇಕು. ವಿಜೇತರಿಗೆ ಪ್ರಥಮ 5 ಸಾವಿರ ರೂ, ದ್ವಿತೀಯ 3 ಸಾವಿರ ರೂ. ಹಾಗೂ ತೃತೀಯ 2 ಸಾವಿರ ರೂ. ನಗದು ಬಹುಮಾನ ನೀಡಲಾಗುವುದು. ಮಾಹಿತಿಗಾಗಿ ಮೊ.ಸಂ: 9480872007 ಅಥವಾ 9980267375 ಅನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಬಸ್ ಡಿಕ್ಕಿ: ವ್ಯಕ್ತಿ ಸಾವು

ಹಲಗೂರು, ಡಿ.27–ಸಾರಿಗೆ ಸಂಸ್ಥೆ ಬಸ್ ಡಿಕ್ಕಿ ಹೊಡೆದ ಪರಿಣಾಮ ವ್ಯಕ್ತಿ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಸಮೀಪದ ಸಾರಿಗೆ ಬಸ್ ನಿಲ್ದಾಣ ಬಳಿ ಬುಧವಾರ ಸಂಜೆ ನಡೆದಿದೆ. ಹಲಗೂರು ಹೋಬಳಿಯ ನಿಟ್ಟೂರು ಗ್ರಾಮದ ನಿವಾಸಿ ನಾರಾಯಣ (52) ಮೃತಪಟ್ಟಿದ್ದು, ಈತ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಬಳಿ ಹೋಗುತ್ತಿದ್ದರು. ಈ ವೇಳೆ ಮೈಸೂರಿಗೆ ಹೋಗುತ್ತಿದ್ದ ಬಸ್ ಡಿಕ್ಕಿ ಹೊಡೆದಿದೆ. ಪರಿಣಾಮ ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಹಲಗೂರು ಪೊಲೀಸ್ ಠಾಣೆಯ ಪಿಎಸ್‌ಐ ಮಹೇಂದ್ರ ಸ್ಥಳ ಪರಿಶೀಲಿಸಿ, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

### ಮುಡಾ ಮಾಜಿ ಅಧ್ಯಕ್ಷ ಮುನಾವರ್‌ಖಾನ್ ನಿಧನ

ಮಂಡ್ಯ, ಡಿ.27–ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹಾಗೂ ಹಿರಿಯ ಕಾಂಗ್ರೆಸ್ ಮುಖಂಡ ಮುನಾವರ್‌ಖಾನ್ (60) ಹೃದಯಾಘಾತದಿಂದ ಬುಧವಾರ ಸಂಜೆ ನಿಧನರಾದರು.



ಮುನಾವರ್‌ಖಾನ್ 3–4 ಬಾರಿ ಮಂಡ್ಯ ನಗರಸಭೆ ಸದಸ್ಯರಾಗಿದ್ದರು. ಮೃತರ ಪತ್ನಿ ನಗರಸಭೆ ಅಧ್ಯಕ್ಷರಾಗಿ ಸೇವೆ ಸಲ್ಲಿಸಿ, ಅವರೂ ಇತ್ತೀಚೆಗೆ ನಿಧನರಾಗಿದ್ದಾರೆ. ಒಬ್ಬ ಪುತ್ರ, ಇಬ್ಬರು ಪುತ್ರಿಯರು ಹಾಗೂ ಬಂಧು–ಬಳಗ ಅಗಲಿದ್ದಾರೆ. ನಾಳೆ ನಗರದ ಹೊಳಲು ವೃತ್ತದ ಮುಸ್ಲಿಂ ಸ್ಮಶಾನದಲ್ಲಿ ಅಂತ್ಯಸಂಸ್ಕಾರ ನಡೆಯಲಿದ್ದು, ಸಚಿವರಾದ ಎನ್.ಚಲುವರಾಯಸ್ವಾಮಿ, ಜಮೀರ್ ಅಹಮದ್ ಸೇರಿದಂತೆ ಹಲವು ನಾಯಕರು ಅಂತ್ಯಸಂಸ್ಕಾರದಲ್ಲಿ ಭಾಗವಹಿಸಲಿದ್ದಾರೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

**ಸಂತಾಪ:** ಶಾಸಕ ಗಣಿಗ ರವಿಕುಮಾರ್, ಜಿಲ್ಲೆಯ ವಿವಿಧ ಪಕ್ಷಗಳ ನಾಯಕರು ಸಂತಾಪ ಸೂಚಿಸಿದ್ದಾರೆ.

ಮಕ್ಕಳ ಮೂಲಕ ಶೌಚಾಲಯ ಸ್ವಚ್ಛತೆ ಪ್ರಕರಣ

## ಸರ್ಕಾರಿ ಶಾಲಾ ಶೌಚಾಲಯ ಸ್ವಚ್ಛತೆಗೆ ಪರ್ಯಾಯ ವ್ಯವಸ್ಥೆ ಕಲ್ಪಿಸುವಂತೆ ಮನವಿ

ಮೈಸೂರು, ಡಿ.27(ಎಸ್‌ಪಿಎನ್)– ಕೋಲಾರದ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಶೌಚಾಲಯ ಸ್ವಚ್ಛತೆ ಪ್ರಕರಣದಿಂದ ಬೆಚ್ಚಿಬಿದ್ದಿರುವ ಶಿಕ್ಷಕ ವೃಂದ, ರಾಜ್ಯಾದ್ಯಂತ ಸರ್ಕಾರಿ ಶಾಲೆಗಳಲ್ಲಿ ಶೌಚಾಲಯ ಸ್ವಚ್ಛತೆಗಾಗಿ ಪರ್ಯಾಯ ವ್ಯವಸ್ಥೆ ಕಲ್ಪಿಸುವಂತೆ ಒತ್ತಾಯಿಸಿ, ಕರ್ನಾಟಕ ರಾಜ್ಯ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಬುಧವಾರ ಮನವಿ ಸಲ್ಲಿಸಿದೆ.

ರಾಜ್ಯಾದ್ಯಂತ 48 ಸಾವಿರ ಪ್ರಾಥಮಿಕ ಶಾಲೆಗಳಲ್ಲಿ, ಅಲ್ಲಿನ ಶೌಚಾಲಯ ಸ್ವಚ್ಛತೆಗೆ ಮಕ್ಕಳನ್ನು, ಶಿಕ್ಷಕರು ಬಳಸಿಕೊಳ್ಳುತ್ತಿರುವ ಪ್ರಕರಣಗಳು ಬೆಳಕಿಗೆ ಬರುತ್ತಿದ್ದು, ಇದು ಸಾರ್ವಜನಿಕ ವಲಯದಲ್ಲಿ ಚರ್ಚೆಯಾಗುತ್ತಿದೆ. ಈ ಕಾರಣಕ್ಕಾಗಿ ಪ್ರಾಥಮಿಕ ಶಾಲಾ ಮುಖ್ಯಶಿಕ್ಷಕರ ಅಮಾನತು ಹಾಗೂ ಕ್ರಿಮಿನಲ್ ಕೇಸ್ ದಾಖಲಿಸುತ್ತಿರುವ ಘಟನೆಗಳು ಶಿಕ್ಷಕರನ್ನು ಬೆಚ್ಚಿಬೀಳಿಸುತ್ತಿದ್ದು, ಈ ವಿಷಯದಲ್ಲಿ ಶಿಕ್ಷಕರ ಮೇಲಾಗುತ್ತಿರುವ ದೌರ್ಜನ್ಯವನ್ನು ತಪ್ಪಿಸಬೇಕು ಎಂದು ರಾಜ್ಯದ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್ ನುಗ್ಗಿ ಮನವಿ ಮಾಡಿದ್ದಾರೆ. ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರಿಗೆ ಬಿಸಿಯೂಟ, ವೇಳಾಪಟ್ಟಿಯಂತೆ ಪಠ್ಯ ಬೋಧನೆ, ಇಲಾಖಾ ಕೆಲಸಗಳ ಬಗ್ಗೆ ಕೇಂದ್ರೀಕರಿಸುವ ಕುರಿತು ಈಗಾಗಲೇ ಮುಖ್ಯಶಿಕ್ಷಕರು ಹೈರಾಣಾಗಿದ್ದಾರೆ. ಈ ಒತ್ತಡದ ನಡುವೆ ಶಾಲೆಗಳ ಸ್ವಚ್ಛತೆಯನ್ನು ಯಾರು ಮಾಡಬೇಕೆಂಬುದೇ ಅತ್ಯಂತ ಗಂಭೀರವಾಗಿ ಯೋಚಿಸಬೇಕಾಗಿದೆ. ಈ ನಿಟ್ಟಿನಲ್ಲಿ ರಾಜ್ಯದ ಸರ್ಕಾರಿ ಶಾಲೆಗಳ ಸ್ವಚ್ಛತೆಗಾಗಿ ಪರ್ಯಾಯ ವ್ಯವಸ್ಥೆ ಕಲ್ಪಿಸುವಂತೆ ಕೋರಿದ್ದಾರೆ.

**ಬೇಡಿಕೆ ಪಟ್ಟಿ:** ಗ್ರಾಮೀಣ ಪ್ರದೇಶದ ಸರ್ಕಾರಿ ಶಾಲೆಗಳಲ್ಲಿ ಗ್ರಾಮ ಪಂಚಾಯಿತಿಯಿಂದ ಸರ್ಕಾರಿ ಶಾಲೆಗಳ ಸ್ವಚ್ಛತೆಗಾಗಿ ವ್ಯವಸ್ಥೆ ಮಾಡಬೇಕು ಅಥವಾ ಹೊರ ಗುತ್ತಿಗೆ ಆಧಾರದ ಮೇಲೆ ಸ್ವಚ್ಛತೆಗಾಗಿ ಸಿಬ್ಬಂದಿಗಳನ್ನು ನೇಮಿಸಲು ಕ್ರಮಕೈಗೊಳ್ಳಬೇಕು. ನಗರಸಭೆ, ಪಟ್ಟಣ ಪಂಚಾಯಿತಿ ಹಾಗೂ ಬಿಬಿಎಂಪಿ ವ್ಯಾಪ್ತಿಯಲ್ಲಿ ಪೌರಕಾರ್ಮಿಕರು ಹಾಗೂ ಸಂಬಂಧಿಸಿದ ಇಲಾಖೆಗಳ ವ್ಯಾಪ್ತಿಗೆ ಬರುವ ಸ್ವಚ್ಛತಾ ಸಿಬ್ಬಂದಿಗಳಿಂದ ಶಾಲಾ ಶೌಚಾಲಯ ಸ್ವಚ್ಛತೆಗೆ ನೇಮಿಸಬೇಕು. ಶಾಲಾ ಸುರಕ್ಷತೆ, ಶೌಚಾಲಯ ಸ್ವಚ್ಛತೆ ಹಾಗೂ ಶಾಲಾ ಸ್ವಚ್ಛತೆಯ ಕುರಿತು ಶಿಕ್ಷಣ ಇಲಾಖೆ ಮಾರ್ಗಸೂಚಿ ಹೊರಡಿಸಬೇಕು. ಸ್ವಚ್ಛತೆಗಾಗಿ ಅನುದಾನ ಹೆಚ್ಚಿಸುವುದಕ್ಕಿಂತ ಅಗತ್ಯ ಸಿಬ್ಬಂದಿಗಳನ್ನು ನೇಮಿಸಬೇಕು.

ಶಾಲಾ ಸ್ವಚ್ಛತೆ ದೃಷ್ಟಿಯಿಂದ ಶಾಲೆಯ ಮುಖ್ಯ ಶಿಕ್ಷಕರು ಹಾಗೂ ಸಹ ಶಿಕ್ಷಕರ ಮೇಲಾಗುತ್ತಿರುವ ಅಮಾನತು ಪ್ರಕರಣಗಳನ್ನು ಹಿಂಪಡೆಯಬೇಕು ಎಂದು ಮನವಿ ಮಾಡಿದ್ದಾರೆ.

ಒಂದನೇ ಪುಟದಿಂದ

## ಕುಶಾಲನಗರದ ಮಾಲಾಧಾರಿ ಸಾವು

ರಸ್ತೆ ಬದಿಯ ಮರಕ್ಕೆ ಡಿಕ್ಕಿ ಹೊಡೆದಿದೆ. ಈ ಅಪಘಾತದಲ್ಲಿ ಕಾರಿನ ಮುಂಭಾಗ ಸಂಪೂರ್ಣವಾಗಿ ಜಖಂಗೊಂಡಿದ್ದು, ಚಾಲಕ ಚಂದ್ರು ಸ್ಥಳದಲ್ಲೇ ಸಾವನ್ನಪ್ಪಿದರೆ, ಉಳಿದ ಮೂವರು ಗಂಭೀರವಾಗಿ ಗಾಯಗೊಂಡಿದ್ದು, ಸ್ಥಳೀಯರು ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಅಪಘಾತದಲ್ಲಿ ಮೃತಪಟ್ಟ ಚಂದ್ರು, ಪತ್ನಿ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುವರ್ಗ ಅಗಲಿದ್ದಾರೆ. ಈ ಅಪಘಾತದ ವಿಷಯವನ್ನು ಶಬರಿಮಲೈ ಯಾತ್ರೆಗೆ ತೆರಳಿದ್ದ ಯಾತ್ರಿಕರೊಬ್ಬರು ಸಾಮಾಜಿಕ ಜಾಲ ತಾಣದಲ್ಲಿ ಅಪ್‌ಲೋಡ್ ಮಾಡಿ, ಕುಶಾಲನಗರದವರ ಕಾರು ಅಪಘಾತ ವಾಗಿದೆ ಎಂದು ತಿಳಿಸಿದ ನಂತರ ಇಲ್ಲಿನವರಿಗೆ ವಿಷಯ ತಿಳಿದಿದೆ. ಅಪಘಾತದಲ್ಲಿ ಚಂದ್ರು ಸಾವನ್ನಪ್ಪಿದ್ದಾರೆ ಎಂಬ ವಿಚಾರ ಸಾಮಾಜಿಕ ಜಾಲತಾಣದ ಮೂಲಕ ತಿಳಿಯುತ್ತಿದ್ದಂತೆಯೇ ಅವರ ಸ್ನೇಹಿತರು ಹಾಗೂ ಸಂಬಂಧಿಕರು ಚಂದ್ರು ಮನೆಗೆ ಆಗಮಿಸಿ ಕುಟುಂಬಸ್ಥರಿಗೆ ಸಾಂತ್ವನ ಹೇಳುತ್ತಿದ್ದ ದೃಶ್ಯ ಕಂಡುಬಂತು. ಕುಟುಂಬದವರ ಆಕ್ರಂದನ ಮುಗಿಲು ಮುಟ್ಟಿತ್ತು. ಅಪಘಾತದಲ್ಲಿ ಗಾಯಗೊಂಡಿರುವವರ ಕುಟುಂಬಸ್ಥರು ಕೇರಳದತ್ತ ತೆರಳಿದ್ದಾರೆ.

## ಪೊಲೀಸ್ ಅಧಿಕಾರಿಗಳ ತನಿಖೆ ಪೂರ್ಣ

ಕೇಳುತ್ತಾರೋ ಎಂಬ ಆತಂಕದಲ್ಲಿದ್ದಾರೆ. ಸಲೂನ್ ತೆರೆಯಲು ಮನೋರಂಜನ್‌ನಿಂದ ಹಣಕಾಸು ನೆರವು ಪಡೆದಿದ್ದ ಸೂರಪ್ಪ ಬ್ಯಾಂಕ್ ಖಾತೆಯನ್ನು ಪೂರ್ಣವಾಗಿ ಪರಿಶೀಲನೆ ನಡೆಸಿರುವ ದೆಹಲಿ ಪೊಲೀಸರು ದಾಖಲಾತಿ ಕೂಡ ಸಂಗ್ರಹಿಸಿದ್ದಾರೆ.

ಸೂರಪ್ಪನಿಗೆ ಹಣಕಾಸು ನೆರವು ನೀಡಿರುವ ಮನೋರಂಜನ್ ತಂದೆ ಅಥವಾ ತಾಯಿಗೂ ಹಣ ನೀಡಿರಬಹುದೇ ಎಂದು ಪರಿಶೀಲನೆ ಮಾಡುತ್ತಿದ್ದಾರೆ. ಹಾಗೊಂದು ವೇಳೆ ಎಷ್ಟು ಹಣ ನೀಡಿರಬಹುದು, ಅವನಿಗೆ ಹಣ ಎಲ್ಲಿಂದ ಬಂದಿತು ಎಂಬ ಮೂಲವನ್ನು ಹುಡುಕುತ್ತಿದ್ದಾರೆ. ಇದರಿಂದ ಮನೋರಂಜನ್ ಬಗ್ಗೆ ತನಿಖೆ ನಡೆಸುತ್ತಿರುವ ದೆಹಲಿ ಪೊಲೀಸರಿಗೆ ಪ್ರಕರಣದ ವಿಚಾರ ಕೆದಕುತ್ತಿದ್ದಂತೆಲ್ಲಾ ಬಹಳಷ್ಟು ಸ್ಫೋಟಕ ಮಾಹಿತಿಗಳು ಲಭ್ಯವಾಗುತ್ತಿದೆ. ಇದರ ಜಾಡನ್ನು ಹಿಡಿದು ಇನ್ನು ಹಲವು ಮಾಹಿತಿ ಹುಡುಕುತ್ತಾ ಹೊರಟಿದ್ದಾರೆ. ಒಂದು ವೇಳೆ ಇಂದು ರಾತ್ರಿ ಅಥವಾ ನಾಳೆ ಮುಂಜಾನೆ ದೆಹಲಿಗೆ ಹೊರಟರೂ ಕೆಲವು ವಿಚಾರಗಳ ಖಚಿತತೆಗಾಗಿ ಮತ್ತೆ ಮೈಸೂರಿಗೆ ಬರುವ ಸಾಧ್ಯತೆ ಇದೆ.

# ಶೋಚನೀಯ ಸ್ಥಿತಿಯಲ್ಲಿದ್ದ ಹೆಣ್ಣು ಸಬಲಳಾಗಲು ಸಂವಿಧಾನ ಕಾರಣ

ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ, ವಿಸ್ತರಣಾ ಕೇಂದ್ರದ ಉಪನ್ಯಾಸಕಿ ಡಾ.ಹೆಚ್.ಕೆ.ಕಲಾವತಿ ಅಭಿಮತ

ಮೈಸೂರು, ಡಿ.27(ಎಂಕೆ)– ಭಾರತ ವೆಂಬ ಬಹುದೊಡ್ಡ ವಿಶಾಲತೆಯನ್ನು ನಿಭಾಯಿಸುವುದರ ಜೊತೆಗೆ ಮಹಿಳೆ ಮತ್ತು ಶಿಕ್ಷಣವನ್ನು ಸಮ್ಮಿಲನ ಮಾಡುವುದು ಸಂವಿಧಾನ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಅವರ ಆಶಯವಾಗಿದೆ ಎಂದು ಮೈಸೂರು ವಿವಿ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದ ಉಪನ್ಯಾಸಕಿ ಡಾ.ಹೆಚ್.ಕೆ.ಕಲಾವತಿ ತಿಳಿಸಿದರು.



74ನೇ ಸಂವಿಧಾನ ದಿನಾಚರಣೆ ಅಂಗವಾಗಿ ಮೈಸೂರು ವಿಶ್ವವಿದ್ಯಾನಿಲಯ, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದ ವತಿಯಿಂದ ಒಂಟಿಕೊಪ್ಪಲು ಬಾಲಕಿಯರ ವಿದ್ಯಾರ್ಥಿ ನಿಲಯದಲ್ಲಿ ಆಯೋಜಿಸಿದ್ದ 'ಭಾರತದ ಸಂವಿಧಾನ ಮತ್ತು ಮಹಿಳಾ ಶಿಕ್ಷಣ' ಕುರಿತ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಹಿಳೆ ಮತ್ತು ಶಿಕ್ಷಣ ಎರಡನ್ನು ಒಂದುಗೂಡಿಸಿದ ಶ್ರೇಯಸ್ಸು ಅಂಬೇಡ್ಕರ್ ಅವರಿಗೆ ಸಲ್ಲುತ್ತದೆ ಎಂದರು.

ಸ್ವಾತಂತ್ರ್ಯ ಪೂರ್ವದಲ್ಲಿನ ಸಮಾಜದಲ್ಲಿ ಮಹಿಳೆಯರ ಬಗ್ಗೆ ಮಾತನಾಡುವ ಹಾಗೂ ಅವರ ಪರವಾಗಿ ನಿಲ್ಲುವುದು ಅಷ್ಟು ಸುಲಭವಾಗಿರಲಿಲ್ಲ. ಇದರ ನಡುವೆಯೂ ಸ್ತ್ರೀ ಪರ ಧ್ವನಿ ಎತ್ತಿದವರಿಗೆ ಈ ಸಮಾಜ ಅನೇಕ ಅಗ್ನಿಪರೀಕ್ಷೆಗಳನ್ನೊಡ್ಡಿದೆ. ಹೊಗಳಿಕೆಗಷ್ಟೇ ಸೀಮಿತವಾಗಿದ್ದ ಹೆಣ್ಣಿನ ಪ್ರಗತಿ, ಅಭಿವೃದ್ಧಿ ಅಂದು ಯಾರಿಗೂ ಬೇಕಾಗಿರಲಿಲ್ಲ. ಅತ್ಯಂತ ಶೋಚನೀಯ ಸ್ಥಿತಿಯಲ್ಲಿದ್ದ ಹೆಣ್ಣು ಇಂದು ಸಬಲೆಯಾಗಲು ಭಾರತ ಸಂವಿಧಾನ ಕಾರಣ ಎಂದು ತಿಳಿಸಿದರು.

ಮಹಿಳೆಯರಿಗೆ ಶಿಕ್ಷಣವನ್ನು ಯಾವುದೇ ದೇವರು, ಪುರಾಣ, ಶಾಸ್ತ್ರ ಕೊಟ್ಟಿದ್ದಲ್ಲ. ಕೊಟ್ಟಿದ್ದು ದೇಶದ ಸಂವಿಧಾನ ಹಾಗೂ ಅದಕ್ಕಾಗಿ ಹೋರಾಡಿದ ಮಹನೀಯರು. ಹೆಣ್ಣು ಮಕ್ಕಳ ಕೈಯ್ಯಲ್ಲಿ ಗಂಧದ ಕಡ್ಡಿ ಕೊಡುವ ಬದಲು ಪುಸ್ತಕ ಕೊಡಿ. ಗಂಧದ ಕಡ್ಡಿ ಹಿಡಿದು ಒಂದಷ್ಟು ಹೊತ್ತಷ್ಟೇ ಅವರು ಬೆಳಗಲು ಸಾಧ್ಯ. ಅದೇ ಅವರ ಕೈಯಲ್ಲಿ ಪುಸ್ತಕ ನೀಡಿದರೆ ಇಡೀ ಜೀವನ ಪರ್ಯಂತ ಬೆಳಗುತ್ತಾರೆ. ಅಲ್ಲದೆ ಸಮಾಜಕ್ಕೂ ಬೆಳಕಾಗುತ್ತಾರೆ ಎಂದು ನಮ್ಮ ಪೂರ್ವಿಕರು ಹೇಳಿದ್ದಾರೆ. ಅದರಂತೆ ನಾವುಗಳು ಪುಸ್ತಕ ಹಿಡಿದು ಅಧ್ಯಯನ ಮಾಡಬೇಕು ಎಂದು ಹೇಳಿದರು.

ನಮ್ಮಂತಹ ಹೆಣ್ಣು ಮಕ್ಕಳ ಇವತ್ತಿನ ನೆಮ್ಮದಿಯ ಬದುಕಿನಲ್ಲಿ ಅನೇಕರ ಹೋರಾಟದ ಶ್ರಮವಿದೆ. ಅದನ್ನು ಅರಿತು ನಾವುಗಳು ನಮ್ಮ ಜೀವನವನ್ನು ಉಜ್ವಲವಾಗಿ ರೂಪಿಸಿಕೊಳ್ಳಬೇಕಿದೆ. ಎಲ್ಲದಕ್ಕಿಂತಲೂ ಓದುವ ಕಡೆಗೆ ನಿಮ್ಮ ಆಸಕ್ತಿ ಹೆಚ್ಚಾಗಿರಬೇಕು. ಉನ್ನತ ಸ್ಥಾನಗಳನ್ನು ಪಡೆಯುವ ಮೂಲಕ ಅಂಬೇಡ್ಕರ್ ಅವರ ಕನಸನ್ನು ನನಸು ಮಾಡಬೇಕು ಎಂದು ಕಿವಿಮಾತು ಹೇಳಿದರು.

**ಸಂವಿಧಾನ ಓದಿ:** ಬಳಿಕ ಮೈಸೂರು ವಿವಿ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದ ನಿರ್ದೇಶಕ ಪ್ರೊ.ಜೆ.ಸೋಮಶೇಖರ್ ಮಾತನಾಡಿ, ವಿದ್ಯಾರ್ಥಿನಿಯರು ಮೊಬೈಲ್ ಬಿಟ್ಟು ಓದಿನ ಕಡೆಗೆ ಹೆಚ್ಚಿನ ಆಸಕ್ತಿ ಬೆಳೆಸಿಕೊಳ್ಳಬೇಕು. ಪಠ್ಯಪುಸ್ತಕಗಳ ಜೊತೆಗೆ ಭಾರತ ಸಂವಿಧಾನದ ಪುಸ್ತಕಗಳನ್ನು ಓದಿ. ಸಂವಿಧಾನದ ಅರಿವಿದ್ದರೆ ಅನ್ಯಾಯಗಳನ್ನು ಎದುರಿಸುವ ಧೈರ್ಯ ನಿಮ್ಮಲ್ಲಿ ತಾನಾಗಿಯೇ ಬರಲಿದೆ ಎಂದರು.

ಇದಕ್ಕೂ ಮುನ್ನ ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಸಾವಿತ್ರಿ ಬಾಪುಲೆ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು. ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದ ಉಪನ್ಯಾಸಕರಾದ ಡಾ.ರಾಚಪ್ಪಾಜಿ, ಡಾ.ಗೋಪಾಲ್, ಒಂಟಿಕೊಪ್ಪಲು ಬಾಲಕಿಯರ ವಿದ್ಯಾರ್ಥಿ ನಿಲಯದ ನಿಲಯ ಪಾಲಕಿ ಕಾಮಾಕ್ಷಮ್ಮ ಉಪಸ್ಥಿತರಿದ್ದರು.

## ಹಿಮಾಲಯ ಪ್ರತಿಷ್ಠಾನದಿಂದ ಯೋಗ ಕ್ಯಾಲೆಂಡರ್ ಬಿಡುಗಡೆ

ಮೈಸೂರು, ಡಿ.27– ಹಿಮಾಲಯ ಪ್ರತಿಷ್ಠಾನವು ಹೊರತಂದಿರುವ 2024ನೇ ವರ್ಷದ ನೂತನ ಯೋಗ ಕ್ಯಾಲೆಂಡರ್ ಬಿಡುಗಡೆ ಸಮಾರಂಭವನ್ನು ಡಿ.30ರ ಶನಿವಾರ ಬೆಳಗ್ಗೆ 11.30ಕ್ಕೆ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಆಯೋಜಿಸಲಾಗಿದೆ.

ಕ್ಯಾಲೆಂಡರನ್ನು ಯೋಗಾಚಾರ್ಯರಾದ ಎನ್.ಶ್ರೀಧರ್ ಬಿಡುಗಡೆಗೊಳಿಸಲಿದ್ದು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹಿರಿಯ ಯೋಗಾಚಾರ್ಯ ಶ್ರೀಹರಿ, ಹಿರಿಯ ಸಮಾಜ ಸೇವಕ ಡಾ. ರಘುರಾಂ ವಾಜಪೇಯಿ, ಕರ್ನಾಟಕ ಕಾವಲು ಪಡೆ ಅಧ್ಯಕ್ಷ ಎಂ.ಮೋಹನ್ ಕುಮಾರ್‌ಗೌಡ, ಸಂಸ್ಕೃತ ವಿದುಷಿ ಡಾ. ಕೆ.ಲೀಲಾಪ್ರಕಾಶ್, ಹಿಮಾಲಯ ಪ್ರತಿಷ್ಠಾನದ ಅಧ್ಯಕ್ಷ ಎನ್.ಅನಂತ ಇತರರು ಪಾಲ್ಗೊಳ್ಳಲಿದ್ದಾರೆ. ಇದೇ ಸಂದರ್ಭ ನಾಟ್ಯಕಲಾವಿದೆ ಶ್ರೀಮತಿ ಎಂ.ಕೆ.ಶೋಭ, ಯೋಗ ಗುರುಗಳಾದ ಎಂ.ಮಲ್ಲೇಶ್ ಹಾಗೂ ಪುರುಷೋತ್ತಮ್ ಅವರನ್ನು ಅಭಿನಂದಿಸಲಾಗುವುದು.

ಪ್ರತಿ ವರ್ಷವೂ ಯೋಗದ ವಿಭಿನ್ನ ಕ್ಯಾಲೆಂಡರ್‌ಗಳನ್ನು ಹೊರತರುತ್ತಿರುವ ಹಿಮಾಲಯ ಪ್ರತಿಷ್ಠಾನವು ಈ ಬಾರಿ ಮಹರ್ಷಿ ಪತಂಜಲಿಯ ಅಷ್ಟಾಂಗ ಯೋಗ ಸೂತ್ರಾವಳಿ ಕ್ಯಾಲೆಂಡರನ್ನು ಸಿದ್ಧಪಡಿಸಿದೆ. ಈಗಾಗಲೇ ವರನಟ ಡಾ. ರಾಜ್‌ಯೋಗ, ಮಲ್ಲಾಡಿಹಳ್ಳಿ ರಾಘವೇಂದ್ರ ಸ್ವಾಮೀಜಿ, ಮಹರ್ಷಿ ಪತಂಜಲಿ, ಸೂರ್ಯ ನಮಸ್ಕಾರ, ಮೈಸೂರಿನ ಯೋಗ ಪರಂಪರೆ ಮುಂತಾದ ಯೋಗ ಸಂಬಂಧಿತ ಅತ್ಯುತ್ತಮ ಮಾಹಿತಿಯುಳ್ಳ ಆಕರ್ಷಕ ಕ್ಯಾಲೆಂಡರ್‌ಗಳನ್ನು ಹೊರ ತಂದಿರುವುದು ವಿಶೇಷ.

## ಮೊದಲ ಟೆಸ್ಟ್; 2ನೇ ದಿನದಾಟದ ಅಂತ್ಯಕ್ಕೆ ದಕ್ಷಿಣ ಆಫ್ರಿಕಾ 256/5

ಭಾರತ ವಿರುದ್ಧ 11 ರನ್‌ಗಳ ಮುನ್ನಡೆ

ಸೆಂಚೂರಿಯನ್: ಭಾರತ ಮತ್ತು ದಕ್ಷಿಣ ಆಫ್ರಿಕಾ ವಿರುದ್ಧದ ಮೊದಲ ಟೆಸ್ಟ್ ಪಂದ್ಯದ 2ನೇ ದಿನದಾಟದ ಅಂತ್ಯಕ್ಕೆ ದಕ್ಷಿಣ ಆಫ್ರಿಕಾ 5 ವಿಕೆಟ್ ನಷ್ಟಕ್ಕೆ 256 ರನ್ ಗಳಿಸಿದ್ದು, ಭಾರತದ ವಿರುದ್ಧ 11 ರನ್‌ಗಳ ಮುನ್ನಡೆ ಕಾಯ್ದುಕೊಂಡಿದೆ.




ಸೆಂಚೂರಿಯನ್‌ನ ಸೂಪರ್ ಸ್ಪೋರ್ಟ್ ಪಾರ್ಕ್‌ನಲ್ಲಿ ನಡೆಯುತ್ತಿರುವ ಮೊದಲ ಟೆಸ್ಟ್ ಪಂದ್ಯದ 2ನೇ ದಿನ ಭಾರತ ತಂಡ ಕೆಎಲ್ ರಾಹುಲ್ ಶತಕದ ನೆರವಿನಿಂದ 245ರನ್ ಗಳಿಸಿತು. ಇದಕ್ಕೆ ಉತ್ತರವಾಗಿ ಮೊದಲ ಇನ್ನಿಂಗ್ಸ್ ಆಡುತ್ತಿರುವ ದಕ್ಷಿಣ ಆಫ್ರಿಕಾ ತಂಡ ಡೀನ್ ಎಲ್ಗಾರ್ (ಅಜೇಯ 140ರನ್)ಅಮೋಘ ಶತಕ ಹಾಗೂ ಡೇವಿಡ್ ಬೆಡಿಂಗ್ಹ್ಯಾಮ್ (56 ರನ್) ಅರ್ಧಶತಕದ ನೆರವಿನಿಂದ 256 ರನ್ ಗಳಿಸಿದೆ. ಮೊದಲ ಇನ್ನಿಂಗ್ಸ್ ಆರಂಭಿಸಿದ್ದ ದಕ್ಷಿಣ ಆಫ್ರಿಕಾಗೆ ಭಾರತದ ವೇಗಿ ಮಹಮದ್ ಸಿರಾಜ್ ಆರಂಭಿಕ ಆಘಾತ ನೀಡಿದರು. ಆಫ್ರಿಕಾದ ಆರಂಭಿಕ ಆಟಗಾರ ಐಡೆನ್ ಮಾರ್ಕ್ರಾಮ್ ಕೇವಲ 5ರನ್ ಗಳಿಗೆ ಕೆಎಲ್ ರಾಹುಲ್ ಗೆ ಕ್ಯಾಚಿತ್ತು ಔಟಾದರು. ಬಳಿಕ ಟೋನಿ ಡಿ ಜೋರ್ಜಿ ಕೂಡ 28 ರನ್ ಗಳಿಸಿ ಬುಮ್ರಾಗೆ ವಿಕೆಟ್ ಒಪ್ಪಿಸಿದರು. ಈ ಹಂತದಲ್ಲಿ ಎಲ್ಗಾರ್ ಉತ್ತಮ ಬ್ಯಾಟಿಂಗ್ ಮೂಲಕ ಅರ್ಧಶತಕ ಸಿಡಿಸಿ ತಂಡದ ಮೊತ್ತವನ್ನು 150ರ ಗಡಿ ದಾಟಿಸಿದ್ದರು.

ಈ ಹಂತದಲ್ಲಿ ಕೀಗನ್ ಪೀಟರ್ಸನ್ ಕೇವಲ 2ರನ್ ಗಳಿಸಿ ಬುಮ್ರಾಗೆ ವಿಕೆಟ್ ಒಪ್ಪಿಸಿದರು. ಕೈಲ್ ವೆರ್ರೆನ್ನೆ 4 ರನ್ ಗಳಿಸಿ ದಿನದಾಟದ ಅಂತಿಮ ಹಂತದಲ್ಲಿ ವಿಕೆಟ್ ಕೈ ಚೆಲ್ಲಿದರು. ಈ ಹೊತ್ತಿಗಾಗಲೇ ಎಲ್ಗಾರ್ ಶತಕ ಸಿಡಿಸಿದ್ದರು. ಅಂತಿಮವಾಗಿ ದಿನದಾಟದ ಅಂತ್ಯಕ್ಕೆ ದ.ಆಫ್ರಿಕಾ 5 ವಿಕೆಟ್ ನಷ್ಟಕ್ಕೆ 256 ರನ್ ಗಳಿಸಿ ಭಾರತದ ವಿರುದ್ಧ 11 ರನ್‌ಗಳ ಮುನ್ನಡೆ ಸಾಧಿಸಿದೆ.

## ಬಹುಭಾಷಾ ಸಿನಿಮಾ ಸ್ಟಂಟ್ ಮಾಸ್ಟರ್ ಜಾಲಿ ಬಾಸ್ಟಿಯನ್ ಹೃದಯಾಘಾತದಿಂದ ನಿಧನ

ಬೆಂಗಳೂರು: ಹೃದಯಾಘಾತದಿಂದ ಸ್ಯಾಂಡಲ್‌ವುಡ್‌ನ ಮತ್ತೊಬ್ಬ ಕಲಾವಿದ ನಿಧನರಾಗಿದ್ದಾರೆ. ಕನ್ನಡ ಸೇರಿ ಹಲವು ಭಾಷೆಗಳಲ್ಲಿ ಸಾಹಸ ನಿರ್ದೇಶನ ಮಾಡಿದ್ದ ಜಾಲಿ ಬಾಸ್ಟಿಯನ್ ಹಠಾತ್ ಹೃದಯಾಘಾತದಿಂದ ನಿನ್ನೆ ಮಂಗಳವಾರ ರಾತ್ರಿ ನಿಧನ ಹೊಂದಿದ್ದು, ಅವರಿಗೆ 57 ವರ್ಷ ವಯಸ್ಸಾಗಿತ್ತು.



ವಿ.ರವಿಚಂದ್ರನ್ ಅವರ ಖ್ಯಾತ ಚಿತ್ರ 'ಪ್ರೇಮಲೋಕ', ರಾಕಿಂಗ್ ಸ್ಟಾರ್ ಯಶ್ ನಟನೆಯ 'ಮಾಸ್ಟರ್ ಪೀಸ್' ಸೇರಿ ನೂರಾರು ಸಿನಿಮಾಗಳಿಗೆ ಅವರು ಸ್ಟಂಟ್ ಡೈರೆಕ್ಟರ್ ಆಗಿ ಕೆಲಸ ಮಾಡಿದ್ದರು. ಜಾಲಿ ಅವರು 1966ರಲ್ಲಿ ಕೇರಳದ ಅಲೆಪ್ಪೆಯಲ್ಲಿ ಜನಿಸಿದ್ದರು. ನಂತರ ಓದು, ಬೆಳೆದಿದ್ದೆಲ್ಲವು ಬೆಂಗಳೂರಿನಲ್ಲಿ. ಬೈಕ್ ಮೆಕ್ಯಾನಿಕ್ ಆಗಿ ಜಾಲಿ ಬಾಸ್ಟಿನ್ ವೃತ್ತಿ ಆರಂಭಿಸಿದರು. ಅವರನ್ನು ಗುರುತಿಸಿದ ಕೆಲವರು ಸ್ಟಂಟ್‌ಮನ್ ಆಗಿ ಚಿತ್ರರಂಗಕ್ಕೆ ಪರಿಚಯಿಸಿದರು. 17ನೇ ವಯಸ್ಸಿನಲ್ಲಿ 'ಪ್ರೇಮಲೋಕ' ಚಿತ್ರದಲ್ಲಿ ರವಿಚಂದ್ರನ್ ಅವರಿಗೆ ಡ್ಯೂಪ್ ಹಾಕಿದ್ದರು. ಸಾಹಸ ಕಲಾವಿದನಾಗಿ, ಸಾಹಸ ನಿರ್ದೇಶಕನಾಗಿ ಕೆಲಸ ಮಾಡಿದ ಜಾಲಿ ಅವರು ಈವರೆಗೆ 900ಕ್ಕೂ ಅಧಿಕ ಸಿನಿಮಾಗಳಲ್ಲಿ ಕೆಲಸ ಮಾಡಿದ್ದಾರೆ. 'ನಿನಗಾಗಿ ಕಾದಿರುವೆ' ಚಿತ್ರದ ಮೂಲಕ ನಿರ್ದೇಶಕನಾದರು. ಒಂದು ಕಾಲಕ್ಕೆ ಕನ್ನಡ, ತಮಿಳು, ಮಲಯಾಳಂ ಚಿತ್ರಗಳಲ್ಲಿ ಸಾಹಸ ನಿರ್ದೇಶಕನಾಗಿ ಜಾಲಿ ಬಾಸ್ಟಿನ್ ಹೆಸರು ಮಾಡಿದ್ದರು. 'ಪ್ರೇಮಲೋಕ', 'ಪುಟ್ನಂಜ', 'ಅಣ್ಣಯ್ಯ', 'ಶಾಂತಿ ಕ್ರಾಂತಿ' ಸೇರಿದಂತೆ ರವಿಚಂದ್ರನ್ ನಟನೆಯ ಹಲವಾರು ಸಿನಿಮಾಗಳಲ್ಲಿ ಜಾಲಿ ಕೆಲಸ ಮಾಡಿದ್ದಾರೆ.

## 'ಹರಿದಾಸ ಝೇಂಕಾರ' ದಾಸರ ಪದಗಳ ಗಾಯನ ಕಾರ್ಯಕ್ರಮ



ಮೈಸೂರು, ಡಿ. 27– ಅರಮನೆಯ ಉತ್ತರ ದ್ವಾರದಲ್ಲಿರುವ ಕೋಟೆ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಹನುಮ ಜಯಂತಿ ಮಹೋತ್ಸವದ ಅಂಗವಾಗಿ ನಾಳೆ (ಡಿ. 28) ಸಂಜೆ 7 ಗಂಟೆಗೆ ಕು॥ಪ್ರತೀಕ್ಷ ಜಿ.ರಾವ್ ಅವರಿಂದ 'ಹರಿದಾಸ ಝೇಂಕಾರ' ದಾಸರ ಪದಗಳ ಗಾಯನ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಪಕ್ಕವಾದ್ಯದಲ್ಲಿ ವಿ॥ಅಮಿತ್ ಶರ್ಮಾ (ಕೀ–ಬೋರ್ಡ್), ವಿ॥ ಗೋಪಾಲ ಗುಡಿಬಂಡೆ (ತಬಲಾ), ವಿ॥ ಪದ್ಮನಾಭ (ಕೊಳಲು), ವಿ॥ಎನ್.ಕುಮಾರ್ (ತಾಳ) ಸಹಕಾರ ನೀಡಲಿದ್ದಾರೆ.



ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡರು ಹಾಗೂ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯರಾದ ರಾಕೇಶ್ ಪಾಪಣ್ಣ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅವರನ್ನು ಅಭಿನಂದಿಸಿ, ಶುಭ ಕೋರಲಾಯಿತು. ಕೆಪಿಸಿಸಿ ಸದಸ್ಯರಾದ ನಜರ್‌ಬಾದ್ ನಟರಾಜ್, ಮರಟಿ ಕ್ಯಾತನಹಳ್ಳಿ ಮಂಜು, ರವಿಚಂದ್ರ, ರಾಮಚಂದ್ರು, ಕಡಕೋಳ ಶಿವು, ವರುಣ ಮಹದೇವ್, ಜಟ್ಟಿಹುಂಡಿ ಗೋಪಾಲ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.



ಹುಟ್ಟುಹಬ್ಬದ ಪ್ರಯುಕ್ತ ರಾಕೇಶ್ ಪಾಪಣ್ಣ ಅವರನ್ನು ಚಲನಚಿತ್ರ ನಿರ್ಮಾಪಕ ಕೆ.ವಿ. ಶಶಿಧರ್, ಸ್ನೇಹಿತರಾದ ರಘು, ತ್ಯಾಗರಾಜ್, ಬೀರೇಶ್, ವಿಜಯ್ ಅಭಿನಂದಿಸಿ, ಶುಭಾಶಯ ಕೋರಿದರು.

## ಶಬರಿಮಲೆಯಲ್ಲಿ ಅವ್ಯವಸ್ಥೆ: ಪಿಣರಾಯಿ ಸರ್ಕಾರದ ನಡೆ ಖಂಡನೀಯ

ಮೈಸೂರು, ಡಿ. 27–ಪ್ರಸಿದ್ಧ ಪುಣ್ಯಕ್ಷೇತ್ರ, ಹಿಂದುಗಳ ಶ್ರದ್ಧೆಯ ಕೇಂದ್ರ ಶಬರಿಮಲೆ ಶ್ರೀ ಅಯ್ಯಪ್ಪ ಸನ್ನಿದಿಯಲ್ಲಿ ಭಕ್ತರು ಮೂಲ ಸೌಲಭ್ಯಗಳ ಕೊರತೆಯಿಂದ ಸಮಸ್ಯೆಗಳನ್ನು ಎದುರಿಸುತ್ತಿರುವುದನ್ನು ಮಾಧ್ಯಮಗಳು ಬಿತ್ತರಿಸಿವೆ. ಶಬರಿಮಲೆ ಕ್ಷೇತ್ರದಿಂದ ಕೋಟ್ಯಾಂತರ ರೂಪಾಯಿ ಕಾಣಿಕೆ ಹಣವನ್ನು ದೋಚುವ ಪಿಣರಾಯಿ ವಿಜಯನ್ ಸರ್ಕಾರ ಕ್ಷೇತ್ರಕ್ಕೆ ಬರುವ ಭಕ್ತರಿಗೆ ಅನುಕೂಲತೆಗಳನ್ನು ಕಲ್ಪಿಸಿ ಕೊಡದಿರುವುದು ಖಂಡನೀಯ ಎಂದು ಸಾಮಾಜಿಕ ಹೋರಾಟಗಾರ ಬೈರತಿ ಲಿಂಗರಾಜು ಹೇಳಿದ್ದಾರೆ. ಶಬರಿಮಲೆಗೆ ಪ್ರತಿವರ್ಷ ಮಕರ ಜ್ಯೋತಿ ದರ್ಶನಕ್ಕೆ ಕರ್ನಾಟಕದಿಂದ ಕೂಡ ಲಕ್ಷಾಂತರ ಮಾಲಾಧಾರಿಗಳು ತೆರಳುತ್ತಾರೆ. ಆದುದರಿಂದ ಕರ್ನಾಟಕ ಸರ್ಕಾರ ಕೇರಳ ಸರ್ಕಾರದ ಜತೆ ಮಾತುಕತೆ ನಡೆಸಿ ಭಕ್ತರಿಗೆ ಸರಿಯಾದ ಅನುಕೂಲಕರ ವ್ಯವಸ್ಥೆ ಕಲ್ಪಿಸಿಕೊಡಲು ಕ್ರಮ ಜರುಗಿಸಬೇಕೆಂದು ಬೈರತಿ ಲಿಂಗರಾಜು ರಾಜ್ಯ ಸರ್ಕಾರವನ್ನು ಆಗ್ರಹಿಸಿದ್ದಾರೆ.



ಮೈಸೂರಿನ ವಿಜಯನಗರ 1ನೇ ಹಂತದ ಡಿ.ಸಂಜೀವಯ್ಯ ಸ್ಮಾರಕ ಶಿಕ್ಷಣ ಸಂಸ್ಥೆಯ ಆವರಣದಲ್ಲಿರುವ ಬುದ್ಧ ವಿಹಾರದಲ್ಲಿ ಕರ್ನಾಟಕ ಬುದ್ಧ ಧರ್ಮ ಸಮಿತಿ ವತಿಯಿಂದ ಹುಣ್ಣಿಮೆ ದಿನದ ಪ್ರಯುಕ್ತ ಬುದ್ಧರ ಮೂರ್ತಿಗೆ ಪುಷ್ಪ ನಮನ ಸಲ್ಲಿಸಿ, ಪ್ರಾರ್ಥಿಸಲಾಯಿತು. ಸಮಿತಿಯ ಸಹ ಕಾರ್ಯದರ್ಶಿ ಎಚ್. ಶಿವರಾಜ್, ಖಜಾಂಚಿ ಎಂ. ಸಾವಕಯ್ಯ, ರಾಜು ಹಂಪಾಪುರ, ನಿವೃತ್ತ ಇಂಜಿನಿಯರ್ ಆರ್.ನಟರಾಜ್, ಫೋಟೋ ಪುಟ್ಟಸ್ವಾಮಿ, ನಿಸರ್ಗ ಸಿದ್ದರಾಜು, ಭರತ್ ರಾಜು, ಗಂಗಾಧರ್, ಲಿಂಗಣ್ಣಯ್ಯ, ಎಂ. ನಾಗಯ್ಯ, ಡಾ.ಸತ್ತಿಗೆ ಹುಂಡಿ ಮಂಜು, ಮಹದೇವಯ್ಯ, ವಿಜಯ್, ವಿಶಾಲ್ ಮತ್ತಿತರರು ಹಾಜರಿದ್ದರು.



ಮೈಸೂರು ಡಿವಿಜನ್ ಕ್ಯಾಥೋಲಿಕ್ ಕ್ರಿಶ್ಚಿಯನ್ ಅಸೋಸಿಯೇಷನ್ (MDCCA) ಹಾಗೂ ಮೈಸೂರು ಧರ್ಮ ಪ್ರಾಂತ್ಯ ಕ್ರೈಸ್ತ ಜನರ ಅಭಿವೃದ್ಧಿ ಸಂಘದ ವತಿಯಿಂದ ಸಂತ ಫಿಲೋಮಿನಾ ದೇವಾಲಯದಲ್ಲಿ ಭಕ್ತಾದಿಗಳಿಗೆ ಹಾಗೂ ಸಾರ್ವಜನಿಕರಿಗೆ ಕೇಕ್ ಹಂಚುವುದರ ಮುಖಾಂತರ ಶಾಂತಿಯ ಸಂಕೇತವಾದಂತಹ ಪ್ರಭು ಯೇಸುಕ್ರಿಸ್ತರ ಕ್ರಿಸ್‌ಮಸ್ ಹಬ್ಬವನ್ನು ಆಚರಿಸಲಾಯಿತು. ಸಂಘದ ಅಧ್ಯಕ್ಷ ಜೆ.ಸ್ಟೀಫನ್ ಸುಜಿತ್, ಉಪಾಧ್ಯಕ್ಷ ಜಾನ್ ಫರ್ನಾಂಡಿಸ್ (ಬೆನ್ನ ), ಕಾರ್ಯದರ್ಶಿ ಮರಿಯಾ ಫ್ರಾನ್ಸಿಸ್ ಪಿ, ಮೈಕಲ್ ಸಗಾಯಿರಾಜ್, ಪ್ರಶಾಂತ್ ಆರೋಗ್ಯರಾಜ್, ಜೋಸೆಫ್ ಮ್ಯಾನ್ವಲ್, ಸೈಮನ್, ಬಾರ್ಬರ ಬೇಯರ್, ಮೊಸಸ್ ರಾಜ್ ಮತ್ತಿತರರು ಉಪಸ್ಥಿತರಿದ್ದರು.



ಡಿ. ಬನುಮಯ್ಯ ವಿದ್ಯಾಸಂಸ್ಥೆಯ ನೌಕರರ ಪತ್ತಿನ ಸಹಕಾರ ಸಂಘದ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು. ಈ ವೇಳೆ ಡಿ.ಬನುಮಯ್ಯ ವಿದ್ಯಾಸಂಸ್ಥೆ ಅಧ್ಯಕ್ಷ ಡಾ.ವಿ.ಬಿ.ಜಯದೇವ, ಆಡಳಿತಾಧಿಕಾರಿ ಡಾ.ಎನ್.ತಿಮ್ಮಯ್ಯ, ಸಹಕಾರ ಸಂಘದ ಅಧ್ಯಕ್ಷ ಬಿ.ವಿ.ವೆಂಕಟೇಶ್, ಎನ್.ಶ್ರೀಧರ್, ನಿರ್ದೇಶಕರಾದ ಎಚ್.ಆರ್. ಸುರೇಶ್, ಎಂ.ಡಿ.ಸತೀಸ್ ಕುಮಾರ್, ಆನಂದ್ ಜಿ, ಸೋಮಶೇಖರ್, ಚಂದ್ರಪ್ಪ, ಶ್ರೀಮತಿ ಎಚ್.ಆರ್.ಪ್ರಿಯದರ್ಶಿನಿ, ಟಿ.ಭಾರತಿ ಹಾಜರಿದ್ದರು.



2023–24ನೇ ಸಾಲಿನ ದಕ್ಷಿಣ ವಲಯ ಅಂತರ ವಿಶ್ವವಿದ್ಯಾನಿಲಯ ಮಹಿಳೆಯರ ವಾಲಿಬಾಲ್ ಪಂದ್ಯಾವಳಿಯು ಡಿ.31ರವರೆಗೆ ತಿರುಪತಿಯ ಪದ್ಮಾವತಿ ವಿಶ್ವವಿದ್ಯಾನಿಲಯದಲ್ಲಿ ನಡೆಯಲಿದೆ. ಈ ಪಂದ್ಯಾವಳಿಗೆ ಮೈಸೂರು ವಿಶ್ವವಿದ್ಯಾನಿಲಯದ ವಾಲಿಬಾಲ್ ಮಹಿಳೆಯರ ತಂಡ ಭಾಗವಹಿಸಲಿದೆ. ಚಿತ್ರದಲ್ಲಿ ನಿಂತಿರುವವರು ಏಂಜೆಲಾ, ಅರ್ಪಣ ಸಿ.ಡಿ, ಪ್ರಕೃತಿ ಕೆ.ಪಿ, ವಿಜರಾಂಭಗೌಡ, ಕೀರ್ತನಾ.ಪಿ.ಯು, ಯಮುನಾ.ಹೆಚ್.ಎಂ, ಪ್ರೀತಿ ಹೆಚ್.ಎಂ, ಐಶ್ವರ್ಯ ಪಿ.ಎನ್, ಹೀನಾ ಖಾನಂ.ಜಿ.ಎಸ್, ಸಿರಿ.ಎನ್, ಅನುಶ್ರೀ ಎಂ.ಎಲ್. (ಕುಳಿತಿರುವವರು): ಪುಟ್ಟರಾಜು (ವ್ಯವಸ್ಥಾಪಕ) ಕಾಂತರಾಜು, ಡಾ.ಸಿ. ವೆಂಕಟೇಶ್, (ನಿರ್ದೇಶಕರು) ಡಾ. ಉದಯಕುಮಾರ್ ಹೆಚ್.ವಿ. (ತರಬೇತುದಾರ) ನಿವೇದಿತಾ ಕೆ.ವಿ(ನಾಯಕಿ) ಕಾಣಬಹುದು.

# ಹೊಸ ವರ್ಷಾರಂಭದಂದು ಯೋಗನರಸಿಂಹ ಸ್ವಾಮಿ ದೇವಾಲಯದಲ್ಲಿ ಭಕ್ತರಿಗೆ 2 ಲಕ್ಷ ಲಾಡು ವಿತರಣೆ





ಮೈಸೂರು, ಡಿ.27(ಜಿಎ)–ಮೈಸೂರಿನ ವಿಜಯನಗರದ ಯೋಗಾನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ಜ.1ರಂದು ನೂತನ ವರ್ಷಾರಂಭದ ಅಂಗವಾಗಿ ಭಕ್ತರಿಗೆ ವಿತರಿಸಲು 60 ಬಾಣಸಿಗರಿಂದ 2ಲಕ್ಷ ಲಾಡು ಸಿದ್ಧಪಡಿಸಲಾಗುತ್ತಿದೆ.

ಈ ಕುರಿತು ದೇವಸ್ಥಾನದ ಸಂಸ್ಥಾಪಕ ನಾಡೋಜ ಪ್ರೊ.ಭಾಷ್ಯಂ ಸ್ವಾಮೀಜಿ ಅವರು ಬುಧವಾರ ದೇವಸ್ಥಾನದ ಆವರಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ತಿರುಪತಿ ಮಾದರಿಯ ಲಾಡುಗಳನ್ನು ವಿತರಿಸುವಂತೆ ನಟ ಡಾ.ರಾಜ್‌ಕುಮಾರ್ ನೀಡಿದ ಸಲಹೆ ಮೇರೆಗೆ ಲಾಡು ಹಂಚುವ ಪದ್ಧತಿ 1994ರಿಂದ ಪ್ರಾರಂಭವಾಯಿತು. ಆರಂಭದಲ್ಲಿ 1,000 ಲಾಡುಗಳನ್ನು ವಿತರಿಸಲಾಗುತ್ತಿತ್ತು. ನಂತರ ಕಾಲಕ್ರಮೇಣ ಅದನ್ನು ಒಂದು ಲಕ್ಷ ಮತ್ತು ಎರಡು ಲಕ್ಷಕ್ಕೆ ಹೆಚ್ಚಿಸಲಾಯಿತು, ಇದನ್ನು ಪ್ರತಿವರ್ಷ ನಿರ್ವಹಿಸಲಾಗುತ್ತಿದೆ ಎಂದರು.

ಅಂದು ಮುಂಜಾನೆ 4 ಗಂಟೆಯಿಂದ ಮಧ್ಯ ರಾತ್ರಿ 12 ಗಂಟೆಯವರೆಗೆ ಯಾವುದೇ ಜಾತಿ ಮತ್ತು ವರ್ಗವನ್ನು ಲೆಕ್ಕಿಸದೆ ದೇವ ಸ್ಥಾನಕ್ಕೆ ಭೇಟಿ ನೀಡುವ ಪ್ರತಿಯೊಬ್ಬ ಭಕ್ತರಿಗೆ ಸಿಹಿ ವಿತರಿಸಲಾಗುವುದು. ದೇವಸ್ಥಾನದ ಆವರಣದಲ್ಲಿ 60 ಮಂದಿ ಪರಿಣಿತ ಬಾಣಸಿಗರ ತಂಡ ಡಿ.20ರಂದು ಸಿಹಿ ತಯಾರಿಸಲು ಆರಂಭಿಸಿದ್ದು, ಡಿ.31ರಂದು ಕಾರ್ಯ ಪೂರ್ಣಗೊಳಿಸಲಿದ್ದಾರೆ. ತಲಾ 2,000 ಗ್ರಾಂ ತೂಕದ ಒಟ್ಟು 15,000 ಲಾಡುಗಳು ಮತ್ತು ತಲಾ 150 ಗ್ರಾಂ ತೂಕದ 2 ಲಕ್ಷ ಲಾಡುಗಳನ್ನು ಭಕ್ತರಿಗೆ ವಿತರಿಸಲಾಗುವುದು.

ಎರಡು ಲಕ್ಷ ಲಾಡು ತಯಾರಿಸಲು 100 ಕ್ವಿಂಟಾಲ್ ಕಡ್ಲೆ ಹಿಟ್ಟು, 200 ಕ್ವಿಂಟಾಲ್ ಸಕ್ಕರೆ, 10,000 ಲೀಟರ್ ಖಾದ್ಯ ಎಣ್ಣೆ, 500 ಕೆಜಿ ಗೋಡಂಬಿ, 500 ಕೆಜಿ ಒಣದ್ರಾಕ್ಷಿ, 500 ಕೆಜಿ ಬಾದಾಮಿ, 1,000 ಕೆಜಿ ಡೈಮಂಡ್ ಸಕ್ಕರೆ, 50 ಕೆಜಿ ಏಲಕ್ಕಿ, 50 ಕೆಜಿ ಪಿಸ್ತಾ, 50 ಕೆಜಿ ಜಾಕಾಯಿ ಮತ್ತು ಜಾಪತ್ರೆ, 50 ಕೆಜಿ ಪಚ್ಚೆ ಕರ್ಪೂರ (ಖಾದ್ಯ ಕರ್ಪೂರ) ಇತರೆ ಪದಾರ್ಥಗಳನ್ನು ಬಳಸಲಾಗಿದೆ ಎಂದು ವಿವರಿಸಿದರು.

ದೇವಾಲಯದಲ್ಲಿ ಅಂದು ಮುಂಜಾನೆ 4 ಗಂಟೆಗೆ ಶ್ರೀ ಯೋಗನರಸಿಂಹ ಸ್ವಾಮಿಗೆ ವಿಶೇಷ ಅಲಂಕಾರ, ತೋಮಲೆ ಸಹಸ್ರ ನಾಮಾರ್ಚನೆ ಮತ್ತು ಶ್ರೀರಂಗಂ, ಮಧುರೈನಿಂದ ವಿಶೇಷವಾಗಿ ತಂದ ಸ್ವರ್ಣ ಪುಷ್ಪ ಮತ್ತು ಏಕಾದಶ ಪ್ರಾಕಾರೋತ್ಸವ ಮತ್ತು 20 ಕ್ವಿಂಟಾಲ್ ಪುಳಿಯೋಗರೆ ನಿವೇದನೆ (ನೈವೇದ್ಯ)ಯೊಂದಿಗೆ ದೇವಾಲಯದ ಆವರಣದಲ್ಲಿರುವ ಶ್ರೀ ಮಲಯಪ್ಪನ್ ಸ್ವಾಮಿ, ಪದ್ಮಾವತಿ ಮತ್ತು ಮಹಾಲಕ್ಷ್ಮಿ ಉತ್ಸವ ಮೂರ್ತಿಗಳಿಗೆ ಪೂಜಾ ವಿಧಿವಿಧಾನಗಳು ಪ್ರಾರಂಭವಾಗುತ್ತವೆ ಎಂದರು.

ದೇವಾಲಯದ ಆಡಳಿತಾಧಿಕಾರಿ ಎನ್.ಶ್ರೀವಾಸನ್ ಮಾತನಾಡಿ, ಲಾಡು ತಯಾರಿಕಾ ಸ್ಥಳಕ್ಕೆ ಇತರರು ಆಗಮಿಸದಂತೆ ಮುನ್ನೆಚ್ಚರಿಕೆ ಕ್ರಮವಾಗಿ ಬಾಣಸಿಗರ ಮಾಹಿತಿಯನ್ನು ಪಡೆದುಕೊಳ್ಳಲಾಗಿದೆ. ಎಫ್‌ಎಫ್‌ಐಸಿ ಅವರ ಅನುಮತಿ ಜೊತೆಗೆ ಪಾಲಿಕೆ ಆರೋಗ್ಯಾಧಿಕಾರಿಗಳ ಸೂಚನೆಯಂತೆ ಲಾಡು ತಯಾರಿಕೆ ಮಾಡಲಾಗುತ್ತಿದೆ ಎಂದರು.

ಕೊರೊನಾ ಹೊಸ ರೂಪಾಂತರ ತಳಿಯ ಭೀತಿ ಹಿನ್ನೆಲೆಯಲ್ಲಿ ಭಕ್ತರು ಮಾಸ್ಕ್ ಧರಿಸಲು, ಸ್ಯಾನಿಟೈಸರ್ ಅನ್ನು ಬಳಸಲು ಮತ್ತು ದೇವಸ್ಥಾನದಲ್ಲಿ ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳಲು ವಿನಂತಿಸಲಾಗಿದೆ.

ದೇವಾಲಯದ ಮುಖ್ಯ ದ್ವಾರದಲ್ಲಿ ಭಕ್ತರಿಗೆ ಮಾಸ್ಕ್ ವಿತರಿಸಲು ವ್ಯವಸ್ಥೆ ಮಾಡಲಾಗುವುದು. ವಿಶೇಷವಾಗಿ 60 ವರ್ಷ ಮೇಲ್ಪಟ್ಟ ಭಕ್ತಾದಿಗಳಿಗೆ ಸಾಲಿನಲ್ಲಿ ನಿಲ್ಲದಂತೆ ಕ್ರಮ ವಹಿಸಲಿದ್ದು, ಅವರಿಗಾಗಿ ಪ್ರತ್ಯೇಕ ಸಾಲು ಮಾಡಲಾಗುತ್ತದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಟ್ರಸ್ಟಿ ಪುಟ್ಟರಾಜು ಮತ್ತಿತರರು ಉಪಸ್ಥಿತರಿದ್ದರು.

## ಗೃಹಲಕ್ಷ್ಮಿ ಯೋಜನೆಗೆ ಸಂಬಂಧಿಸಿದ ಸಮಸ್ಯೆ ಪರಿಹರಿಸಲು ಗ್ರಾಪಂ ಮಟ್ಟದಲ್ಲಿ ಶಿಬಿರ ಆರಂಭ

ಮೈಸೂರು, ಡಿ. 27 (ಆರ್‌ಕೆ)– ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಮಹಿಳೆಯರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸುವ ಗೃಹಲಕ್ಷ್ಮಿ ಯೋಜನೆಗೆ ಸಂಬಂಧಿಸಿದ ಸಮಸ್ಯೆಗಳನ್ನು ನಿವಾರಿಸಲು ಮೈಸೂರು ಜಿಲ್ಲಾಡಳಿತವು ಜಿಲ್ಲೆಯಾದ್ಯಂತ ಇಂದಿನಿಂದ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಶಿಬಿರ ಆರಂಭಿಸಿದೆ.

ಮುಖ್ಯಮಂತ್ರಿಗಳ ನಿರ್ದೇಶನದಂತೆ ಇಂದಿನಿಂದ ಡಿಸೆಂಬರ್ 29ರವರೆಗೆ ಎಲ್ಲಾ ಗ್ರಾಮ ಪಂಚಾಯಿತಿಗಳ ಮಟ್ಟದಲ್ಲಿ ಕ್ಯಾಂಪ್‌ಗಳನ್ನು ಆಯೋಜಿಸಲಾಗಿದ್ದು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಓ) ನೇತೃತ್ವದಲ್ಲಿ ಗೃಹಲಕ್ಷ್ಮಿ ಯೋಜನೆಗೆ ಸಂಬಂಧಿಸಿದ ತಾಂತ್ರಿಕ ಮತ್ತು ಬ್ಯಾಂಕ್ ಸಂಬಂಧಿಸಿದ ಸಮಸ್ಯೆಗಳನ್ನು ಶಿಬಿರದಲ್ಲಿ ಆಲಿಸಿ ಪರಿಹಾರ ಮಾಡುವ ಕಾರ್ಯ ಆರಂಭವಾಗಿದೆ. ಸ್ಥಳೀಯ ಬಾಪೂಜಿ ಸೇವಾ ಕೇಂದ್ರದ ಗಣಕ ಯಂತ್ರ ನಿರ್ವಾಹಕರು, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಎಲೆಕ್ಟ್ರಾನಿಕ್ ಡೆಲಿವರಿ ಆಫ್ ಸಿಟಿಜನ್ ಸರ್ವೀಸಸ್ (ಇಡಿಸಿಎಸ್) ತಂಡಗಳು, ಇಂಡಿಯಾ ಪೋಸ್ಟ್ ಪೇಮೆಂಟ್ ಬ್ಯಾಂಕ್ ಪ್ರತಿನಿಧಿಗಳು ಶಿಬಿರದಲ್ಲಿ ಪಾಲ್ಗೊಂಡು ಗ್ರಾಹಕರ ಬ್ಯಾಂಕ್ ಖಾತೆಗಳಿಗೆ ಆಧಾರ ಸಂಖ್ಯೆ ಜೋಡಣೆ, ಹೊಸ ಬ್ಯಾಂಕ್ ಖಾತೆ ತೆರೆಯುವುದು, ಇ–ಕೆವೈಸಿ ಅಪ್‌ಡೇಟ್ ಮಾಡುವುದು, ಗೃಹಲಕ್ಷ್ಮಿ ಯೋಜನೆ ಪ್ರಯೋಜನ ಪಡೆಯಲು ಸಲ್ಲಿಸುತ್ತಿರುವವರ ಅರ್ಜಿಯ ಸ್ಥಿತಿಗತಿ ಪರಿಶೀಲಿಸುವುದು, ಸಮಸ್ಯೆಗಳಿದ್ದರೆ ಸ್ಥಳದಲ್ಲೇ ಪರಿಶೀಲಿಸಿ ಪರಿಹರಿಸುವ ಪ್ರಕ್ರಿಯೆಯನ್ನು ನಡೆಸುವುದು ಶಿಬಿರದ ಉದ್ದೇಶವಾಗಿದೆ.

ಶಿಬಿರದಲ್ಲಿ ಗೃಹಲಕ್ಷ್ಮಿ ಯೋಜನೆ ಕುರಿತಂತೆ ಫಲಾನುಭವಿಗಳಿಗೆ ಇಡಿಸಿಎಸ್‌ರವರು ಫಲಾನುಭವಿಗಳಿಗೆ ಮಾಹಿತಿ ನೀಡಲಾಗುತ್ತದೆ. ಡಿಸೆಂಬರ್ 27 ರಿಂದ 29 ರವರೆಗೆ ಪ್ರತೀದಿನ ಬೆಳಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ಶಿಬಿರ ನಡೆಯಲಿದ್ದು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕ್ಷೇತ್ರ ಮಟ್ಟದ ಸಿಬ್ಬಂದಿಗಳು ಯೋಜನೆಯ ಫಲಾನುಭವಿಗಳಿಗೆ ಮಾಹಿತಿ ನೀಡಿ ಅವರನ್ನು ಕ್ಯಾಂಪ್‌ಗಳಿಗೆ ಕರೆತರುವ ಜವಾಬ್ದಾರಿ ನಿರ್ವಹಿಸುತ್ತಿದ್ದಾರೆ. ಯೋಜನೆಗೆ ಹೊಸ ಅರ್ಜಿ ಸಲ್ಲಿಸುವುದು, ತಾಂತ್ರಿಕ ತೊಂದರೆಗಳಿದ್ದರೆ ಪರಿಹರಿಸುವುದು, ನೋಂದಣಿಗೆ ಸಹಕರಿಸುವುದು, ಫಲಾನುಭವಿಗಳಿಗೆ ಸಹಾಯ ಮಾಡಲು ಅಧಿಕಾರಿಗಳು ಶಿಬಿರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

## ರಾಜ್ಯ ಮಟ್ಟದ ಶಿಕ್ಷಕ ಪ್ರಶಸ್ತಿ ಪ್ರದಾನ



ಮೈಸೂರು, ಡಿ. 27– ಶರಣು ವಿಶ್ವವಚನ ಫೌಂಡೇಷನ್ ವತಿಯಿಂದ ಮೈಸೂರಿನ ಹೊಸಮಠದಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಜ್ಯದ ವಿವಿಧ ಜಿಲ್ಲಾ ಶಿಕ್ಷಕರುಗಳಾದ ಬೆಂಗಳೂರಿನ ಪ್ರೊ. ಕೆ.ಎಂ.ಮಹದೇವಪ್ಪ, ಜಮಖಂಡಿಯ ಡಾ. ಲಿಂಗಾನಂದ ಕೊಟ್ರಯ್ಯ ಗವಿಮಠ, ಕಡೂರಿನ ಡಾ. ಜಿ.ವಿ. ಮಂಜುನಾಥ, ಮಂಗಳೂರಿನ ಬಿ.ಪಿ. ಗಿರೀಶ್ ಬಾಬು, ಚಿಕ್ಕಬಳ್ಳಾಪುರದ ಲಕ್ಷ್ಮಿದೇವಿ ಎನ್, ಬೆಂಗಳೂರಿನ ಸಂಪತ್‌ಕುಮಾರ್ ಜಿ.ಎಸ್, ಚಿತ್ರದುರ್ಗದ ಗೀತಾ ಎಂ. ಮೈಸೂರಿನ ಲೋಹಿತೇಶ ವೈ.ಇ, ಕೆ.ಆರ್.ಪೇಟೆಯ ಎಂ.ಸಿ ಲೋಕೇಶ್, ಉತ್ತರಕನ್ನಡದ ಶಿವಲೀಲಾ ಹುಣಸಗಿ, ಕೋಲಾರದ ಕೆ.ವಿ.ವಿಜಯ, ಹಾಸನದ ಹೊ.ರಾ. ಪರಮೇಶ್ ಹೊಡೇನೂರು, ಬೆಳಗಾವಿಯ ಕಾಳಪ್ಪ ಈಶ್ವರಪ್ಪ ಬಡಿಗೇರ ಅವರಿಗೆ ರಾಜ್ಯಮಟ್ಟದ ಶಿಕ್ಷಕ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಕಾರ್ಯಕ್ರಮದಲ್ಲಿ ಶ್ರೀ ಹೊಸಮಠದ ಚಿದಾನಂದಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಹೈಕೋರ್ಟ್‌ನ ನಿವೃತ್ತ ಉಚ್ಛ ನ್ಯಾಯಮೂರ್ತಿ ಅರಳಿ ನಾಗರಾಜ ಗಂಗಾವತಿ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ನಿವೃತ್ತ ಪ್ರಾಧ್ಯಾಪಕಿ ಡಾ. ಸಿ.ಜಿ ಉಷಾದೇವಿ, ಮಂಡ್ಯದ ಕಾಯಕಯೋಗಿ ಸಂಸ್ಥೆಯ ಸಂಸ್ಥಾಪಕ ಎಂ.ಶಿವಕುಮಾರ್, ಹೈದರಾಬಾದ್ ಶರಣು ವಿಶ್ವವಚನ ಫೌಂಡೇಷನ್ ಅಧ್ಯಕ್ಷ ಡಾ. ನಾಗನಾಥ್ ಮಶಟ್ಟೆ, ಶರಣು ವಿಶ್ವ ವಚನ ಫೌಂಡೇಷನ್ ಸಂಸ್ಥಾಪಕ ವಚನ ಕುಮಾರಸ್ವಾಮಿ, ರೂಪ ಕುಮಾರಸ್ವಾಮಿ ಮೈಸೂರು ಜಿಲ್ಲಾಧ್ಯಕ್ಷ ಅನಿಲ್ ಕುಮಾರ್ ವಾಜಂತ್ರಿ ಕಾವೇರಿ ವಾಜಂತ್ರಿ ವಿ. ಲಿಂಗಣ್ಣ, ಶಿವಪುರ ಉಮಾಪತಿ, ಪುಷ್ಪಲತಾ, ಅನಿತಾ ನಾಗರಾಜ್, ನಮ್ರತಾ ಪಟೇಲ್, ಅಕ್ಕಮಹಾದೇವಿ ಮರಮ್ಮಲ್, ರಾಮನಗರ ವೀರೇಶಮೂರ್ತಿ, ನಾಗರತ್ನ, ಬಸವರಾಜು, ಗಿರಿಜೇಶ್, ವಚನ, ನಿಜಗುಣ, ಕಣೇನೂರು ನಾಗೇಶ್ ಮೂರ್ತಿ, ಉಷಾ ನಾಗೇಶ್, ಜಗದೀಶ್, ಜ್ಯೋತಿ ಉಪಸ್ಥಿತರಿದ್ದರು.

## ಡಿ.31ರಂದು ವಿಶ್ವಮಾನವ ಕುವೆಂಪು ಜನ್ಮದಿನಾಚರಣೆ: ಪ್ರಶಸ್ತಿ ಪ್ರದಾನ, ಪುಸ್ತಕ ಲೋಕಾರ್ಪಣೆ, ಕವಿಗೋಷ್ಠಿ

ಮೈಸೂರು, ಡಿ. 27– ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಶ್ರೀ ಕೊಟ್ಟೂರು ಬಸವೇಶ್ವರ ಸೇವಾ ಟ್ರಸ್ಟ್ ಹಾಗೂ ಸ್ವರ್ಣ ಭೂಮಿ ಫೌಂಡೇಶನ್ ವತಿಯಿಂದ ವಿಜಯನಗರದ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಡಿ. 31ರಂದು ಬೆಳಗ್ಗೆ 10 ಗಂಟೆಗೆ ಕುವೆಂಪು ಹುಟ್ಟುಹಬ್ಬದ ಅಂಗವಾಗಿ ವಿಶ್ವಮಾನವ ದಿನಾಚರಣೆ, ವಿಶೇಷ ಉಪನ್ಯಾಸ, ಪುಸ್ತಕ ಲೋಕಾರ್ಪಣೆ, ಕವಿಗೋಷ್ಠಿ, ಶತಶೃಂಗ ಸಾಹಿತ್ಯ ಪ್ರಶಸ್ತಿ ಹಾಗೂ ಕುವೆಂಪು ವಿಶ್ವಮಾನವ ಕನ್ನಡ ರತ್ನ ಪ್ರಶಸ್ತಿ ಪ್ರದಾನ ನಡೆಯಲಿದೆ.

ಕುವೆಂಪು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ.ಕೆ.ಚಿದಾನಂದಗೌಡ ಸಮಾರಂಭ ಉದ್ಘಾಟಿಸಲಿದ್ದು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸುವರು. ಸಾಹಿತಿ ಹಾಗೂ ಸಂಘಟಕ ಟಿ. ಸತೀಶ್ ಜವರೇಗೌಡ 'ಕುವೆಂಪು ವಿಚಾರಧಾರೆ ಮತ್ತು ಯುವಜನರು' ಕುರಿತು ವಿಶೇಷ ಉಪನ್ಯಾಸ ನೀಡುವರು.

ಪಂಪ ಪ್ರಶಸ್ತಿ ಪುರಸ್ಕೃತ ಖ್ಯಾತ ಸಾಹಿತಿ ಡಾ.ಸಿ.ಪಿ. ಕೃಷ್ಣಕುಮಾರ್, ಯುವ ಲೇಖಕ ಲಿಖಿತ್ ಹೊನ್ನಾಪುರ ವಿರಚಿತ 'ಭಾವಭಂಗ ಕಲ್ಪನಾತರಂಗ' ಪುಸ್ತಕ ಲೋಕಾರ್ಪಣೆ ಮಾಡಿ ಪ್ರಶಸ್ತಿ ಪ್ರದಾನ ಮಾಡುವರು. ಕವಯತ್ರಿ ಎನ್. ಶಾರದಮ್ಮ, ಕಾಸರಗೋಡಿನ ಕನ್ನಡ ಭವನದ ಅಧ್ಯಕ್ಷ ವಾಮನ್ ರಾವ್ ಬೇಕಲ್, ಸಮಾಜ ಸೇವಕ ಕೃಷ್ಣೇಗೌಡ, ರಾಷ್ಟ್ರೀಯ ಸಂಪನ್ಮೂಲ ವ್ಯಕ್ತಿ ಸುರೇಂದ್ರ ಸಮಗಾರ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಇದೇ ಸಂದರ್ಭದಲ್ಲಿ ಪ್ರಸಕ್ತ ಸಾಲಿನ 'ಶತಶೃಂಗ ಸಾಹಿತ್ಯ ಪ್ರಶಸ್ತಿ'ಯನ್ನು ಮೈಸೂರಿನ ಸಾಹಿತಿಗಳಾದ ಟಿ. ಸತೀಶ್ ಜವರೇಗೌಡ ಹಾಗೂ ಟಿ. ತ್ಯಾಗರಾಜು ಅವರಿಗೆ ಮತ್ತು 'ಕುವೆಂಪು ವಿಶ್ವಮಾನವ ಕನ್ನಡ ರತ್ನ ಪ್ರಶಸ್ತಿ'ಯನ್ನು ಮೈಸೂರಿನ ಪತ್ರಕರ್ತ ಆರ್. ಕೃಷ್ಣ, ಅಂಕಣಕಾರ ಮಿರ್ಲೆ ಚಂದ್ರಶೇಖರ್, ಕವಿ ಗಣೇಶ್ ನಿಲುವಾಗಿಲು, ಪತ್ರಕರ್ತೆ ಮ.ನಾ. ಲತಾ ಮೋಹನ್ ಸೇರಿದಂತೆ 12 ಮಂದಿಗೆ ಪ್ರದಾನ ಮಾಡಲಾಗುವುದು.

ಬಳಿಕ ರಾಜ್ಯ ಮಟ್ಟದ ಕವಿಗೋಷ್ಠಿಯಲ್ಲಿ 34 ಮಂದಿ ಕವಿಗಳು ಕವನ ವಾಚಿಸಲಿದ್ದು, ರಾಯಚೂರು ಜಿಲ್ಲೆಯ ಸಿಂಧನೂರಿನ ಶ್ರೀ ದುರ್ಗಾದೇವಿ ಸಾಂಸ್ಕೃತಿಕ ಡೊಳ್ಳಿನ ಸಂಘದ ಕಲಾವಿದರು ಜನಪದ ನೃತ್ಯ ಪ್ರದರ್ಶನ ಮಾಡಲಿದ್ದಾರೆ ಎಂದು ಕಾರ್ಯಕ್ರಮ ಸಂಯೋಜಕ ಬಿ. ಶಿವಕುಮಾರ್ ಕೋಲಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಛತ್ರಪತಿ ಕೋ–ಅಪರೇಟಿವ್ ಸೊಸೈಟಿ ಕ್ಯಾಲೆಂಡರ್ ಬಿಡುಗಡೆ



ಮೈಸೂರು, ಡಿ. 27– ದಿ ಮೈಸೂರು ಸಿಟಿ ಶ್ರೀ ಶಿವಛತ್ರಪತಿ ಕೋ –ಅಪರೇಟಿವ್ ಸೊಸೈಟಿ ವತಿಯಿಂದ 2024ನೇ ವರ್ಷದ ದಿನದರ್ಶಿಕೆಯನ್ನು ಸೊಸೈಟಿಯ ಅಧ್ಯಕ್ಷ ಕೆ.ನಾಗೇಂದ್ರರಾವ್ ಬಿಡುಗಡೆಗೊಳಿಸಿದರು.

ನಜರ್‌ಬಾದ್‌ನ ಸೊಸೈಟಿ ಕಚೇರಿ ಆವರಣದಲ್ಲಿ ಕ್ಯಾಲೆಂಡರ್ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಸಂಘವು ಸಾಕಷ್ಟು ಅಭಿವೃದ್ಧಿ ಹಂತದಲ್ಲಿ ಸಾಗುತ್ತಿದೆ. ಕಟ್ಟಡ ಸೇರಿ ಹಲವು ಅಭಿವೃದ್ಧಿ ಕಾರ್ಯ ನಡೆಯುತ್ತಿದ್ದು, ಮುಂದೆಯೂ ಸದಸ್ಯರ ಸಹಕಾರ ದೊರೆತರೆ ಮತ್ತಷ್ಟು ಅಭಿವೃದ್ಧಿ ಕಾರ್ಯ ಮಾಡುವುದಾಗಿ ಹೇಳಿದರು.

ಇದೇ ವೇಳೆ ಛತ್ರಪತಿ ಶಿವಾಜಿ ಹಾಗೂ ಶ್ರೀ ಅಂಭಾಭವಾನಿಯವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಮುಂದಿನ ಅಭಿವೃದ್ಧಿ ಕಾರ್ಯಗಳ ಕುರಿತು ಸದಸ್ಯರಿಂದ ಮಾಹಿತಿ ಸಂಗ್ರಹಿಸಿ ಎಲ್ಲವನ್ನೂ ಹಂತ ಹಂತವಾಗಿ ಅಭಿವೃದ್ಧಿಪಡಿಸುವ ಭರವಸೆ ನೀಡಿದರು. ಉಪಾಧ್ಯಕ್ಷ ಕೃಷ್ಣಾಜಿ ರಾವ್ ಗಾಯಕ್‌ವಾಡ್, ನಿರ್ದೇಶಕರಾದ ಎಸ್.ವೆಂಕೋಬರಾವ್ ಕಿರ್‌ದಂತ್, ಸುನೀಲ್ ಎನ್.ಸಂಕಪಾಳ್, ಹರಿಹರಾವ್ ಸಿಂಧೆ, ಜಿ.ಸುರೇಶ್ ಬಾಬು, ಎಂ.ಎನ್. ತುಕಾರಾಮ್ ರಾವ್, ವಿ.ಮೀರಾಬಾಯಿ ಕೇಸರ್‌ಕರ್, ವನಿತಾಬಾಯಿ, ಕಾನೂನು ಸಲಹೆಗಾರ ವಕೀಲ ಅನಿಲ್ ಕುಮಾರ್ ಸಿಂಧೆ, ಕಾರ್ಯದರ್ಶಿ ಸುನೀತ, ಕ್ಯಾಷಿಯರ್ ಜಿ.ಕಿರಣ್ ಉಪಸ್ಥಿತರಿದ್ದರು.

## ಹುಣಸೂರಲ್ಲಿ 80 ಎಕರೆಯ ಭತ್ತದ ಬೆಳೆ ನಾಶ; ಕೃಷಿ ಇಲಾಖೆ ಅಧಿಕಾರಿಗಳಿಂದ ಸ್ಥಳ ಪರಿಶೀಲನೆ



ಮೈಸೂರು,ಡಿ.27(ಪಿಎಂ)– ಹುಣಸೂರು ತಾಲೂಕು ಹರವೆ ಕಲ್ಲಹಳ್ಳಿ ಗ್ರಾಮದಲ್ಲಿ 70ರಿಂದ 80 ಎಕರೆ ಪ್ರದೇಶದ ಭತ್ತದ ಬೆಳೆ ನಾಶವಾಗಿದ್ದು, ಮಂಡ್ಯದ ವಿಸಿ ಫಾರಂನಿಂದ ವಿತರಿಸಿದ್ದ ಭತ್ತದ ಕಳಪೆ ಬಿತ್ತನೆ ಬೀಜದಿಂದ ಈ ನಷ್ಟ ಉಂಟಾಗಿದೆ ಎಂದು ಆರೋಪಿಸಿ ಕರ್ನಾಟಕ ರೈತ ಕಲ್ಯಾಣ ಸಂಘ ನೀಡಿದ ದೂರಿನ ಮೇರೆಗೆ ಇಂದು ಸ್ಥಳಕ್ಕೆ ಕೃಷಿ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ರೈತರ ಮನವಿ ಆಲಿಸಿದರು.

ರೈತರ ದೂರಿನ ಮೇರೆಗೆ ಗ್ರಾಮಕ್ಕೆ ಭೇಟಿ ನೀಡಿ ಸಂಘದ ರಾಜ್ಯಾಧ್ಯಕ್ಷ ಭೂಮಿಪುತ್ರ ಸಿ.ಚಂದನ್‌ಗೌಡ ಪರಿಶೀಲಿಸಿದ್ದರಲ್ಲದೆ, ತಮ್ಮ ಸಂಘದ ಮುಖಾಂತರ ಕೃಷಿ ಇಲಾಖೆಗೆ ದೂರು ನೀಡಿದ್ದರು. ಈ ಹಿನ್ನೆಲೆಯಲ್ಲಿ ಇಂದು ಸ್ಥಳಕ್ಕೆ ಕೃಷಿ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದರು. ಅಲ್ಲದೆ, ನಷ್ಟಕ್ಕೊಳಗಾಗಿರುವ ರೈತರಿಗೆ ಸೂಕ್ತ ಪರಿಹಾರ ದೊರಕಿಸಿ ಕೊಡುವ ನಿಟ್ಟಿನಲ್ಲಿ ಕ್ರಮ ವಹಿಸಲಾಗುವುದು ಎಂದು ಭರವಸೆ ನೀಡಿದರು.

ಇದೇ ವೇಳೆ ಕೃಷಿ ಇಲಾಖೆ ಜಂಟಿ ನಿರ್ದೇಶಕ ಡಾ.ಚಂದ್ರಶೇಖರ್ ಮಾತನಾಡಿ, ಪ್ರಕರಣಕ್ಕೆ ಸಂಬಂಧಿಸಿದಂತೆ ಕೃಷಿ ಆಯುಕ್ತರು, ಬೆಂಗಳೂರಿನ ಜಿಕೆವಿಕೆ ಕೃಷಿ ವಿವಿ ಕುಲಪತಿಗಳು ಹಾಗೂ ಇದಕ್ಕೆ ಸಂಬಂಧಿಸಿದ ಎಲ್ಲಾ ಅಧಿಕಾರಿಗಳ ಜೊತೆ ಶೀಘ್ರವೇ ಸಭೆ ನಡೆಸಿ, ಪರಿಹಾರ ಕೊಡಿಸುವ ನಿಟ್ಟಿನಲ್ಲಿ ಚರ್ಚಿಸುತ್ತೇವೆ. ಜೊತೆಗೆ ಈ ಪ್ರಮಾದಕ್ಕೆ ಮೂಲ ಕಾರಣವೇನು? ಎಂಬುದರ ಬಗ್ಗೆಯೂ ಪರಿಶೀಲನೆ ನಡೆಸುತ್ತೇವೆ. ಒಟ್ಟಾರೆ ಅನ್ನದಾತರಿಗೆ ನ್ಯಾಯ ಒದಗಿಸುತ್ತೇವೆ ಎಂದು ತಿಳಿಸಿದರು.

> ಕಳಪೆ ಬಿತ್ತನೆ ಬೀಜ ವಿತರಣೆ ಸಂಬಂಧ ಪರಿಹಾರ ಪಡೆಯಲು ಗ್ರಾಹಕ ವೇದಿಕೆ ಮೂಲಕ ಅನ್ನದಾತರು ಮನವಿ ಸಲ್ಲಿಸಬೇಕಿರುವ ವ್ಯವಸ್ಥೆ ಜಾರಿಯಲ್ಲಿದೆ. ಇದನ್ನು ರದ್ದುಗೊಳಿಸಿ ಕೂಡಲೇ ಈ ಸಂಬಂಧ ಹೊಸ ಕಾಯ್ದೆ ಜಾರಿಗೊಳಿಸಿ, ನೇರವಾಗಿ ಸರ್ಕಾರ ಹಾಗೂ ಕೃಷಿ ಇಲಾಖೆ ಮೂಲಕವೇ ನ್ಯಾಯ, ಪರಿಹಾರ ಒದಗಿಸಲು ಸಂಬಂಧಪಟ್ಟವರು ಗಮನ ಹರಿಸಬೇಕು. **–ಸಿ.ಚಂದನ್‌ಗೌಡ**

ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಭೂಮಿಪುತ್ರ ಸಿ.ಚಂದನ್‌ಗೌಡ ಮಾತನಾಡಿ, ಪ್ರತಿ ಎಕರೆಗೆ 35ರಿಂದ 40 ಕ್ವಿಂಟಾಲ್ ಇಳುವರಿ ಬರಲಿದೆಯೆಂದು ಸುಳ್ಳು ಹೇಳಿ ಅಮಾಯಕ ರೈತರಿಗೆ ಮೋಸ ಮಾಡಲಾಗಿದೆ. ಈ ಸಂಬಂಧ ಸೂಕ್ತ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ನಷ್ಟಕ್ಕೊಳಗಾಗಿರುವ ರೈತರಿಗೆ ಸೂಕ್ತ ಪರಿಹಾರ ನೀಡಬೇಕು. ಮುಂದಿನ ದಿನಗಳಲ್ಲಿ ಇಂತಹ ವಂಚನೆ ನಡೆಯದ ರೀತಿ ಕಠಿಣ ಕ್ರಮ ಕೈಗೊಳ್ಳಬೇಕು. ಈ ಕೂಡಲೇ ಸಮೃದ್ಧಿ ತಳಿಯ ಬಿತ್ತನೆ ಬೀಜ ವಿತರಿಸುವುದನ್ನು ನಿಷೇಧಿಸಬೇಕು ಎಂದು ಆಗ್ರಹಿಸಿದರು. ಹುಣಸೂರು ವಿಭಾಗದ ಕೃಷಿ ಅಧಿಕಾರಿಗಳಾದ ರಾಜು, ವೀರಣ್ಣ, ರೈತ ಕಲ್ಯಾಣ ಸಂಘದ ಹುಣಸೂರು ತಾಲೂಕು ಅಧ್ಯಕ್ಷ ಪ್ರತಾಪ್, ರಾಜ್ಯ ಪತ್ರಿಕಾ ಕಾರ್ಯದರ್ಶಿ ಹರೀಶ್ ಪಿ.ಗೌಡ, ಮುಖಂಡರಾದ ಬಸವರಾಜು, ಜಗದೀಶ್, ಅಪ್ಪು, ರಾಜು, ಶಿವಕುಮಾರ್, ಚಿಕ್ಕೇಗೌಡ, ಜಯಪ್ರಕಾಶ್ ಹಾಗೂ ಗ್ರಾಮದ ರೈತರು ಹಾಜರಿದ್ದರು.

# ಕಲ್ಲಡ್ಕ ಪ್ರಭಾಕರ್ ಭಟ್ ಬಂಧನಕ್ಕೆ ಆಗ್ರಹ



ಮಡಿಕೇರಿ, ಡಿ.27–ಮುಸ್ಲಿಂ ಮಹಿಳೆಯರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿರುವ ಹಾಗೂ ಯುವತಿಗೆ ಬೆದರಿಕೆ ಹಾಕಿರುವ ದಕ್ಷಿಣ ಕನ್ನಡ ಜಿಲ್ಲೆಯ ಕಲ್ಲಡ್ಕ ಪ್ರಭಾಕರ್ ಭಟ್ ಅವರನ್ನು ಕೂಡಲೇ ಬಂಧಿಸಬೇಕು ಎಂದು ಒತ್ತಾಯಿಸಿ ಕೊಡಗು ಜಿಲ್ಲಾ ಕಾಂಗ್ರೆಸ್ ಅಲ್ಪಸಂಖ್ಯಾತ ಘಟಕದಿಂದ ಬುಧವಾರ ತಹಸೀಲ್ದಾರ್‌ಗೆ ಮನವಿ ಸಲ್ಲಿಸಲಾಯಿತು.

ಡಿ.24ರಂದು ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದ ನಿಮಿಷಾಂಬ ದೇವಸ್ಥಾನ ಬಳಿ ನಡೆದ ಹನುಮ ಸಂಕೀರ್ತನ ಯಾತ್ರೆಯಲ್ಲಿ ಆರ್‌ಎಸ್‌ಎಸ್ ಮುಖಂಡ ಕಲ್ಲಡ್ಕ ಪ್ರಭಾಕರ್ ಭಟ್, ಬಹಿರಂಗವಾಗಿ ಮುಸ್ಲಿಂ ಮಹಿಳೆಯರ ಬಗ್ಗೆ ತೀರಾ ತುಚ್ಛವಾಗಿ ಮಾತನಾಡಿರುವುದು ಎಲ್ಲಾ ಮಾಧ್ಯಮಗಳಲ್ಲಿ ಪ್ರಕಟ ಗೊಂಡಿದೆ. ಮಹಿಳೆಯರನ್ನು ಈ ರೀತಿ ಬಹಿರಂಗವಾಗಿ ನಿಂದಿಸುವುದು ಕೂಡ ಅತ್ಯಾಚಾರಕ್ಕಿಂತ ಘನಘೋರ ಅಪರಾಧವಾಗಿದೆ. ಆದ್ದರಿಂದ ಅವರನ್ನು ಬಂಧಿಸಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ.

ಮುಸ್ಲಿಂ ಮಹಿಳೆಯರ ವೈಯಕ್ತಿಕ ಬದುಕಿನ ಬಗ್ಗೆ ಕಪೋಲಕಲ್ಪಿತ ಮತ್ತು ಸುಳ್ಳು ಹೇಳಿಕೆಯ ಮೂಲಕ ಕಲ್ಲಡ್ಕ ಪ್ರಭಾಕರ್ ಭಟ್, ನಾಗರಿಕ ಸಮಾಜ ಎದುರು ಮಹಿಳೆಯರನ್ನು ವಿವಸ್ತ್ರಗೊಳಿಸಿ ದಂತೆ ಮಾತನಾಡಿದ್ದಾರೆ. ಹಿಂದಿನಿಂದಲೂ ಮಹಿಳೆಯರ ಬಗ್ಗೆ ಕೀಳಾಗಿ ಮತ್ತು ಅವಹೇಳನಕಾರಿಯಾಗಿ ಮಾತನಾಡುವುದು ಪ್ರಭಾಕರ್ ಭಟ್ ಮನಸ್ಥಿತಿಯಾಗಿದೆ. ಇವರ ಈ ಹೇಳಿಕೆಯಿಂದ ಕೇವಲ ಮುಸ್ಲಿಂ ಮಹಿಳೆಯರಿಗೆ ಮಾತ್ರವಲ್ಲ, ಇಡೀ ಮಹಿಳೆಯರಿಗೆ ಅಪಮಾನವಾಗಿದೆ ಎಂದು ಆರೋಪಿಸಲಾಗಿದೆ.

ಅನಗತ್ಯವಾಗಿ ಮುಸ್ಕಾನ್ ಎಂಬ ಮುಸ್ಲಿಂ ಯುವತಿಯನ್ನು ಆಲ್ ಖೈದ ಸಂಘಟನೆ ಜೊತೆ ಸಂಬಂಧ ಕಲ್ಪಿಸಿ ಅವಹೇಳನ ಮಾಡಿರುವುದು ಹಾಗೂ ಬೆದರಿಕೆ ಹಾಕಿರುವುದು ಕೂಡ ಕಾನೂನು ಅಪರಾಧವಾಗಿದ್ದು, ಈ ಸಂಬಂಧ ಪ್ರಭಾಕರ್ ಭಟ್ ವಿರುದ್ಧ ಪ್ರತ್ಯೇಕ ದೂರು ದಾಖಲಿಸಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ. ಘಟಕದ ಅಧ್ಯಕ್ಷ ಪಿ.ಎ. ಹನೀಫ್, ಪ್ರಮುಖರಾದ ಕೆ.ಎಂ. ಸಯ್ಯದ್ ಭಾವ, ಕೋಳುಮಂಡ ರಫೀಕ್ ಇದ್ದರು.

## ಕುಶಾಲನಗರದಲ್ಲಿ ಮುಸ್ಲಿಂ ಒಕ್ಕೂಟ ಪ್ರತಿಭಟನೆ




ಕುಶಾಲನಗರ, ಡಿ.27–ಮುಸ್ಲಿಂ ಮಹಿಳೆಯವರ ಬಗ್ಗೆ ಆರ್‌ಎಸ್‌ಎಸ್ ಮುಖಂಡ ಕಲ್ಲಡ್ಕ ಪ್ರಭಾಕರ್ ಭಟ್ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ ಎಂದು ಆರೋಪಿಸಿ ತಾಲೂಕು ಮುಸ್ಲಿಂ ಒಕ್ಕೂಟದ ವತಿಯಿಂದ ಬುಧವಾರ ಪಟ್ಟಣದಲ್ಲಿ ಪ್ರತಿಭಟನೆ ನಡೆಸಲಾಯಿತು.

ಇಲ್ಲಿನ ಕಾರ್ಯಪ್ಪ ವೃತ್ತದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಪೊಲೀಸರು ಸ್ವಯಂ ಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡು ಕಲ್ಲಡ್ಕ ಪ್ರಭಾಕರ್ ಭಟ್ ಅವರನ್ನು ಬಂಧಿಸುವಂತೆ ಆಗ್ರಹಿಸಿದರು. ನಂತರ ಕಲ್ಲಡ್ಕ ಪ್ರಭಾಕರ್ ವಿರುದ್ಧ ಘೋಷಣೆ ಕೂಗಿದರು. ಕುಶಾಲನಗರ ತಾಲೂಕು ಮುಸ್ಲಿಂ ಒಕ್ಕೂಟದ ಅಧ್ಯಕ್ಷ ಅಬ್ದುಲ್ ಕರೀಂ ಮಾತನಾಡಿ, ಕಲ್ಲಡ್ಕ ಪ್ರಭಾಕರ್ ಭಟ್ ಮುಸ್ಲಿಂ ಹೆಣ್ಣು ಮಕ್ಕಳ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿರುವುದು ಖಂಡನೀಯ. ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಅಲ್ಪಸಂಖ್ಯಾತರ ಮತವನ್ನು ಪಡೆದು ಅಧಿಕಾರದಲ್ಲಿರುವ ಕಾಂಗ್ರೆಸ್‌ಗೆ ನೈತಿಕತೆ ಹಾಗೂ ಜಾತ್ಯಾತೀತ ಪಕ್ಷ ಆಗಿದ್ದರೇ ಸಮಾಜಕ್ಕೆ ಮಾರಕವಾಗಿರುವ ಕಲ್ಲಡ್ಕ ಪ್ರಭಾಕರ್ ಭಟ್ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಕುಶಾಲನಗರ ಎಸ್‌ಡಿಪಿಐ ಅಧ್ಯಕ್ಷ ಜ಼ಕರಿಯಾ ಮಾತನಾಡಿ, ಭಾರತದಲ್ಲಿ ಹಿಂದೂ–ಮುಸಲ್ಮಾನರು ಪರಸ್ಪರ ಶಾಂತಿ, ಸೌಹಾರ್ದತೆಯಿಂದ ಬಾಳುತ್ತಿದ್ದಾರೆ. ಆದರೆ, ಕಲ್ಲಡ್ಕ ಪ್ರಭಾಕರ್ ಭಟ್ ಮುಸ್ಲಿಂ ಮಹಿಳೆಯರ ಬಗ್ಗೆ ತುಚ್ಚವಾಗಿ ಮಾತಾಡಿದ್ದಾರೆ. ಇಂತಹ ಸಮಾಜಘಾತುಕ ಶಕ್ತಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ತಾಲೂಕು ಮುಸ್ಲಿಂ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಜಮೀರ್, ಉಪಾಧ್ಯಕ್ಷ ಪಾಷಾ, ಅನ್ವರ್, ಅಕ್ಬರ್, ಖಲೀರ್, ಶರೀಫ್, ಸಲೀಂ, ಮೊಯ್ದೀನ್, ಸಮಿ, ಅಶ್ರಫ್, ಸಾಹುಲ್ ಇನ್ನಿತರರು ಇದ್ದರು.

## ಇಂದು ಕೊಡವ ಕೌಟುಂಬಿಕ ಹಾಕಿ ಫೈನಲ್



ಗೋಣಿಕೊಪ್ಪ, ಡಿ.27– ಅಂಜಿಗೇರಿ ನಾಡ್ ಸಂಘಟನೆ ವತಿಯಿಂದ ಹುದಿಕೇರಿ ಸರ್ಕಾರಿ ಪ್ರೌಢಶಾಲಾ ಮೈದಾನದಲ್ಲಿ ನಡೆಸುತ್ತಿರುವ ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿಯ ಫೈನಲ್ ಹಣಾಹಣಿ ಗುರುವಾರ ನಡೆಯಲಿದ್ದು, ಸೆಮಿಫೈನಲ್ ಪ್ರವೇಶ ಪಡೆದಿರುವ ಪೆಮ್ಮಂಡ, ಚೆಪ್ಪುಡೀರ, ನೆಲ್ಲಮಕ್ಕಡ, ಚೇಂದಂಡ ತಂಡಗಳು ಕಪ್ ಗೆಲ್ಲುವ ಹುಮ್ಮಸ್ಸಿನಲ್ಲಿವೆ.

ಬೆಳಿಗ್ಗೆ 10.30 ಗಂಟೆಗೆ ಪೆಮ್ಮಂಡ–ಚೆಪ್ಪುಡೀರ, 11 ಗಂಟೆಗೆ ನೆಲ್ಲಮಕ್ಕಡ–ಚೇಂದಂಡ ತಂಡಗಳ ನಡುವೆ ಸೆಮಿಫೈನಲ್ ನಡೆಯಲಿದ್ದು, ಮಧ್ಯಾಹ್ನ 12 ಗಂಟೆಗೆ ಗೆಜ್ಜೆತಂಡ್–ಪೊಂಬೊಳ್ಜ ಮಹಿಳಾ ಹಾಕಿ ತಂಡಗಳ ನಡುವೆ ಪಂದ್ಯ ನಡೆಯಲಿದೆ. ಮಧ್ಯಾಹ್ನ 2.30 ಗಂಟೆಗೆ ಫೈನಲ್ ನಡೆಯಲಿದೆ.

ಬುಧವಾರ ನಡೆದ ಕ್ವಾರ್ಟರ್ ಫೈನಲ್‌ನಲ್ಲಿ ಪೆಮ್ಮಂಡ ತಂಡ ಇಟ್ಟೀರ ತಂಡವನ್ನು 5–2 ಗೋಲುಗಳಿಂದ ಮಣಿಸಿತು. ಚೆಪ್ಪುಡೀರ ತಂಡಕ್ಕೆ ಕಳ್ಳಿಚಂಡ ವಿರುದ್ಧ 3–0 ಗೋಲುಗಳ ಜಯ ಲಭಿಸಿತು. ಚೇಂದಂಡಕ್ಕೆ ಐಚೇಟೀರ ವಿರುದ್ಧ 2–0 ಗೋಲುಗಳ ಗೆಲುವು ದೊರೆಯಿತು. ನೆಲ್ಲಮಕ್ಕಡ ತಂಡ ಕೊಜಂಡ ತಂಡವನ್ನು 4–0 ಗೋಲುಗಳಿಂದ ಮಣಿಸಿತು. ಪ್ರೀಕ್ವಾರ್ಟರ್ ಫೈನಲ್‌ನಲ್ಲಿ ಪೆಮ್ಮಂಡ, ಇಟ್ಟೀರ, ಕಳ್ಳಿಚಂಡ, ಚೆಪ್ಪುಡೀರ, ಐಚೇಟೀರ, ಚೇಂದಂಡ, ಕೊಜಂಡ, ನೆಲ್ಲಮಕ್ಕಡ ತಂಡಗಳು ಗೆಲುವು ದಾಖಲಿಸಿದ್ದುವು.

## ಕುಡಿಯರ ಮುತ್ತಪ್ಪಗೆ ಕೊರವಂಜಿ ಪ್ರಶಸ್ತಿ



ಮಡಿಕೇರಿ, ಡಿ.27–ಯವಕಪಾಡಿ ಗ್ರಾಮದ ನಿವಾಸಿ ಆದಿವಾಸಿ ಹಾಗೂ ಹೋರಾಟಗಾರ ಕುಡಿಯರ ಮುತ್ತಪ್ಪ ಅವರು ರಾಜ್ಯಮಟ್ಟದ ಕೊರವಂಜಿ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಮಂಡ್ಯ ಜಿಲ್ಲಾ ಕುಳುವ ಸಮಾಜ ಹಾಗೂ ಡ್ರೀಮ್ ಫೌಂಡೇಷನ್ ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ ಡಿ.28ರಂದು ಮಂಡ್ಯದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ನಡೆಯಲಿರುವ ಕೊರವಂಜಿ ಸಂಸ್ಕೃತಿ ಉತ್ಸವದಲ್ಲಿ ಮುತ್ತಪ್ಪ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಟ್ರಸ್ಟ್ ತಿಳಿಸಿದೆ.

## ಕಲ್ಲಡ್ಕ ಪ್ರಭಾಕರ್ ಭಟ್ ಹೇಳಿಕೆಯಿಂದ ಅಶಾಂತಿಗೆ ಪ್ರಚೋದನೆ



ಮಡಿಕೇರಿ, ಡಿ.27–ಹಿಂದುತ್ವವಾದಿ ಕಲ್ಲಡ್ಕ ಪ್ರಭಾಕರ್ ಭಟ್ ಅವರನ್ನು ಬಂಧಿಸುವಂತೆ ಒತ್ತಾಯಿಸಿ ಕೊಡಗು ಜಿಲ್ಲಾ ವುಮೆನ್ ಇಂಡಿಯಾ ಮೂವ್‌ಮೆಂಟ್ ಸಂಘಟನೆ ವತಿಯಿಂದ ಬುಧವಾರ ಮಡಿಕೇರಿ ನಗರ ಪೊಲೀಸ್ ಠಾಣೆಗೆ ದೂರು ನೀಡಲಾಯಿತು.

ಶ್ರೀರಂಗಪಟ್ಟಣದ ನಿಮಿಷಾಂಬ ದೇವಸ್ಥಾನ ಬಳಿ ನಡೆದ ಹನುಮ ಸಂಕೀರ್ತನ ಯಾತ್ರೆಯಲ್ಲಿ ಮುಸ್ಲಿಂ ಯುವತಿಯರನ್ನು ಅವಮಾನಿಸಿ, ಅಶಾಂತಿಗೆ ಪ್ರಚೋದನೆ ನೀಡಿದ ಆರೋಪದಡಿ ಕಲ್ಲಡ್ಕ ಪ್ರಭಾಕರ್ ಭಟ್ ಅವರನ್ನು ತಕ್ಷಣ ಬಂಧಿಸಿ ಕ್ರಮ ಕೈಗೊಳ್ಳಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ. ಲವ್ ಜಿಹಾದ್ ಕುರಿತು ಉಲ್ಲೇಖಿಸಿ, ಮುಸ್ಲಿಂ ಯುವತಿಯರನ್ನು ಅವಮಾನಿಸಿದ್ದಾರೆ. ತ್ರಿವಳಿ ತಲಾಖ್ ರದ್ದಾಗಿರುವುದನ್ನು ಪ್ರಸ್ತಾಪಿಸಿ, ಮಹಿಳೆಯರ ವೈವಾಹಿಕ ಜೀವನದ ಕುರಿತು ಅತ್ಯಂತ ಕೀಳಾಗಿ ಮಾತನಾಡಿದ್ದಾರೆ. ದೇಶದ್ರೋಹದ ಆರೋಪ ಹೊರಿಸುವ ಮೂಲಕ ಮುಸ್ಲಿಂ ಸಮುದಾಯದ ಸಾಂವಿಧಾನಿಕವಾದ ಬದುಕುವ ಹಕ್ಕಿನ ಮೇಲೆ ದಾಳಿಗೆ ಪ್ರಚೋದಿಸುವ ಕೃತ್ಯ ಮಾಡಿದ್ದಾರೆ. ಎತ್ತಿ ಕಟ್ಟುವ ಕೆಲಸವನ್ನು ಪ್ರಭಾಕರ್ ಭಟ್ ಮಾಡಿದ್ದಾರೆ ಎಂದು ಸಂಘಟನೆಯ ಅಧ್ಯಕ್ಷೆ ಎಂ.ಇ.ಸಲಿಕತ್ ದೂರಿನಲ್ಲಿ ಆರೋಪಿಸಿದ್ದಾರೆ. ಇದೇ ವೇಳೆ ನಗರಸಭಾ ಸದಸ್ಯರಾದ ಮೇರಿ ವೇಗಸ್, ನೀಮಾ ಹರ್ಷದ್, ವುಮೆನ್ ಇಂಡಿಯಾ ಮೂವ್‌ಮೆಂಟ್ ಸಂಘಟನೆಯ ಜಿಲ್ಲಾ ಸಮಿತಿ ಸದಸ್ಯೆ ತಾಹಿರಾ ಇಬ್ರಾಹಿಂ ಹಾಜರಿದ್ದರು.

## ಅಶ್ಲೀಲ ಸಂದೇಶ ಪೋಸ್ಟ್: ಯುವಕ ಬಂಧನ



ಮಡಿಕೇರಿ, ಡಿ.27–ನಗರದ ಹೊರವಲಯದ ಪ್ರತಿಷ್ಠಿತ ರೆಸಾರ್ಟ್‌ವೊಂದರಲ್ಲಿ ಗ್ರೂಪ್ ಸೆಕ್ಸ್ ಈವೆಂಟ್ ಆಯೋಜಿಸಲಾಗಿದೆ ಎಂದು ಟ್ವೀಟ್ ಮೂಲಕ ಅಶ್ಲೀಲ ಸಂದೇಶವನ್ನು ಸಾಮಾಜಿಕ ಜಾಲ ತಾಣದಲ್ಲಿ ಪೋಸ್ಟ್ ಮಾಡಿದ್ದ ಯುವಕನನ್ನು ಜಿಲ್ಲಾ ಪೊಲೀಸರು ಬಂಧಿಸಿದ್ದಾರೆ.

ಪೊನ್ನಂಪೇಟೆ ತಾಲೂಕಿನ ಬಾಳೆಲೆ ನಿವಾಸಿ ಶಯನ್(20) ಬಂಧಿತ ಆರೋಪಿ. ಈತ ಕೋಕಿ ಅಲಿಯಾಸ್ ಶಯನ್ ಎಂದು ಟ್ವೀಟ್ ಖಾತೆ ತೆರೆದು, ಅದರಲ್ಲಿ ಅಶ್ಲೀಲ ಮತ್ತು ಪ್ರಚೋದನಕಾರಿ ಸಂದೇಶವನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದ. ಈ ಕುರಿತು ಜಿಲ್ಲಾ ಪೊಲೀಸ್ ಸಾಮಾಜಿಕ ಜಾಲತಾಣ ನಿಗಾ ಘಟಕದ ಅಧಿಕಾರಿಗಳು ಮತ್ತು ಸಿಬ್ಬಂದಿ ಈತನ ವಿರುದ್ಧ ಪೊನ್ನಂಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು. ಈ ಹಿನ್ನೆಲೆಯಲ್ಲಿ ಶಯನ್‌ನನ್ನು ಬಂಧಿಸಿದ್ದಾರೆ.

## ಪುರುಷರಿಗಿಂತ ಹೆಣ್ಣುಮಕ್ಕಳಿಗೆ ಹೆಚ್ಚು ಜವಾಬ್ದಾರಿ



ವಿರಾಜಪೇಟೆ, ಡಿ.27–ಯಾವುದೇ ರಾಜಕೀಯ ಬೆರೆಯದಂತೆ ಕಲಾವಿದೆಯರ ವೇದಿಕೆಯನ್ನು ಬೆಳೆಸಬೇಕು ಎಂದು ಪುರಸಭೆ ಸದಸ್ಯೆ ಮನೆಯಪಂಡ ದೇಚಮ್ಮ ಕಾಳಪ್ಪ ಹೇಳಿದರು.

ವಿರಾಜಪೇಟೆ ಪುರಭವನದಲ್ಲಿ ಆಯೋಜಿಸಿದ್ದ ದಕ್ಷಿಣ ಕೊಡಗು ಲೇಖಕಿಯರು ಮತ್ತು ಕಲಾವಿದೆಯರ ವೇದಿಕೆ ಉದ್ಘಾಟಿಸಿ ಮಾತನಾಡಿದ ಅವರು, ನಿತ್ಯ ಬದುಕಿನಲ್ಲಿ ಹೆಣ್ಣುಮಕ್ಕಳಿಗೆ ಪುರುಷರಿಗಿಂತ ಹೆಚ್ಚು ಜವಾಬ್ದಾರಿ ಹಾಗೂ ಕೆಲಸದ ಒತ್ತಡವಿದೆ. ಆಕೆ ಸಂಸಾರದ ಹೊಣೆಗಾರಿಕೆ ಹಾಗೂ ವೃತ್ತಿಯನ್ನು ನಿಭಾಯಿಸಬೇಕು. ಈ ನಡುವೆ ಸಿಗುವ ಉತ್ತಮ ಅವಕಾಶಗಳನ್ನು ಬಳಸಿಕೊಂಡು ಸಮಾಜಮುಖಿಯಾಗಿ ಕೆಲಸ ಮಾಡಬೇಕಿದೆ. ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಹೆಸರುಗಳಿಸುವುದರೊಂದಿಗೆ ಉತ್ತಮ ಬದುಕು ರೂಪಿಸಿಕೊಳ್ಳಬೇಕಿದೆ ಎಂದರು.

ವೇದಿಕೆಯ ಸ್ಥಾಪಕ ಅಧ್ಯಕ್ಷೆ ಪುಷ್ಪಲತಾ ಶಿವಪ್ಪ ಮಾತನಾಡಿ, ಗ್ರಾಮೀಣ ಪ್ರತಿಭೆಗಳನ್ನು ಹೊರತಂದು ಲೇಖಕಿಯರನ್ನು ಸಂಘಟಿಸಲು ಈ ವೇದಿಕೆಯನ್ನು ರಚಿಸಲಾಗಿದೆ. ಗ್ರಾಮೀಣ ಮಹಿಳೆಯರು ಅವಕಾಶದಿಂದ ವಂಚಿತರಾಗುತ್ತಿದ್ದು, ಎಲೆಮರೆಯ ಕಾಯಿಗಳಾಗಿ ಉಳಿದು ಹೋಗುತ್ತಿದ್ದಾರೆ. ಆದ್ದರಿಂದ ಮಹಿಳಾ ಲೇಖಕಿಯರು ತಮ್ಮ ಸಾಹಿತ್ಯ ಚಟುವಟಿಕೆಯನ್ನು ನದಿಯಾಗಿ ಹರಿಯುವಂತೆ ಮಾಡಿಕೊಳ್ಳಬೇಕೆಂಬ ಉದ್ದೇಶ ನಮ್ಮದಾಗಿದೆ ಎಂದು ತಿಳಿಸಿದರು.

ಗೋಣಿಕೊಪ್ಪ ಕಾವೇರಿ ಕಾಲೇಜಿನ ಉಪನ್ಯಾಸಕಿ ಡಾ.ಮುಲ್ಲೇಂಗಡ ರೇವತಿ ಪೂವಯ್ಯ ಮಾತನಾಡಿ, ಇಂದು ಮೂಲ ಉದ್ದೇಶಗಳು ಬದಲಾಗಿ ರಾಜಕೀಯವಾಗಿ ಗುರುತಿಸಿಕೊಳ್ಳುತ್ತಿವೆ. ಸಾಹಿತಿಗಳು, ಕಲಾವಿದರು, ತಮ್ಮ ಜವಾಬ್ದಾರಿಗಳ ಬಗ್ಗೆ ಆತ್ಮಾವಲೋಕನ ಮಾಡಿಕೊಂಡು ಮುನ್ನಡೆಯಬೇಕು. ದಕ್ಷಿಣ ಕೊಡಗಿನಲ್ಲಿ ಲೇಖಕಿಯರು ಸಾಹಿತ್ಯಕ್ಕೆ ತಮ್ಮದೆ ಕೊಡುಗೆ ನೀಡಿದ್ದು, ಬಟ್ಟಿಯಂಡ ದೇವಕ್ಕಿ, ಪಾರ್ವತಿ ಅಪ್ಪಯ್ಯ ಅವರನ್ನು ಸ್ಮರಿಸಬಹುದು ಎಂದರು.

ವಿರಾಜಪೇಟೆ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಕಾರ್ಯದರ್ಶಿ ಹೆಚ್.ಜಿ. ಸಾವಿತ್ರಿ ಮಾತನಾಡಿದರು. ಕರ್ನಾಟಕ ಲೇಖಕಿಯರ ಸಂಘದ ವಿರಾಜಪೇಟೆ ತಾಲೂಕು ಅಧ್ಯಕ್ಷೆ ರಜಿತಾ ಕಾರ್ಯಪ್ಪ ಸಾಹಿತಿ ಸೋಮೆಯಂಡ ಕೌಶಲ್ಯ ಸತೀಶ್, ಶಿಕ್ಷಕಿ ಎಂ.ಕೆ. ನಳಿನಾಕ್ಷಿ, ವಿಮಲಾ ದಶರಥ, ವಿದೂಷಿ ಪ್ರೇಮಾಂಜಲಿ ಆಚಾರ್ಯ, ಹಾಗೂ ಸಾಹಿತಿಗಳು ಉಪಸ್ಥಿತರಿದ್ದರು. ಇದೇ ವೇಳೆ ಗಾಯಕರಾದ ಸುಪ್ರಿತಾ ದಿಲೀಪ್, ಅನಿತಾ ರಾಜೇಶ್ ಕನ್ನಡ ಗೀತಾ ಗಾಯನ ನಡೆಸಿಕೊಟ್ಟರು.

## ವಿನಾಯಕ್ ನರ್ವಾಡೆ ನೂತನ ಎಸಿ



ಮಡಿಕೇರಿ, ಡಿ.27–ಕೊಡಗು ನೂತನ ಉಪವಿಭಾಗಾಧಿಕಾರಿಯಾಗಿ ವಿನಾಯಕ್ ನರ್ವಾಡೆ ಅವರು ಬುಧವಾರ ಅಧಿಕಾರ ವಹಿಸಿಕೊಂಡರು. ಹಿಂದಿನ ಉಪವಿಭಾಗಾಧಿಕಾರಿ ಡಾ.ಯತೀಶ್ ಉಲ್ಲಾಳ್ ಅವರು ಮಂಗಳೂರು ವಿವಿ ಕುಲಸಚಿವರಾಗಿ (ಆಡಳಿತ) ವರ್ಗಾವಣೆಯಾಗಿದ್ದಾರೆ. ವಿನಾಯಕ್ ನರ್ವಾಡೆ 2021ರ ಬ್ಯಾಚ್‌ನಲ್ಲಿ ಐಎಎಸ್ ಪಾಸಾಗಿದ್ದಾರೆ.

## ಡಿ.29, ಮಿನಿ ಉದ್ಯೋಗ ಮೇಳ

ಚಾಮರಾಜನಗರ, ಡಿ.27– ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಜಿಲ್ಲಾ ಕೌಶಲ್ಯಾಭಿವೃದ್ಧಿ ಇಲಾಖೆ ಸಹಯೋಗದಲ್ಲಿ ಮಿನರ್ವ ಕಂಪ್ಯೂಟರ್ಸ್ ಇವರ ವತಿಯಿಂದ ಮಿನಿ ಉದ್ಯೋಗ ಮೇಳವನ್ನು ಡಿ.29ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ನಗರದ ಜೋಡಿ ರಸ್ತೆಯ ಕರ್ನಾಟಕ ಬ್ಯಾಂಕ್ ಬಿಲ್ಡಿಂಗ್‌ನಲ್ಲಿರುವ ಮಿನರ್ವ ಟೆಕ್ ಸಲ್ಯೂಷನ್ಸ್ ನಲ್ಲಿ ಹಮ್ಮಿಕೊಳ್ಳಲಾಗಿದೆ.

ಎಸ್‌ಎಸ್‌ಎಲ್‌ಸಿ, ಪಿಯುಸಿ, ಯಾವುದೇ ಪದವಿ ಹೊಂದಿರುವ 18 ರಿಂದ 30ರ ವಯೋಮಿತಿಯ ಅಭ್ಯರ್ಥಿಗಳು ಉದ್ಯೋಗ ಮೇಳದಲ್ಲಿ ಭಾಗವಹಿಸಬಹುದು. ಸಂದರ್ಶನದಲ್ಲಿ ಭಾಗವಹಿಸುವ ಆಸಕ್ತ ಅಭ್ಯರ್ಥಿಗಳು ತಮ್ಮ ಸ್ವವಿವರ (ಬಯೋಡೇಟಾ), ಅಂಕಪಟ್ಟಿಗಳ ಜೆರಾಕ್ಸ್ ಪ್ರತಿಗಳೊಂದಿಗೆ ಹಾಜರಾಗಬೇಕು.

ಮಾಹಿತಿಗಾಗಿ ನಗರದ ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಅಥವಾ ದೂ.ಸಂ 08226–224430 ಸಂಪರ್ಕಿಸುವಂತೆ ಜಿಲ್ಲಾ ಉದ್ಯೋಗಾಧಿಕಾರಿ ಎ. ಮಹಮ್ಮದ್ ಅಕ್ಬರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಎಸ್ಸಿ, ಎಸ್ಟಿ ದೌರ್ಜನ್ಯ ಪ್ರಕರಣದ ಸಂತ್ರಸ್ತರಿಗೆ ತ್ವರಿತವಾಗಿ ಪರಿಹಾರ ಒದಗಿಸಿ: ಜಿಲ್ಲಾಧಿಕಾರಿ



ಚಾಮರಾಜನಗರ, ಡಿ.27– ಪರಿಶಿಷ್ಟ ಜಾತಿ ಹಾಗೂ ಪಂಗಡದ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಸಂತ್ರಸ್ತರಿಗೆ ಅಧಿಕಾರಿಗಳು ತ್ವರಿತವಾಗಿ ಪರಿಹಾರ ಒದಗಿಸಬೇಕು ಎಂದು ಜಿಲ್ಲಾಧಿಕಾರಿ ಸಿ.ಟಿ. ಶಿಲ್ಪಾನಾಗ್ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ದೌರ್ಜನ್ಯ ಪ್ರಕರಣಗಳ ಮೇಲಿನ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಹನೂರು ತಾಲೂಕಿನ ಸುಳ್ವಾಡಿ ಗ್ರಾಮದಲ್ಲಿ 2018ರಲ್ಲಿ ವಿಷ ಪ್ರಸಾದ ಸೇವಿಸಿ ಸಂತ್ರಸ್ತರಾದ ಜನರ ಆರೋಗ್ಯ ತಪಾಸಣೆಯನ್ನು ಜನವರಿ ಮೊದಲ ವಾರದಲ್ಲಿ ಏರ್ಪಡಿಸಬೇಕು. ದೀರ್ಘಾವಧಿ, ಅಲ್ಪಾವಧಿ ಆರೋಗ್ಯ ಸಮಸ್ಯೆಗಳು ಇದ್ದಲ್ಲಿ ಚಿಕಿತ್ಸೆಗೆ ಮುಂದಾಗಬೇಕು. ತಜ್ಞ ವೈದ್ಯರು, ಸಿಬ್ಬಂದಿಯನ್ನು ಕರೆದೊಯ್ದು ಬೃಹತ್ ತಪಾಸಣಾ ಶಿಬಿರ ಆಯೋಜಿಸಬೇಕು ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಮುರಟಿಪಾಳ್ಯ ಗ್ರಾಮದಲ್ಲಿ 18 ಜನರಿಗೆ ಸುಳ್ಳು ಜಾತಿ ಪ್ರಮಾಣ ಪತ್ರ ನೀಡಿರುವ ಸಂಬಂಧ ಪರಿಶೀಲಿಸಿ ವರದಿ ನೀಡಲು ಉಪವಿಭಾಗಾಧಿಕಾರಿಗಳಿಗೆ ಸೂಚಿಸಿದ ಅವರು, ಈ ಸಂಬಂಧ ಶಿಸ್ತುಕ್ರಮ ಜರುಗಿಸಲಾಗುವುದು ಎಂದರು. ತೆರಕಣಾಂಬಿ ಹೋಬಳಿಯ ಉಪಕಾರ ಕಾಲೋನಿಯಲ್ಲಿ ದೌರ್ಜನ್ಯಕ್ಕೊಳಗಾದ ಹೆಣ್ಣು ಮಕ್ಕಳಿಗೆ ಜಮೀನು ಮಂಜೂರು ಮಾಡಿದ್ದರೂ ಸಂಬಂಧಪಟ್ಟವರ ಹೆಸರಿಗೆ ಹಂಚಿಕೆ ಮಾಡದಿರುವ ಪ್ರಕರಣದಲ್ಲಿ ತಕ್ಷಣವೇ ಕ್ರಮ ವಹಿಸಬೇಕು. ಸೋಲಿಗರಿಗೆ ವಸತಿ ಸೌಲಭ್ಯ ಕಲ್ಪಿಸಲು ಗ್ರಾಮ ಪಂಚಾಯಿತಿಗಳಲ್ಲಿ ಆದ್ಯತೆ ನೀಡಬೇಕು. ಈ ನಿಟ್ಟಿನಲ್ಲಿ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕಾಧಿಕಾರಿಗಳು ಅಗತ್ಯ ಕ್ರಮಕ್ಕೆ ಮುಂದಾಗಬೇಕು ಎಂದು ನಿರ್ದೇಶನ ನೀಡಿದರು.

ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸದಸ್ಯರ ಸಲಹೆಯಂತೆ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಪ್ರಕರಣ ಸಂಬಂಧ ವಿಶೇಷ ನ್ಯಾಯಾಲಯ ಸ್ಥಾಪನೆ, ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ನಿಯೋಜನೆ, ಅರಣ್ಯ ಇಲಾಖೆಯಲ್ಲಿ 10 ವರ್ಷಗಳ ಕಾಲ ದಿನಗೂಲಿಯಾಗಿ ಕೆಲಸ ನಿರ್ವಹಿಸಿದ ಅರಣ್ಯ ವಾಸಿಗಳನ್ನು ಖಾಯಂಗೊಳಿಸುವ ತಮಿಳುನಾಡು ಆದೇಶ ಇಲ್ಲೂ ಪಾಲನೆ ಯಾಗಬೇಕೆಂಬ ಸಮಿತಿಯ ಪ್ರಸ್ತಾವನೆಯನ್ನು ಕಳುಹಿಸಿಕೊಡಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸದಸ್ಯ ಸಿದ್ದರಾಜು, ಸೋಮೇಶ್ವರ, ಆಸಿಫ್ ಉಲ್ಲಾ, ಗುಂಡ್ಲುಪೇಟೆ ಸಿದ್ದರಾಜು, ಮುದ್ದಯ್ಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ಜಿಪಂ ಉಪ ಕಾರ್ಯದರ್ಶಿ ಲಕ್ಷ್ಮೀ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಮಲ್ಲಿಕಾರ್ಜುನ, ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಮಂಜುಳಾ, ತಹಶೀಲ್ದಾರ್ ಬಸವರಾಜು, ಮಂಜುಳಾ, ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

## ಕಲ್ಲಡ್ಕ ಪ್ರಭಾಕರ ಭಟ್ ವಿರುದ್ಧ ಪೊಲೀಸರಿಗೆ ದೂರು




ಚಾಮರಾಜನಗರ, ಡಿ.27– ಶ್ರೀರಂಗಪಟ್ಟಣದಲ್ಲಿ ನಡೆದ ಹನುಮ ಜಯಂತಿ ಸಮಾವೇಶದಲ್ಲಿ ಭಾಷಣ ಮಾಡಿದ ಹಿಂದೂ ಸಂಘಟನೆಯ ನಾಯಕ ಕಲ್ಲಡ್ಕ ಪ್ರಭಾಕರ ಭಟ್ ತನ್ನ ಭಾಷಣದಲ್ಲಿ ಮುಸ್ಲಿಂ ಮಹಿಳೆಯರ ಕುರಿತು ಅವಹೇಳನಕಾರಿಯಾಗಿ ಮಾತನಾಡಿದ್ದಾರೆ ಎಂದು ಆರೋಪಿಸಿ ನಗರದ ಪಟ್ಟಣ ಪೊಲೀಸ್ ಠಾಣೆಗೆ ವುಮೇನ್ ಇಂಡಿಯಾ ಮೂವ್‌ಮೆಂಟ್ ಸಂಘಟನೆಯ ಜಿಲ್ಲಾ ಸಮಿತಿಯಿಂದ ದೂರು ನೀಡಲಾಯಿತು.

ಈ ವೇಳೆ ಸಂಘಟನೆಯ ಅಧ್ಯಕ್ಷೆ ರೇಷ್ಮಾಬಾನು ಮಾತನಾಡಿ, ಕಲ್ಲಡ್ಕ ಪ್ರಭಾಕರ ಭಟ್ ಮುಸ್ಲಿಂ ಮಹಿಳೆಯರು ಲವ್ ಜಿಹಾದ್ ಹೆಸರಿನಲ್ಲಿ ಮೋಸ ಮಾಡುತ್ತಾರೆ ಎಂದು ಸುಳ್ಳು ಹೇಳುವ ಮೂಲಕ ಮುಸ್ಲಿಂ ಮಹಿಳೆಯರ ಕುರಿತು ಅಪಪ್ರಚಾರ ಮಾಡಿದ್ದಾರೆ. ಮಂಡ್ಯದ ವಿದ್ಯಾರ್ಥಿನಿಗೆ ಉಗ್ರ ಸಂಘಟನೆಯ ಸಂಪರ್ಕವಿದೆ. ಈ ಬಗ್ಗೆ ಎಚ್ಚರ ವಹಿಸಬೇಕು ಎಂದು ಸಮಾಜಕ್ಕೆ ತಪ್ಪು ಸಂದೇಶ ನೀಡಿದ್ದಾರೆ ಎಂದು ತಿಳಿಸಿದರು.

ಪ್ರಚೋದನಕಾರಿ ಭಾಷಣ, ಮುಸ್ಲಿಂ ಮಹಿಳೆಯರ ಕುರಿತು ನಿಂದನತ್ಮಾಕ ಹೇಳಿಕೆ ನೀಡಿರುವ ಹಾಗೂ ಸಂಪೂರ್ಣವಾಗಿ ಮುಸ್ಲಿಂ ಸಮುದಾಯವನ್ನು ಅವಮಾನಿಸಿ ಭಾಷಣ ಮಾಡಿರುವ ಕಲ್ಲಡ್ಕ ಪ್ರಭಾಕರ ಭಟ್ಟ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದರು. ಈ ವೇಳೆ ವುಮೇನ್ ಇಂಡಿಯಾ ಮೂವ್‌ಮೆಂಟ್ ಸಂಘಟನೆಯ ಜಿಲ್ಲಾ ಸಮಿತಿ ಸದಸ್ಯೆಯಾದ ತೌಸೀಯಾ ಬಾನುರವರ ಹೆಸರಿನಲ್ಲಿ ದೂರು ನೀಡಲಾಯಿತು. ಕಾರ್ಯದರ್ಶಿ ರುಮಾನತಾಜ್, ಜಿಲ್ಲಾ ಸಮಿತಿ ಸದಸ್ಯರಾದ ಫೌಜೀಯಾ ಬಾನು, ಶಬಾನ ಬಾನು ಉಪಸ್ಥಿರಿದ್ದರು.

## ಮೂಕನಪಾಳ್ಯದಲ್ಲಿ 'ವೈದ್ಯರ ನಡೆ ಹಳ್ಳಿಯ ಮನೆ ಕಡೆ' ಆರೋಗ್ಯ ತಪಾಸಣೆಗೆ ಚಾಲನೆ



ಚಾಮರಾಜನಗರ ಡಿ.27– 'ವೈದ್ಯರ ನಡೆ ಹಳ್ಳಿಯ ಮನೆ ಕಡೆ' ಎಂಬ ವಿನೂತನ ಆರೋಗ್ಯ ತಪಾಸಣೆಗೆ ಪುಣಜನೂರು ಗ್ರಾಪಂ ವ್ಯಾಪ್ತಿಯ ಮೂಕನ ಪಾಳ್ಯ ಗ್ರಾಮದಲ್ಲಿ ಗ್ರಾಪಂ ಅಧ್ಯಕ್ಷೆ ಶಿವಿ ಬಾಯಿ ಗಣೇಶ್ ನಾಯಕ್ ಚಾಲನೆ ನೀಡಿದರು.

ನಂತರ ಅವರು ಮಾತನಾಡಿ, ಕೊರೊನಾ ಹರಡದಂತೆ ಮುನ್ನೆಚ್ಚರಿಕೆ ಕ್ರಮವಾಗಿ ಈಗಾಗಲೇ ಪುಣಜನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಗ್ರಾಮಗಳಲ್ಲಿ ಬೇಡಗುಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯರ ತಂಡದವರು ಗ್ರಾಮ ಪಂಚಾಯಿತಿ ಸಹಯೋಗದಲ್ಲಿ ಕಾಡಂಚಿನ ಪ್ರತಿಯೊಂದು ಗ್ರಾಮಗಳ ಮನೆ ಮನೆಗೆ ಭೇಟಿ ನೀಡಿ ಪ್ರತಿಯೊಬ್ಬರ ಆರೋಗ್ಯ ತಪಾಸಣೆ ನಡೆಸಲಿದ್ದಾರೆ.

ರಕ್ತದೊತ್ತಡ, ಮಧುಮೇಹ ಜ್ವರ, ಕೆಮ್ಮು, ನೆಗಡಿ ಇನ್ನಿತರ ಸಮಸ್ಯೆಗಳ ಜನರು ಕಂಡುಬಂದಲ್ಲಿ ಅಂತಹವರು ಕಡ್ಡಾಯವಾಗಿ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು. ಕೊರೊನಾದಂತಹ ಸಾಂಕ್ರಾಮಿಕ ರೋಗವನ್ನು ತಡೆಗಟ್ಟಲು ಎಲ್ಲರೂ ಸಹಕರಿಸಬೇಕು ಎಂದು ಮನವಿ ಮಾಡಿದರು.

ವೈದ್ಯಾಧಿಕಾರಿ ಡಾ. ಗುಂಡಪ್ಪ ಮಾತನಾಡಿ, ಪುಣಜನೂರು, ಪುಣಜನೂರು ಗೇಟ್, ಬಾನವಾಡಿ ಸೇರಿದಂತೆ ಪಂಚಾಯಿತಿ ವ್ಯಾಪ್ತಿಯ ಹಲವು ಗ್ರಾಮಗಳಲ್ಲಿ ತಪಾಸಣೆ ನಡೆಸಲಾಗುವುದು, ತಮಗೆ ಜ್ವರ, ಶೀತ ಇನ್ನಿತರ ಸಮಸ್ಯೆಗಳು ಕಂಡು ಬಂದಲ್ಲಿ ತಕ್ಷಣವೇ ಆರೋಗ್ಯಾಧಿಕಾರಿಗಳನ್ನು ಸಂಪರ್ಕಿಸಿ ತಪಾಸಣೆ ಮಾಡಿಸಿಕೊಳ್ಳಬೇಕು ಎಂದರು.

ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ರಾಚಪ್ಪ, ಸದಸ್ಯರಾದ ಮಹೇಶ್ ನಾಯಕ, ಮಾಜಿ ಉಪಾಧ್ಯಕ್ಷ ಶಿವಾಜಿ ನಾಯಕ, ಸಿಎಚ್‌ಓ ಮಹೇಶ್, ಪಿಡಿಓ ಸಿದ್ದರಾಜು, ಬಿಲ್‌ಕಲೆಕ್ಟರ್ ಮಹದೇವನಾಯಕ, ವಾಟರ್‌ಮನ್ ಶಿವನಾಯಕ, ಎಸ್‌ಎಸ್‌ಟಿಟಿವಿಎಸ್ ರಾಜೇಶ್, ಲ್ಯಾಬ್ ಟೆಕ್ನಿಷಿಯನ್ ತೈರೋಜ್‌ಖಾನ್, ಶುಶ್ರೂಷಕಿ ಮಂಗಳಾ, ಆಶಾ ಕಾರ್ಯಕರ್ತೆಯರು ಹಾಜರಿದ್ದರು.

## ಚಾಮರಾಜನಗರ : ಜ.22ಕ್ಕೆ ಅಂತಿಮ ಮತದಾರರ ಪಟ್ಟಿ ಪ್ರಕಟ

ಚಾಮರಾಜನಗರ, ಡಿ.27– ಭಾವಚಿತ್ರವಿರುವ ಮತದಾರರ ಪಟ್ಟಿ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ ಸಂಬಂಧ ಭಾರತ ಚುನಾವಣಾ ಆಯೋಗವು ಈ ಹಿಂದೆ ಹೊರಡಿಸಿದ್ದ ವೇಳಾಪಟ್ಟಿಯನ್ನು ಪರಿಷ್ಕರಿಸಿದ್ದು, ಈ ಪ್ರಕಾರ ಸಾರ್ವಜನಿಕರಿಂದ ಸ್ವೀಕರಿಸಲಾಗಿರುವ ಹಕ್ಕು ಮತ್ತು ಆಕ್ಷೇಪಣೆಗಳನ್ನು 2024ರ ಜನವರಿ 12ರೊಳಗೆ ಇತ್ಯರ್ಥಪಡಿಸಿ ಅಂತಿಮ ಮತದಾರರ ಪಟ್ಟಿಯನ್ನು 2024ರ ಜ.22ರಂದು ಹೊರಡಿಸಲಾಗುವುದೆಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಡಿ.29, ರಾಷ್ಟ್ರೀಯ ಗ್ರಾಹಕ ದಿನಾಚರಣೆ ಕಾರ್ಯಕ್ರಮ

ಚಾಮರಾಜನಗರ, ಡಿ.27– ಆಹಾರ ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರ ಇಲಾಖೆ, ಜಿಲ್ಲಾ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗ, ಕಾನೂನು ಮಾಪನ ಶಾಸ್ತ್ರ ಇಲಾಖೆ, ಜಿಲ್ಲಾ ಗ್ರಾಹಕ ಮಾಹಿತಿ ಕೇಂದ್ರ ಇವರ ಸಂಯುಕ್ತಾಶ್ರಯದಲ್ಲಿ ರಾಷ್ಟ್ರೀಯ ಗ್ರಾಹಕ ದಿನಾಚರಣೆ ಕಾರ್ಯಕ್ರಮವನ್ನು ಡಿ.29ರಂದು ಮಧ್ಯಾಹ್ನ 12.30 ಗಂಟೆಗೆ ನಗರದ ಜಿಲ್ಲಾಡಳಿತ ಭವನದಲ್ಲಿರುವ ಹಳೆ ಕೆ.ಡಿ.ಪಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ಕಾರ್ಯಕ್ರಮ ಉದ್ಘಾಟಿಸುವರು. ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷರಾದ ಎಂ.ವಿ. ಭಾರತಿ ಅವರು ಅಧ್ಯಕ್ಷತೆ ವಹಿಸುವರು. ಸದಸ್ಯರಾದ ರಾಜು ಕೆ.ಎಸ್, ಜಿಲ್ಲಾ ಗ್ರಾಹಕ ಮಾಹಿತಿ ಕೇಂದ್ರ ಹಾಗೂ ಶ್ರೀಗಂಧ ಮಹಿಳಾ ಅಭಿವೃದ್ಧಿ ಸಂಘದ ಸಂಯೋಜಕರಾದ ಶಿವರಾಜಮ್ಮ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

## ಸಚಿವ ಶಿವಾನಂದ ಪಾಟೀಲ್ ವಜಾಕ್ಕೆ ಆಗ್ರಹಿಸಿ ರಸ್ತೆ ತಡೆ



ಚಾಮರಾಜನಗರ, ಡಿ.27– ಸಾಲ ಮನ್ನಾ ಹಾಗೂ ಪರಿಹಾರಕ್ಕಾಗಿ ರೈತರು ಬರಗಾಲ ಬರಬೇಕೆಂದು ಆಶಿಸುತ್ತಾರೆ ಎಂದು ಸಕ್ಕರೆ ಸಚಿವ ಶಿವಾನಂದ ಪಾಟೀಲ್ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿ ನಗರದಲ್ಲಿ ಬುಧವಾರ ಜಿಲ್ಲಾ ರೈತ ಸಂಘದಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಜಾಲಹಳ್ಳಿಹುಂಡಿಯ ಬಳಿಯ 209ರಾಷ್ಟ್ರೀಯ ಹೆದ್ದಾರಿಯಲ್ಲಿ ಸಮಾವೇಶಗೊಂಡ ರೈತ ಸಂಘ ಹಾಗೂ ಹಸಿರು ಸೇನೆ ಕಾರ್ಯಕರ್ತರು ಸಚಿವ ಶಿವಾನಂದ ಪಾಟೀಲ್‌ರ ವಿರುದ್ಧ ಘೋಷಣೆ ಕೂಗಿ ಅವರನ್ನು ಸಚಿವ ಸಂಪುಟದಿಂದ ವಜಾಗೊಳಿಸಬೇಕು ಎಂದು ಆಗ್ರಹಿಸಿ, ರಸ್ತೆ ತಡೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ನಂತರ ಜಿಲ್ಲಾ ರೈತ ಸಂಘದ ಅಧ್ಯಕ್ಷ ಹೊನ್ನೂರು ಪ್ರಕಾಶ್ ಮಾತನಾಡಿ, ಅನ್ನ ನೀಡುವ ರೈತರ ಬಗ್ಗೆ ರಾಜ್ಯ ಸರ್ಕಾರದ ಮಂತ್ರಿಯಾದ ಶಿವಾನಂದ ಪಾಟೀಲ್ ಅವಿವೇಕತನದಿಂದ ಹೇಳಿಕೆ ನೀಡಿರುವುದು ಅತ್ಯಂತ ಖಂಡನೀಯ ಎಂದರು.

ತಕ್ಷಣವೇ ಸಚಿವ ಶಿವಾನಂದ ಪಾಟೀಲ್ ಅವರು ರೈತರ ಕ್ಷಮೆಯನ್ನು ಕೇಳಬೇಕು. ಸಚಿವ ಸಂಪುಟದಿಂದ ಮುಖ್ಯಮಂತ್ರಿ ಗಳು ಅವರನ್ನು ವಜಾ ಮಾಡಬೇಕು. ಇಲ್ಲವಾದರೆ ಶಿವಾನಂದ ಪಾಟೀಲ್ ಜಿಲ್ಲೆಗೆ ಬಂದರೆ ಕಪ್ಪು ಬಾವುಟ ಪ್ರದರ್ಶಿಸಿ, ಕೊಳೆತ ಹಣ್ಣಿನಿಂದ ಹೊಡೆದು ಪ್ರವಾಸ ಮಾಡಲು ಬಿಡುವುದಿಲ್ಲ ಎಂದು ಎಚ್ಚರಿಸಿದರು. ಪ್ರತಿಭಟನೆಯಲ್ಲಿ ಮಂಚಹಳ್ಳಿ ಮಹೇಶ್, ಶಿವಪ್ರಕಾಶ್, ನಂದೀಶ್, ಮಲ್ಲೇಶ್, ಬೆಳ್ಳಶೆಟ್ಟಿ, ರಾಜು ಇದ್ದರು.

## ಉಡ ಬೇಟೆಯಾಡಿದ ವ್ಯಕ್ತಿ ಬಂಧನ

ಹನೂರು, ಡಿ.27– ಅರಣ್ಯಕ್ಕೆ ಅಕ್ರಮ ಪ್ರವೇಶ ಮಾಡಿ ಉಡ ಬೇಟೆಯಾಡಿದ್ದ ವ್ಯಕ್ತಿಯನ್ನು ಅರಣ್ಯ ಇಲಾಖೆ ಅಧಿಕಾರಿಗಳು ಬಂಧಿಸಿದ್ದಾರೆ. ಹನೂರು ತಾಲೂಕಿನ ಭದ್ರಯ್ಯನಹಳ್ಳಿ ಗ್ರಾಮದ ಸಣ್ಣಕಾಳಶೆಟ್ಟಿ (43) ಬಂಧಿತನಾಗಿದ್ದು, ಕೌದಳ್ಳಿ ವನ್ಯಜೀವಿ ವಲಯ ವ್ಯಾಪ್ತಿಯ ವಲಯ ಅರಣ್ಯಾಧಿಕಾರಿ ಲೋಕೇಶ್ ಚೌಹಾಣ್, ಉಪವಲಯ ಅರಣ್ಯ ಅಧಿಕಾರಿ ಅನಂತರಾಮು .ಬಿ, ಗಸ್ತು ವನಪಾಲಕರಾದ ಭೀಮಪ್ಪ ಎಚ್ ದಾಸರ, ಶಿವರಾಜ್ ಡಿ, ಮಲ್ಲಿಕಾರ್ಜುನ ಭೀಮಪ್ಪ ಹಂಗರಗಿ, ಬಾಬು ಮತ್ತು ಕಳ್ಳ ಬೇಟೆ ಶಿಬಿರದ ಸಿಬ್ಬಂದಿಗಳಾದ ಬೆಟ್ಟಪ್ಪ, ಸಿದ್ದಪ್ಪಾಜಿ ಕಾವೇರಿ ವನ್ಯಜೀವಿಧಾಮದ ಕೌದಳ್ಳಿ ವನ್ಯಜೀವಿ ವಲಯ ವ್ಯಾಪ್ತಿಯ ಕೌದಳ್ಳಿ ಗಸ್ತಿನ ಮುನಿಗುಡಿ ಬಯಲು ಅರಣ್ಯ ಪ್ರದೇಶದಲ್ಲಿ ಸಿಬ್ಬಂದಿಗಳು ಗಸ್ತು ಮಾಡುತ್ತಿದ್ದ ಸಂದರ್ಭದಲ್ಲಿ ಈತ ಅರಣ್ಯಕ್ಕೆ ಅಕ್ರಮ ಪ್ರವೇಶ ಮಾಡಿ ಉಡ ಬೇಟೆಯಾಡಿ, ಕೊಂಡೊಯ್ಯುತ್ತಿದ್ದ. ಈತನನ್ನು ಬಂಧಿಸಿರುವ ಅರಣ್ಯಾಧಿಕಾರಿಗಳು ವನ್ಯಜೀವಿ ಸಂರಕ್ಷಣಾ ಕಾಯಿದೆಯಂತೆ ಪ್ರಕರಣ ದಾಖಲಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ, ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

## ಮಾರಣಾಂತಿಕ ಹಲ್ಲೆ ಆರೋಪಿಗಳಿಗೆ ಶಿಕ್ಷೆ

ಮೈಸೂರು,ಡಿ.27–ಮಾರಣಾಂತಿಕ ಹಲ್ಲೆ ನಡೆಸಿದ್ದ ಮೂವರಿಗೆ 8ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಪಾಟೀಲ್ ಮೋಹನ್‌ಕುಮಾರ್ ಭೀಮನ ಗೌಡರು ತಲಾ 2 ವರ್ಷ ಜೈಲು ಶಿಕ್ಷೆ, ತಲಾ 2500 ರೂ. ದಂಡ ವಿಧಿಸಿದ್ದಾರೆ.

ಹುಣಸೂರು ಪಟ್ಟಣದ ಸಮೀಪವಿರುವ ಕಿರಿಜಾಜಿ ಗ್ರಾಮದ ಮೋಹನ್ ಕುಮಾರ್, ಮನು ಹಾಗೂ ರವಿ ಎಂಬುವರೇ ಶಿಕ್ಷೆಗೆ ಗುರಿಯಾದವರು. ಇದೇ ಗ್ರಾಮದ ವಾಸಿ ಪ್ರಶಾಂತ್ ಅಮ್ಮ ಕಾರನ್ನು ಪಾರ್ಕ್ ಮಾಡುವ ವಿಚಾರವಾಗಿ ಈ ಮೂವರು ಆರೋಪಿಗಳು ಜಗಳ ತೆಗೆದು ಮರದ ತುಂಡಿನಿಂದ ಹಲ್ಲೆ ಮಾಡಿದ್ದರು. ಇದನ್ನು ಬಿಡಿಸಲು ಬಂದ ವಿಠಲ ಎಂಬುವರ ಮೇಲೂ ಹಲ್ಲೆಗೈದಿದ್ದರು. ಈ ಸಂಬಂಧ ಹುಣಸೂರು ಟೌನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಅಂದಿನ ಇನ್ಸ್‌ಪೆಕ್ಟರ್ ಸಿ.ವಿ.ರವಿ ಅವರು ಪ್ರಕರಣದ ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಧೀಶರು ಆರೋಪಿಗಳ ಮೇಲಿನ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ತಲಾ 2 ವರ್ಷ ಶಿಕ್ಷೆ, ತಲಾ 2500 ರೂ. ದಂಡ ವಿಧಿಸಿ ಆದೇಶ ಹೊರಡಿಸಿದ್ದಾರೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕಿ ಕೆ.ಎಂ.ಶಿವಕುಮಾರ ಮೂರ್ತಿ ಅವರು ವಾದ ಮಂಡಿಸಿದ್ದರು.

## ರಾಜಧಾನಿಯಲ್ಲಿ ಹೋರಿ ಬೆದರಿಸುವ ಸ್ಪರ್ಧೆ!

ಹುಬ್ಬಳ್ಳಿ: ರಾಜಧಾನಿ ಬೆಂಗಳೂರಿನಲ್ಲಿ ಕಂಬಳ ನಂತರ ಈಗ ಹಾವೇರಿ ಮತ್ತು ಶಿವಮೊಗ್ಗ ಭಾಗದಲ್ಲಿ ಜನಪ್ರಿಯವಾಗಿರುವ ಗ್ರಾಮೀಣ ಕ್ರೀಡೆ ಕೊಬ್ಬರಿ ಹೋರಿ ಬೆದರಿಸುವ ಸ್ಪರ್ಧೆ ಆಯೋಜಿಸಲು ಸಂಘಟಕರು ಮುಂದಾಗಿದ್ದು, ಈ ಸಂಬಂಧ ರಾಜ್ಯ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಿದ್ದಾರೆ.

ರಾಜ್ಯದ ವಿವಿಧ ಬೃಹತ್ ಕೊಬ್ಬರಿ ಹೋರಿ ಕ್ರೀಡೆಗೆ ಕೇಂದ್ರ ಸ್ಥಾನವಾಗಿರುವ ಹಾವೇರಿಯ ಹಾನಗಲ್‌ನ ಆಯೋಜಕರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಈ ಸಂಬಂಧ ಮನವಿ ಪತ್ರ ಸಲ್ಲಿಸಿದ್ದಾರೆ. ಬೆಂಗಳೂರಿನ ಹೆಚ್ಚಿನ ಪ್ರೇಕ್ಷಕರಿಗೆ ಗ್ರಾಮೀಣ ಕ್ರೀಡೆಗಳನ್ನು ಪ್ರದರ್ಶಿಸಲು ಇದು ಒಂದು ಅನನ್ಯ ಅವಕಾಶ ಎಂದು ಸಂಘಟಕರು ಹೇಳಿದ್ದಾರೆ.

ಸರ್ಕಾರ ಕಂಬಳ ಕ್ರೀಡಾ ಸಂಘಟಕರನ್ನು ಬೆಂಗಳೂರಿಗೆ ಆಹ್ವಾನಿಸಿದ ನಂತರ, ನಾವೂ ಬೆಂಗಳೂರಿನಲ್ಲಿ ಕಾರ್ಯಕ್ರಮ ಆಯೋಜಿಸಲು ಯೋಜಿಸಿದ್ದೇವೆ. ಬೆಂಗಳೂರಿನಲ್ಲಿ ಸಣ್ಣದೊಂದು ಸೆಟ್‌ಅಪ್ ಮಾಡಿ, ಅಲ್ಲಿ ಗ್ರಾಮೀಣ ಕ್ರೀಡೆಗಳ ಸಾರವನ್ನು ಜನ ವೀಕ್ಷಿಸಬಹುದು ಎಂದಿದ್ದಾರೆ.

ಕೊಬ್ಬರಿ ಹೋರಿ, ಇದು ಅಲಂಕೃತ ಹೋರಿಗಳನ್ನು ಬಳಸಿ ಆಡುವ ಗ್ರಾಮೀಣ ಕ್ರೀಡೆಯಾಗಿದೆ. ಕೆರಳಿದ ಗೂಳಿಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆ ಓಡುವಂತೆ ಮಾಡಲಾಗುತ್ತದೆ ಮತ್ತು ಆಟಗಾರರು ಬಹುಮಾನವನ್ನು ಗೆಲ್ಲಲು ಅದನ್ನು ಹಿಡಿದು ಕೊರಳಿನಿಂದ ತೆಂಗಿನಕಾಯಿ ಹಾರವನ್ನು ಬಿಚ್ಚಬೇಕು. ಇಲ್ಲದಿದ್ದರೆ ಗೂಳಿ ಮಾಲೀಕರು ಬಹುಮಾನವನ್ನು ಪಡೆಯುತ್ತಾರೆ. ಬಹುಮಾನಗಳು ಚಿನ್ನದ ಆಭರಣಗಳು, ದ್ವಿಚಕ್ರ ವಾಹನಗಳು ಮತ್ತು ಕಾರುಗಳನ್ನು ಒಳಗೊಂಡಿರುತ್ತದೆ.

# ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

---

ಮೈಸೂರಿನ ಹೆಸರಾಂತ ಡಾ.ವಿಷ್ಣುವರ್ಧನ್ ರವರ ಸ್ಮಾರಕ ಭವನದಲ್ಲಿ ದಿ.21.01.2024ರ ಭಾನುವಾರ ನಡೆಯಲಿರುವ ಡಾ.ವಿಷ್ಣುವರ್ಧನ್ ಸ್ಮರಣಾರ್ಥ ಎಲ್ಲೆಲ್ಲೂ ಸಂಗೀತವೇ ಸೀಸನ್– 2

ಸಂಗೀತ ಕಾರ್ಯಕ್ರಮದಲ್ಲಿ ಕರ್ನಾಟಕದಾದ್ಯಂತ ಗಾಯಕ–ಗಾಯಕಿಯರು ಭಾಗವಹಿಸುತ್ತಿದ್ದಾರೆ.

ಈ ಕಾರ್ಯಕ್ರಮದಲ್ಲಿ ಸ್ಟಾಲ್‌ಗಳನ್ನು ಬುಕಿಂಗ್ ಮಾಡಲು ಇಂದೇ ಕರೆ ಮಾಡಿ

**7411204937**

ಎಲ್ಲಾ ಸಾರ್ವಜನಿಕರಿಗೂ ಆತ್ಮೀಯ ಸ್ವಾಗತ

---

ಮೈಸೂರಿನ ಬಲ್ಲಾಳ್ ವೃತ್ತದ ಬಳಿಯಿರುವ ಪ್ರತಿಷ್ಠಿತ ರೆಸ್ಟೋರೆಂಟ್ ಒಂದಕ್ಕೆ ದೋಸೆ ಭಟ್ಟರು ಬೇಕಾಗಿದ್ದಾರೆ. ಒಳ್ಳೆಯ ಸಂಬಳ ನೀಡಲಾಗುವುದು. ಸಂಪರ್ಕಿಸಿ

**9900661620**

---

### ಸೈಟುಗಳು ಮಾರಾಟಕ್ಕಿದೆ

30x40, 20x30 ದಟ್ಟಗಳ್ಳಿ, 30x50 ಆದಿತ್ಯ ಸರ್ಕಲ್ ಹತ್ತಿರ 40x60 Site Rs. 60 Lakhs, 30x40 Site N/E ಕಾರ್ನರ್ 28 ಲಕ್ಷ ಬೋಗಾದಿ ರಿಂಗ್ ರಸ್ತೆ, ಹಳೆ ಮನೆ / ಹೊಸ ಮನೆ ಸೈಟು ಮಾರುವವರು/ಕೊಳ್ಳುವವರು

ಬನಶಂಕರಿ ರಿಯಲ್ ಎಸ್ಟೇಟ್

**9945042875**

---

### ತಕ್ಷಣ ಬೇಕಾಗಿದ್ದಾರೆ

H.R. Assistant
ಸಂಬಳ: 15000/- to 18000/-
Company Receptionist
ಸಂಬಳ: 13000/- to 15000/-
ಸೆಕ್ಯೂರಿಟಿ ಗಾರ್ಡ್ & ಸೂಪರ್ ವೈಸರ್ ಬೇಕಾಗಿದ್ದಾರೆ
ಸಂಬಳ: 15000/- to 20000/-
ಸ್ಥಳ: ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯ, ಮೈಸೂರು

**Ph: 9916739611**

---

### ಕೇವಲ 2000 ರೂಪಾಯಿಗೆ

ದಪ್ಪನೆಯ Double ಹಾಸಿಗೆ 2 ದಿಂಬು ಸಹ ಒಂದು ಬೆಡ್‌ಶೀಟ್ ಮತ್ತು 2 ದಿಂಬಿನ ಕವರ್ ಮತ್ತು ಒಂದು ಸೂಟ್‌ಕೇಸ್ ರಗ್ಗು ಸೇರಿ.

**8884179981**

---

### ಬೇಕಾಗಿದ್ದಾರೆ

ಮೈಸೂರಿನ ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾ GRS ಫ್ಯಾಂಟಸಿ ಪಾರ್ಕ್ ಹಿಂಭಾಗ ಇರುವ ಕಾರ್ಖಾನೆಗೆ 8 Hours Duty ನಲ್ಲಿ ಕೆಲಸ ಮಾಡುವ ವಿದ್ಯಾವಂತ 3 ವರ್ಷ ಮೇಲ್ಪಟ್ಟ ಸೆಕ್ಯೂರಿಟಿ ಗಾರ್ಡ್ ಅನುಭವವಿರುವ ಪುರುಷ 40 ವರ್ಷ ವಯೋಮಿತಿ ಒಳಗಿರುವ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವೇತನ ತಿಂಗಳಿಗೆ 16500/- ಮತ್ತು ESI & PF ಕ್ಯಾಂಟೀನ್ ಸೌಲಭ್ಯವಿರುತ್ತದೆ.

**9731976148**

---

### FLAT FOR SALE

In Gayathri Arcade, E/Facing, 2 BHK with A/C Rooms, 1250 Sqft. in Yadavagiri.

**Contact: 9945024710**

Rs. 56 Lakhs

---

### PRISM TOURS & TRAVELS

National & International Fixed Departure Tours of Local Sight Seeing!!!

For more Information Call

**8660963569 / 8310642530**

Venue: # 1059, Kaveri Circle, High Tension road, II Stage, Hebbal-570017

---

### ನಿಸರ್ಗ ರಿಯಲ್ ಎಸ್ಟೇಟ್

ಮೈಸೂರು ಹಾಗೂ ರಿಂಗ್ ರೋಡಿನ ಸುತ್ತ ಸೈಟು, ಮನೆ, ಕಮರ್ಷಿಯಲ್ ಬಿಲ್ಡಿಂಗ್, ಜಮೀನು ಕೊಳ್ಳಲು, ಮಾರಲು, ಮನೆ ಬಾಡಿಗೆಗೆ ಸಂಪರ್ಕಿಸಿ: ಮಾಲೀಕರು ಮಾತ್ರ

**9611783068**

---




Solar Water Heater SALES & SERVICE

BAJAJ FINSERV

### SUNZONE SOLAR SYSTEM

VM Double Road, Kuvempunagar, Mysuru

**9845175443**

---

### DTCP SITES FOR SALE

DTCP Sites Rs. 699 per sq.ft., Near Jayapura, H.D. Kote Road, Mysore.

**9590491194,9606783264**

---

### ಬೇಕಾಗಿದ್ದಾರೆ

ಫೋಟೋ ಫ್ರೇಮ್ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ

**9900377073**
**8147433235**

---

### ಸೋಫಾ ರಿಪೇರ್ಸ್ ಅಂಡ್ ವರ್ಕ್ಸ್

**9591012944**

---

### ತಕ್ಷಣ ಬೇಕಾಗಿದ್ದಾರೆ

ಅಪೋಲೋ ಆಸ್ಪತ್ರೆ RTO ಬಲ್ಲಾಳ ಸರ್ಕಲ್, ಬೋಗಾದಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC
ಸಂಬಳ : 18500/-(26 days)
ವಯೋಮಿತಿ : 50 ವರ್ಷದ ಒಳಗೆ
ESI ಮತ್ತು PF ಊಟ ತಿಂಡಿ ಸೌಲಭ್ಯವಿರುತ್ತದೆ.

**9620667819**
**9620777819**

---

### ಕಳೆದಿದೆ

ಶ್ರೀ ಶಿವಕುಮಾರ್ H.C. S/o. ಲೇ॥ ಚಿಕ್ಕಣ್ಣ, ಹುರಳೀಕ್ಯಾತನಹಳ್ಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ ಇವರಿಗೆ ಸೇರಿದ ಮನೆಯ ಶುದ್ಧ ಕ್ರಯಪತ್ರ (Document No. SRP-1-01166-2008-09) ಖಾತಾ ನಂ. 249:242 (20x27 Sqft) & ಖಾತಾ ನಂ. 250:243 (20x19 Sqft) ಕಳೆದಿದೆ. ಸಿಕ್ಕಿದವರು ಸಂಪರ್ಕಿಸಿ:

**9880914557**

---

### FOR SALE

1) 40x60, 04 Sites @ Hebbal 2) 80x80, Ramakrishna nagar Corner, 3) 2750 Sqft., Vijayanagar 1st Stage, 4) 2 Acre Industrial & Commercial Land, 5) 40x60 House @ Agrahara. Contact:

**9663368424**

---

### WANTED SALES BOYS

Minimum 1 year Experience in any field work in Furnishing Showroom. Salary 15k to 25k Timing 10.30 A.M – 8.30 P.M Address: - Irwin Road & Sharadadevi Nagar, Mysore

**Mob-80507-44784**

---

### ಈ ತಕ್ಷಣವೇ ಬೇಕಾಗಿದ್ದಾರೆ

ಮೈಸೂರು, ಹೆಬ್ಬಾಳಿನ ಕಂಪನಿಗಳಲ್ಲಿ ಕೆಲಸ ಮಾಡಲು ಹುಡುಗರು, ಹುಡುಗಿಯರು, ಗಂಡಸರು, ಹೆಂಗಸರು ಟೈಲರುಗಳು ಹೆಲ್ಪರುಗಳು ಮತ್ತು ಟ್ಯಾಲಿಯಲ್ಲಿ ಕನಿಷ್ಠ 2 ರಿಂದ 4 ವರ್ಷ ಅನುಭವವಿರುವ ಅಕೌಂಟೆಂಟ್‌ಗಳು ಬೇಕಾಗಿದ್ದಾರೆ. ESI & PF ವಾರದ ರಜೆ ಇರುತ್ತದೆ.

**7795285485**
**8105249880**

---

### ಬೋಳು ತಲೆಯ ಸಮಸ್ಯೆಯೇ?



ಕಿಮೋತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.

SMART HAIR FIXING

# 574, 9th Cross, Anikethana Road, kuvempunagar, Mysuru

MYSURU 9611028523 MANGALORE 9343142258

---

### ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್

**Mob: 9108566022**

---

### WANTED

- Marketing Manager - 20 Nos Salary 20k allowance 5k
- Marketing Executive - 30 Nos Salary 16k allowance 5k
- Telecaller - 5 Nos - Salary 10k
- Accounts - 3 Nos - Salary 15k
- TV Anchor - Part time/Full time
- Pigmy Collection Boy - 5 Nos

Contact: Nama Suraksha:

**80500 51 444**

---

### WANTED

RECEPTIONIST (Female)

with knowledge of speaking english, kannada & having Tally Knowledge for a Branded UPS Company

HI-TECH UPS & BATTERY

**99456 23202 98443 55870**

#44, 5th Main, 6th Cross, S.puram, Mysore - 09

---

### CHANGE OF NAME

I, Rakesh A Shah, residing at # 40, 1st Cross, Durgadevi Temple Road, Nazarbad, Mysore-570010 have changed my minor child name from Kushi R Shah to Khushii R Shah on my own free will sworn in before Notary L.N. Rajendran, Mysuru vide Affidavit dated 25.12.2023.

Sd/- Rakesh A Shah

---

### AD POSTING JOB

No Registration Fees
No Time Limit
No Target
15 Minutes Job
Earn 20K to 30K PM

**9731891409**

---

### 40×60 SITE for SALE

MUDA - NORTH Facing
Rajeev Nagar 1st Stage
Near Gupta Store, MYSORE
Rs. 1 Crore
**Call : 9845286583**
Immediate Settlement

---

### ಮನೆ ಕಟ್ಟಿಸುವವರ ಗಮನಕ್ಕೆ

ನಿಮ್ಮ ಕನಸಿನ ಮನೆಯನ್ನು ಉತ್ತಮ ಗುಣಮಟ್ಟವುಳ್ಳ ಸಾಮಾಗ್ರಿಗಳೊಂದಿಗೆ ಚದುರಡಿಗೆ Rs. 1670/- ರಂತೆ ಕಟ್ಟಿಕೊಡಲಾಗುವುದು. ಮುಂಗಡ ಹಣ ಪಾವತಿ ಮಾಡುವಂತಿಲ್ಲ. ಸಾಲದ ಸೌಲಭ್ಯ ಒದಗಿಸಲಾಗುವುದು.

**Mob: 94821-27279**

---

### ಬೇಕಾಗಿದ್ದಾರೆ

1) ಹೌಸ್‌ಕೀಪಿಂಗ್ ಫೀಲ್ಡ್ ಸೂಪರ್‌ವೈಸರ್ – ಇಬ್ಬರು
2) ಹೌಸ್ ಕೀಪಿಂಗ್ (ಮಹಿಳೆಯರು) – 10 ಮಂದಿ
3) ಸೆಕ್ಯೂರಿಟಿ ಗಾರ್ಡುಗಳು – 10 ಮಂದಿ (ರಾತ್ರಿ ಪಾಳಿಗೆ)

**9611236261**
**9686422400**

---

### ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ

NO TARGET, TYPING WORK

ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.

**8884439666**

---

### ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ

ಮಡಿಕೇರಿಯಲ್ಲಿ ಇರುವ ರೆಸಾರ್ಟ್‌ಗೆ ಹಾಗೂ ವಿರಾಜಪೇಟೆಯಲ್ಲಿ ಇರುವ ಕಾಲೇಜ್‌ಗೆ ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ SSLC ವಯೋಮಿತಿ 55 ವರ್ಷ ಆಕರ್ಷಕ ವೇತನ ESI & PF ಗಳೊಂದಿಗೆ ಊಟ ವಸತಿ ಸೌಲಭ್ಯವಿರುತ್ತದೆ.

**9980001243**

---

### ಟೀಮ್ ಲೀಡರ್ ಬೇಕಾಗಿದ್ದಾರೆ

(ಸಂಬಳ = 13000) ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ (ಕನ್ನಡ ಮಾತನಾಡಬಲ್ಲವರು)
ಸ್ಥಳ – ಚಾಮುಂಡಿಪುರಂ ಮತ್ತು ಎನ್ ಆರ್ ಮೊಹಲ್ಲಾ,
ಸಂಬಳ–8000 ರಿಂದ–11000 ರವರಗೆ

**ಮೊಬೈಲ್ ನಂಬರ್: 8150005111**

---

### CHANGE OF NAME

I, Maalangi Chirasya Sudeep, residing at # 876/6, V.V. Road, Lakshmipuram, Mysore-570010 have changed my name to Maalangi Sudeep Chirasya on my own free will sworn in before Notary S. Pavithra, Mysuru vide Affidavit dated 2.12.2023. Henceforth in all records, deeds, writings & in all my future communications I will use the name as Maalangi Sudeep Chirasya

Sd/- Maalangi Sudeep Chirasya

---

### ಬೇಕಾಗಿದ್ದಾರೆ

ಸೆಕ್ಯೂರಿಟಿ ಸೂಪರ್ ವೈಸರ್ ಮತ್ತು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ಉತ್ತಮ ವೇತನ+ಪಿಎಫ್+ಇಎಸ್‌ಐ ಸೌಲಭ್ಯವಿರುತ್ತದೆ. ಸ್ಥಳ: ಹೆಬ್ಬಾಳು ಕೈಗಾರಿಕ ನಗರ, ಮೈಸೂರು ಸಿಟಿ ಮತ್ತು ಕುಶಾಲನಗರ

**7829393555**
**9741515239**

---

### ಮನೆ ಮಾರಾಟಕ್ಕಿದೆ

ಲೋಕನಾಯಕನಗರ ಹೆಬ್ಬಾಳು ಮೇನ್ ರೋಡ್ ರಿಂಗ್ ರೋಡ್ ಹತ್ತಿರ, ಅಕ್ಷಯ ಪ್ಯಾಲೇಸ್ ಹಿಂಭಾಗ

**7676557984**
**9620507480**

---

### ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್

**Mob: 8880558064**

---

### ಬೇಕಾಗಿದ್ದಾರೆ

ಮನೆಯಲ್ಲಿ ಅಡುಗೆ ಕೆಲಸ ಮಾಡಿಕೊಂಡು ವಯಸ್ಸಾದ ಮಹಿಳೆಯನ್ನು ನೋಡಿಕೊಳ್ಳಲು 45 ವರ್ಷದೊಳಗಿನ ಮಹಿಳೆಯರು ಬೇಕಾಗಿದ್ದಾರೆ. ಉಚಿತ ಊಟ, ವಸತಿ ಸೌಲಭ್ಯದೊಂದಿಗೆ ರೂ. 15000/– ಸಂಬಳ ನೀಡಲಾಗುವುದು. (ಫೋಟೋ. ಆಧಾರ್ ಕಾರ್ಡ್ ಕಡ್ಡಾಯ) ಸಂಪರ್ಕಿಸಿ :

**8904288903**

---

### ಬೇಕಾಗಿದ್ದಾರೆ

ವಾಹನಗಳ ವಾಟರ್ ಸರ್ವೀಸ್ ಸ್ಟೇಷನಗೆ ನುರಿತ ಕೆಲಸಗಾರರು ಬೇಕಾಗಿದ್ದಾರೆ ವಸತಿ ಸೌಲಭ್ಯ

ಕೂಡಲೇ ಸಂಪರ್ಕಿಸಿ:

**94495 14889**
**83108 14289**

---

### FOR SALE

Corner Sofa Set, Wood Sofa Set, Wood Cot, Dewan, Old Dining Table & Chairs, Teak Wood Table, Teapoy

**Call: 9620461090**

---

### ಕೆಲಸಕ್ಕೆ ಬೇಕಾಗಿದ್ದಾರೆ

ಕರ್ನಾಟಕದಾದ್ಯಂತಾ ಪ್ರಸಿದ್ಧ MNC ಕಂಪನಿಗಳಿಗೆ, ಕಂಪನಿ ಕೆಲಸಕ್ಕೆ, ಆಫೀಸ್ ಕೆಲಸಕ್ಕೆ, ಮತ್ತು ವರ್ಕ್ ಫ್ರಮ್ ಹೋಂ ಕೆಲಸಕ್ಕೆ ತಕ್ಷಣ ಯುವಕ ಯುವತಿಯರು, ಬೇಕಾಗಿದ್ದಾರೆ. ಯಾವುದೇ ಎಜುಕೇಶನ್, ಯಾವುದೇ AGE ಲಿಮಿಟ್ ಇಲ್ಲ Salary 18000 to 38000 ಇರುತ್ತದೆ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: HR Madam

**7619390846,8792369835**

---

### ಕೊಳ್ಳೇಗಾಲದ ಜ್ಯೋತಿಷ್ಯರು

ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)

**MOB: 9880583804**

ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.

ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು-1

---

### ಕೆಲಸಕ್ಕೆ ಬೇಕಾಗಿದ್ದಾರೆ

ಕಂಪ್ಯೂಟರ್ ತರಬೇತಿವುಳ್ಳ ಮಹಿಳೆಯರು ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ. ವಯಸ್ಸು 20 ರಿಂದ 25 ವರ್ಷಗಳು

**8073187634**
**9986329765**

---

### neem BOND PLATINUM®

100% Neem Ply & Doors




@ FACTORY DEPOT RATES

**9731591267, 9901291267**

---

### ಅನುಬಂಧ ಮ್ಯಾರೇಜಸ್

ಲಿಂಗಾಯತ ಸುಂದರ ಶ್ರೀಮಂತ ಬಿಜನೆಸ್ ಒಬ್ಬಳೇ ವಿಧವೆಗೆ ಸುಂದರ ಶ್ರೀಮಂತ ವಿದ್ಯಾವಂತ ವರ ವಿಧುರ ವಿಚ್ಛೇದಿತರು ಲೈಫ್ ಪಾರ್ಟ್‌ನರ್ ಬೇಕು ಜಾತಿ ಅಭ್ಯಂತರ ಇಲ್ಲ ನೇರ ಸಂಪರ್ಕಿಸಿ:

**6361740552**

---

### ಕೊಳ್ಳೇಗಾಲದ ಜ್ಯೋತಿಷ್ಯರು

ಜ್ಯೋತಿಷ್ಯ ರತ್ನ ಮೋಡಿ ಮಾಂತ್ರಿಕ ಪಂ॥ ಎಸ್.ಕೆ. ಪ್ರಶಾಂತ್ ಆಚಾರ್ಯ

**ಮೊ: 9740947045**

ಸ್ತ್ರೀ ಪುರುಷ ಪ್ರೇಮ, ಸಂತಾನ, ವಿವಾಹ, ದಾಂಪತ್ಯ ಸಮಸ್ಯೆ, ನಾಗದೋಷ, ಕುಜದೋಷ, ದುಷ್ಟಶಕ್ತಿ, ಪ್ರೇತಬಾಧೆ, ಸಾಲಬಾಧೆ, ವ್ಯಾಪಾರದಲ್ಲಿ ತೊಂದರೆ ತನ್ನವರೆ ತನಗೆ ಶತ್ರು ನಿಮ್ಮ ಯಾವುದೇ ಗುಪ್ತ ಹಾಗೂ ಕಠಿಣವಾದ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಮಾಡುತ್ತಾರೆ. ಸ್ಥಳ: ಹೋಟೆಲ್ ಗೋವರ್ಧನ, ಡಾ॥ ರಾಜ್‌ಕುಮಾರ್ ಪಾರ್ಕ್ ಹತ್ತಿರ, ಶ್ರೀ ಹರ್ಷ ರಸ್ತೆ (ಹೊಸ ಸುಮಂಗಲಿ ಸಿಲ್ಕ್ಸ್ ಹತ್ತಿರ), ಮೈಸೂರು

---

### WANTED

Receptionist
Typist, Roomboy,
PA, Chinese Cook.
Walk in Interview

**Call: 9620672223**

---

### WANTED

Site Engineer (Civil)
For Construction Company
Diploma or BE Fresher

**Call: 9844439360**

---

### ಬೇಕಾಗಿದ್ದಾರೆ

ದಿನಸಿ ಅಂಗಡಿಗೆ ಹುಡುಗರು – 2
ಬಾಲಕೃಷ್ಣ ರೈಸ್ ಕಾರ್ನರ್
#23 ಎಫ್, 3ನೇ ಹಂತ, ಇಂಡಸ್ಟ್ರೀಯಲ್ ಸಬರ್ಬ್, ದಕ್ಷಿಣ ಮೈಸೂರು, ಮೈಸೂರು 570008 ಸಂಪರ್ಕಿಸಿ

**9986756866**

---

### ಬೇಕಾಗಿದ್ದಾರೆ

ಕುವೆಂಪುನಗರದಲ್ಲಿರುವ ಪಾರ್ಸಲ್ ಸರ್ವಿಸ್ ಹೋಟೆಲ್‌ಗೆ ಕ್ಯಾಶಿಯರ್ ಕಂ.ಪಾರ್ಸಲ್ ಕೌಂಟರ್ ಕೆಲಸಕ್ಕೆ ಬೇಕಾಗಿದ್ದಾರೆ. 12000 ಸಂಬಳದೊಂದಿಗೆ ಊಟ & ವಸತಿ ಉಚಿತ

**7204404170**

---

### ಸೆಕ್ಯೂರಿಟಿಗಾರ್ಡ್‌ಗಳು ಬೇಕಾಗಿದ್ದಾರೆ.

ಕಡಕೊಳದ ಇಂಡಸ್ಟ್ರಿಯಲ್ ಏರಿಯಾದಲ್ಲಿ ಹಾಗೂ ನಂಜನಗೂಡಿನ ಆಸ್ಪತ್ರೆಯಲ್ಲಿ ಓದು ಬರಹವುಳ್ಳ ಅನುಭವವಿರುವ ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ. ಹಾಗೂ ಮೈಸೂರು ಸಿಟಿಯಲ್ಲಿರುವ ಹೆಸರಾಂತ ಕಂಪನಿಗಳಲ್ಲಿ ಅನುಭವವುಳ್ಳ ಸೆಕ್ಯೂರಿಟಿಗಾರ್ಡ್‌ಗಳು ಬೇಕಾಗಿದ್ದಾರೆ. ವಯೋಮಿತಿ 25 to 50 ವರ್ಷ ವಿದ್ಯಾರ್ಹತೆ : SSLC

**9035050656**

---

### ಉಚಿತ ತರಬೇತಿ

ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.

ತರಬೇತಿಗಾಗಿ:

**7406375196, 9880548596**

---

### ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ

ವಿದ್ಯಾರಣ್ಯಪುರಂ
ವಯಸ್ಸು 20–35

**7760301672**

---

### ಬೇಕಾಗಿದ್ದಾರೆ

ಹೋಟೆಲ್ ಸಪ್ಲೈಯರ್, ಕಿಚನ್ ಅಸಿಸ್ಟೆಂಟ್, ಕ್ಯಾಷಿಯರ್ (ಪುರುಷ/ಮಹಿಳೆ)
ಸ್ಪೈಸಿ ರುಚಿ & ರೆಸ್ಟೋರೆಂಟ್, ಕೆ.ಡಿ.ರಸ್ತೆ, ಪಂಚವಟಿ ಸರ್ಕಲ್

**8904765939/8884837174**

---

### ಬೇಕಾಗಿದ್ದಾರೆ (WANTED)

ಮೈಸೂರ್ ನಲ್ಲಿ ಕಾಳಿದಾಸ ರೋಡ್ ನಲ್ಲಿ ಪಂಚವಟಿ ಸರ್ಕಲ್ ಹತ್ತಿರ ಇರುವ ಶುದ್ಧ ಸಸ್ಯಾಹಾರಿ ರೆಸ್ಟೋರೆಂಟ್ ಗೆ, ಅನುಭವವುಳ್ಳ, (1) ಸೌತ್ ಅಸಿಸ್ಟೆಂಟ್ (ಸಹಾಯಕ) Cutting, Grinding (2) ಕೌಂಟರ್ (3) Waiter ವೇಟರ್ cum Supplier / Service ಬೇಕಾಗಿದ್ದಾರೆ. ಆಕರ್ಷಕ ಸಂಬಳ, ವಸತಿ ಹಾಗು ಉತ್ತಮ ಸೌಲಭ್ಯಗಳನ್ನೂ ನೀಡಲಾಗುತ್ತದೆ. ಸಂಪರ್ಕಿಸಿ:

**7338392631**

---

### WANTED

ಕಂಪನಿಯಲ್ಲಿ ಕೆಲಸ ಮಾಡಲು ಯುವಕರು ಬೇಕಾಗಿದ್ದಾರೆ, ಸಂಪರ್ಕಿಸಿ:

**9845028614**

---

### ಸೈಟು ಮಾರಾಟಕ್ಕಿದೆ

40x60 ರ ಪೂರ್ವ ದಕ್ಷಿಣ ಕಾರ್ನರ್ ಖಾಲಿ ನಿವೇಶನ ಕಂದಾಯ ನಗರ ಶ್ರೀರಾಂಪುರ ಬಿ.ಇ.ಎಂ.ಎಲ್. ಆರ್ಚ್ ಹತ್ತಿರ, ಮೈಸೂರು ಸಂಪರ್ಕಿಸಿ:

**9739703467**
**9686895205**

---

### ತಕ್ಷಣ ಬೇಕಾಗಿದ್ದಾರೆ

ಸೆಕ್ಯೂರಿಟಿ ಗಾರ್ಡ್ (ಪುರುಷರು & ಮಹಿಳೆಯರು) (Gokulam, R.K.nagar, Hebbal Industrial Area)
ಹೌಸ್ ಕೀಪಿಂಗ್ (ಹುಡುಗರು & ಹುಡುಗಿಯರು) (Kuvempunagar, R.K.nagar )
ESI, PF ಸೌಲಭ್ಯವಿದೆ, ಸ್ವವಿವರಗಳೊಂದಿಗೆ (ಹೆಬ್ಬಾಳು ಸೂರ್ಯ ಬೇಕರಿ ಸರ್ಕಲ್) ಸಂಪರ್ಕಿಸಿ:

**9739199355, 9844235981**

---

### ತಕ್ಷಣ ಬೇಕಾಗಿದ್ದಾರೆ

ಮೇಟಗಳ್ಳಿ, ಗಂಗೋತ್ರಿ, ಯಾದವಗಿರಿ ಮತ್ತು ಜಂಬೂಬಜಾರ್ ಏರಿಯಾದಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಅನುಭವವುಳ್ಳ ಸೆಕ್ಯೂರಿಟಿ ಸೂಪರ್‌ವೈಸರ್ ಮತ್ತು ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು
ಸಂಬಳ : ಸೂಪರ್ ವೈಸರ್18000/-+W/o (8 hrs)
ಗಾರ್ಡ್ : 16000+W/o

**9880727819**
**9620777819**

ESI ಮತ್ತು PF ಊಟ ತಿಂಡಿ ವ್ಯವಸ್ಥೆವಿರುತ್ತದೆ.

---

### ಬೇಕಾಗಿದ್ದಾರೆ

ಬಸವ ಮಾರ್ಗ ವ್ಯಸನ ಮುಕ್ತ ಕೇಂದ್ರಕ್ಕೆ ಅನುಭವವುಳ್ಳ ನುರಿತ ಆಪ್ತ ಸಮಾಲೋಚಕರು ಬೇಕಾಗಿದ್ದಾರೆ ಆಕರ್ಷಕ ಸಂಬಳ ನೀಡಲಾಗುತ್ತದೆ. ಸ್ಥಳ: ಹೆಬ್ಬಾಳ್ ರಿಂಗ್ ರೋಡ್ ಮೈಸೂರು, ಸಂಪರ್ಕಿಸಿ

**8803344999**

---

### ಬೇಕಾಗಿದ್ದಾರೆ

ಮೈಸೂರಿನ ಮೇಟಗಳ್ಳಿ ಮತ್ತು ಹೆಬ್ಬಾಳು ಕೈಗಾರಿಕ ಪ್ರದೇಶದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಗಳಿಗೆ ಹುಡುಗರು ಬೇಕಾಗಿದ್ದಾರೆ
ವಯಸ್ಸು : 18 ರಿಂದ 40 ವರ್ಷ ವಿದ್ಯಾರ್ಹತೆ: 7 ರಿಂದ P U C ಮತ್ತು ITI. ರಿಯಾಯಿತಿ ದರದಲ್ಲಿ ಊಟ ಮತ್ತು ವಸತಿ ಸೌಲಭ್ಯವಿರುತ್ತದೆ

**ಸಂಪರ್ಕಿಸಿ: 8277047300**

---

### ಹುಡುಗರು/ಹುಡುಗಿಯರು ಬೇಕಾಗಿದ್ದಾರೆ

ಆಫ್‌ಸೆಟ್ ಪ್ರಿಂಟಿಂಗ್ ಕೆಲಸಕ್ಕೆ ಹೆಬ್ಬಾಳು ಇಂಡಸ್ಟ್ರಿಯಲ್ ಏರಿಯ, ಮೈಸೂರು, ಇನ್ಫೋಸಿಸ್ ಪಕ್ಕದಲ್ಲಿ

**ಫೋ: 9886412655**

---

### ಉದ್ಯೋಗವಕಾಶ

ಮೈಸೂರಿನ ಹೆಸರಾಂತ ವೈದ್ಯಕೀಯ ಸೇವಾ ಸಂಸ್ಥೆಯಲ್ಲಿ ಹೋಂ ನರ್ಸಿಂಗ್ ಕೆಲಸಕ್ಕೆ ಯುವತಿಯರು ಮತ್ತು ಮಹಿಳೆಯರು ಬೇಕಾಗಿದ್ದಾರೆ. ವಿದ್ಯಾರ್ಹತೆ 7th, SSLC, PUC, Degree, ANM and GNM (Pass or Fail) ವೇತನ : 15000-20,000 (ಉಚಿತ ತರಬೇತಿ, ಊಟ, ವಸತಿಯೊಂದಿಗೆ)

**9606714441, 7349278501**
**0821-4242351**

---

### ಬೇಕಾಗಿದ್ದಾರೆ

ಕುವೆಂಪುನಗರದಲ್ಲಿ ಪಾರ್ಸಲ್ ಸರ್ವಿಸ್ ಹೋಟೆಲ್‌ಗೆ ಹೆಲ್ಪರ್ ಕೆಲಸಕ್ಕೆ ಬೇಕಾಗಿದ್ದಾರೆ. 10000/– ರೂ ಸಂಬಳದೊಂದಿಗೆ ಊಟ, ವಸತಿ ಉಚಿತ ಸಂಪರ್ಕಿಸಿ

**7204404170**

---

1) 30x50 (10 sites) New RT Nagar next Near Defence Apartment
2) 30x40 (5sites )Suvarna Nagar attch Bogadi Road
3) 2 BHK , 3 BHK flats in Natana Shala attch RK Nagar
4 )10,20 Guntas farm land KRS back water attch Commercial and Residential House City surrounding
Prakruthi Properties

**9538690359,9035990359**

---

### ಶಿಕ್ಷಕರು ಬೇಕಾಗಿದ್ದಾರೆ

HEAD MASTER -01
ACCOUNTANT -01

**8147472526**
**6360942194**

---

### SITE FOR SALE

80x120 East South Corner, Site in EMERALD ENCLAVE Prime location Infosys Backside, Mysore. contact:

**9686895205**
**9739703467**

---

### ಕಳೆದಿದೆ

ದಿ. 20/12/2023ರಂದು ಮೈಸೂರಿನ ತಾಲೂಕು ಆಫೀಸ್‌ನ ಬಳಿ ಮನೆಯ ದಾಖಲಾತಿ ಪತ್ರಗಳನ್ನು ಜೆರಾಕ್ಸ್ ಮಾಡಿಸಲು ಹೋಗಿದ್ದ ಸಂದರ್ಭದಲ್ಲಿ ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ವತಿಯಿಂದ ಅಬ್ದುಲ್ಲಾ ಕುನಿಯನ್, #60, 1ನೇ ಹಂತ, 2ನೇ ಫೇಸ್, ಗಾಯತ್ರಿಪುರಂ, ಮೈಸೂರು ಇವರಿಗೆ ಅಲಾಟ್ ಆಗಿ ಬಂದಿದ್ದ ಪತ್ರವು ಕಳೆದುಹೋಗಿರುತ್ತವೆ. ಸಿಕ್ಕಿದವರು ಸಂಪರ್ಕಿಸಿ:

**9663161966**

---

### HEALTH INSURANCE ಹೆಲ್ತ್ ಇನ್ಸುರೆನ್ಸ್

*ಕುಟುಂಬದ ಎಲ್ಲಾ ಸದಸ್ಯರಿಗೆ ಪಾಲಿಸಿ ನೀಡಲಾಗುವುದು
1) Women Care 2) Family Cover
3) Diabetes 4) Cardiac Care
*100% ಕ್ಲೇಮ್ ಸೆಟ್ಲ್‌ಮೆಂಟ್
* ಸುಲಭ ಕಂತುಗಳಲ್ಲಿ (EMI) ಪಾವತಿಸಬಹುದು
ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:

**7259387365**

---

### ಹೆಸರು ಬದಲಾವಣೆ

ಶ್ರೀಮತಿ ರಾಜೇಶ್ವರಿ S. ಕುಮಾರ್ ಎಂಬ ಹೆಸರಿನ ನಾನು ನನ್ನ ಸ್ವ ಇಚ್ಛೆ ಮೇರೆಗೆ ತಾ. 22.11.2023ರಂದು ನೋಟರಿ K. ಶೋಭಾರವರ ಸಮ್ಮುಖದಲ್ಲಿ ರಾಜೇಶ್ವರಿ B.S. ಎಂದು ಹೆಸರನ್ನು ಬದಲಾಯಿಸಿ ಕೊಂಡಿರುತ್ತೇನೆ.

ಸಹಿ/– ರಾಜೇಶ್ವರಿ B.S.

---

### ತಕ್ಷಣ ಕೆಲಸ

ಮೈಸೂರಿನ ಹೆಸರಾಂತ ಹೆಲ್ತ್ ಕೇರ್ ಸಂಸ್ಥೆಗೆ ಅನುಭವ ಇರುವ /ಇಲ್ಲದಿರುವ ಮಹಿಳೆಯರು, ವಿಧವೆ, ವಿಚ್ಛೇದಿತೆಯರು ನಮ್ಮ ಸಂಸ್ಥೆಯಲ್ಲಿ ಉಳಿದುಕೊಂಡು ಕೆಲಸ ಮಾಡುವವರು ತಕ್ಷಣವೇ ಸಂಪರ್ಕಿಸಿ. ಊಟ ವಸತಿ ಉಚಿತದೊಂದಿಗೆ ಸಂಬಳ 12000–18000 ರ ವರೆಗೆ ಇರುತ್ತದೆ (ಸರ್ಕಾರಿ ನೊಂದಾಯಿತಾ ಸಂಸ್ಥೆ )

**9035113222/9739292222**

---

ಬಸವ ಮಾರ್ಗ ಫೌಂಡೇಶನ್ ಗೆ ನುರಿತ ಅನುಭವವುಳ್ಳ ಸಸ್ಯಾಹಾರಿ ಮತ್ತು ಮಾಂಸಹಾರಿ ಅಡುಗೆ ಮಾಡಲು ಅಡುಗೆ ಭಟ್ಟರು ಬೇಕಾಗಿದ್ದಾರೆ. ಅತ್ಯಾಕರ್ಷಕ ಸಂಬಳ, ಅಡ್ವಾನ್ಸ್ ಸೌಲಭ್ಯ, ವಸತಿ ಸೌಲಭ್ಯವಿದೆ. ಹೆಬ್ಬಾಳ್ ರಿಂಗ್ ರೋಡ್ ಮೈಸೂರು, ಸಂಪರ್ಕಿಸಿ:

**8803344999**

---

### ಬೇಕಾಗಿದ್ದಾರೆ

1) ಇಬ್ಬರು ಅರ್ಚಕರು ಬೇಕಾಗಿದ್ದಾರೆ
2) 10' x12' ಅಳತೆಯುಳ್ಳ ಅಂಗಡಿ ಮಳಿಗೆ ನಂ. 4 ಬಾಡಿಗೆಗೆ ದೊರೆಯುತ್ತದೆ.

ವಿಳಾಸ: ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಸ್ಥಾನ, ಎಸ್.ಜಿ.ಡಿ.ಎಂ ಟ್ರಸ್ಟ್, ಚಾಮುಂಡಿವನಂ, ವಿದ್ಯಾರಣ್ಯಪುರಂ, ಮೈಸೂರು

**ಮೊಬೈಲ್: 9448053321**

---

### ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಮೈಸೂರು ಮಿತ್ರ



ಒಂದನೇ ಪುಟದಿಂದ

## ಮೈಸೂರಿಗೆ ಮೊದಲ ಆದ್ಯತೆ

ಆದರೆ, ಈಗಾಗಲೇ ದಕ್ಷಿಣ ಕರ್ನಾಟಕದಲ್ಲಿ ಒಂದು ಐಐಟಿ ಇರುವುದರಿಂದ ಮುಂಬೈ ಕರ್ನಾಟಕದ ಧಾರವಾಡ ಇಲ್ಲವೇ ಹೈದರಾಬಾದ್ ಕರ್ನಾಟಕದ ರಾಯಚೂರಿನಲ್ಲಿ ಆಗಬೇಕೆಂಬ ಆಗ್ರಹ ಕೇಳಿ ಬಂತು. ಕೊನೆಗೆ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಷಿ ತಮ್ಮ ಲೋಕಸಭಾ ಕ್ಷೇತ್ರವಾದ ಧಾರವಾಡಕ್ಕೆ ಐಐಟಿ ಗಿಟ್ಟಿಸಿಕೊಳ್ಳುವಲ್ಲಿ ಯಶಸ್ವಿಯಾದರು. ಆದರೆ ಮೈಸೂರಿನಲ್ಲಿ ಐಐಟಿ ಸ್ಥಾಪನೆ ಪ್ರಯತ್ನಕ್ಕೆ ಮತ್ತೆ ಚಾಲನೆ ದೊರೆತಿದೆ. ಮೈಸೂರು ಇಲ್ಲವೇ ಹಾಸನದಲ್ಲಿ ಐಐಟಿ ಸ್ಥಾಪನೆ ಮಾಡುವಂತೆ ಸಿದ್ದರಾಮಯ್ಯ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪ್ರಸ್ತಾವನೆ ಸಲ್ಲಿಸಿದ್ದಾರೆ. ಐಐಟಿ ಸ್ಥಾಪನೆ ಮಾಡಿದರೆ ರಾಜ್ಯ ಸರ್ಕಾರ ಅಗತ್ಯ ಮೂಲ ಸೌಕರ್ಯ ಕಲ್ಪಿಸಲಿದೆ ಎಂದು ತಿಳಿಸಿದ್ದಾರೆ. ಹಾಸನದಲ್ಲಿ ಐಐಟಿ ಸ್ಥಾಪನೆಯಾಗ ಬೇಕೆಂದು ಹೊಳೆನರಸೀಪುರ ಶಾಸಕ ಹೆಚ್.ಡಿ.ರೇವಣ್ಣ ಪ್ರಯತ್ನಪಡುತ್ತಲೇ ಇದ್ದಾರೆ. ಆದರೆ ಇಂತಹ ಪ್ರಸ್ತಾವಕ್ಕೆ ರಾಜ್ಯ ಸರ್ಕಾರದ ಅಧಿಕೃತ ಬೇಡಿಕೆ ಹಾಗೂ ಪ್ರಸ್ತಾವನೆ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಪ್ರಸ್ತಾವನೆ ಸಲ್ಲಿಸುವಂತೆ ರೇವಣ್ಣ ಸಿದ್ದರಾಮಯ್ಯಗೆ ದುಂಬಾಲು ಬಿದ್ದಿದ್ದರು. ಆದರೆ ಸಿದ್ದರಾಮಯ್ಯ ತಮ್ಮ ತವರು ಜಿಲ್ಲೆ ಮೈಸೂರಿನಲ್ಲಿ ಐಐಟಿ ಸ್ಥಾಪಿಸುವ ಉದ್ದೇಶ ಹೊಂದಿರುವುದರಿಂದ ಹಾಸನದಲ್ಲಿ ಐಐಟಿ ಸ್ಥಾಪನೆಗೆ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸುವಲ್ಲಿ ಮೀನಾ-ಮೇಷ ಎಣಿಸಿದ್ದರು.

ಆದರೆ ಹೆಚ್.ಡಿ.ರೇವಣ್ಣ ಕೈ ಹಾಕಿದ ಕೆಲಸ ಬಿಡುವ ಆಸಾಮಿಯಲ್ಲ. ಡಿಸೆಂಬರ್ 20ರಂದು ದೆಹಲಿಯಲ್ಲಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾದ ರೇವಣ್ಣ, ಹಾಸನದಲ್ಲಿ ಐಐಟಿ ಸ್ಥಾಪನೆಗೆ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಪಟ್ಟು ಹಿಡಿದಿದ್ದಾರೆ. ರೇವಣ್ಣ ಅವರ ಒತ್ತಾಯಕ್ಕೆ ಮಣಿದ ಸಿದ್ದರಾಮಯ್ಯ ಕೊನೆಗೂ ಪ್ರಸ್ತಾವನೆ ಸಲ್ಲಿಸಿದ್ದಾರೆ. ಆದರೆ ಅದರಲ್ಲಿ ಆದ್ಯತೆ ಅನುಸಾರ ಮೊದಲು ಮೈಸೂರು ನಂತರ ಹಾಸನದ ಹೆಸರು ನಮೂದಿಸಿ, ಐಐಟಿ ಸ್ಥಾಪನೆ ಮಾಡುವಂತೆ ನಮೂದಿಸಿದ್ದಾರೆ.

ತಮ್ಮ ತಂದೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಹಾಗೂ ಸಹೋದರ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಜೊತೆ ಡಿಸೆಂಬರ್ 21ರಂದು ಪ್ರಧಾನಿ ಮೋದಿ ಅವರನ್ನು ಭೇಟಿ ಮಾಡಿದ ವೇಳೆ ಹಾಸನದಲ್ಲಿ ಐಐಟಿ ಸ್ಥಾಪನೆ ಬೇಡಿಕೆ ಪತ್ರವನ್ನು ರೇವಣ್ಣ ಸಲ್ಲಿಸಿದ್ದಾರೆ. ಇದರ ಜೊತೆಗೆ ಸಿದ್ದರಾಮಯ್ಯರ ಪ್ರಸ್ತಾವನೆಯನ್ನೂ ಲಗತ್ತಿಸಿದ್ದಾರೆ. ಈ ವೇಳೆ ಕರ್ನಾಟಕದಲ್ಲಿ ಮತ್ತೊಂದು ಐಐಟಿ ಸ್ಥಾಪನೆಗೆ ನರೇಂದ್ರ ಮೋದಿ ಒಲವು ತೋರಿದ್ದಾರೆ ಎನ್ನಲಾಗಿದೆ.

ಮೈಸೂರಿನಲ್ಲಿ ಐಐಟಿ ಸ್ಥಾಪನೆಗೆ ಮುಖ್ಯಮಂತ್ರಿಗಳೇ ಉತ್ಸುಕತೆ ತೋರಿರುವುದರಿಂದ ನರೇಂದ್ರ ಮೋದಿ ಸಮ್ಮತಿಸುವ ಸಾಧ್ಯತೆ ಹೆಚ್ಚಿದೆ ಎನ್ನಲಾಗಿದೆ. ಈ ಮೂಲಕ ಮೈಸೂರಿನಲ್ಲಿ ಐಐಟಿ ಸ್ಥಾಪನೆ ಆಗಬೇಕೆಂಬ ಇಲ್ಲಿನ ಜನರ ಬಹಳ ಕಾಲದ ಆಸೆ ಈಡೇರುವುದೇ ಎಂದು ಕಾದು ನೋಡಬೇಕಿದೆ. ಐಐಟಿ(ಭಾರತೀಯ ತಂತ್ರಜ್ಞಾನ ಸಂಸ್ಥೆ) ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆಯ ಅಧೀನಕ್ಕೊಳಪಡಲಿದೆ. ಇಂಜಿನಿಯರಿಂಗ್, ತಾಂತ್ರಿಕ ಕ್ಷೇತ್ರದ ಉನ್ನತ ಹಾಗೂ ಉತ್ಕೃಷ್ಟ ವ್ಯಾಸಂಗ, ಸಂಶೋಧನೆ ಎರಡರಲ್ಲೂ ವಿಶ್ವಮನ್ನಣೆ ಪಡೆದಿರುವ ಐಐಟಿ, ಪ್ರತಿಭಾನ್ವಿತ ಪ್ರತಿಭೆಗಳ ರೂಪಿಸುತ್ತಿದೆ. ಗುಣಮಟ್ಟದ ಶಿಕ್ಷಣ ನೀಡುವ ಹಿನ್ನೆಲೆಯಲ್ಲಿ ಐಐಟಿ ಜಾಗತಿಕವಾಗಿ ಪ್ರಖ್ಯಾತಿ ಪಡೆದಿದೆ. ಐಐಟಿಯಲ್ಲಿ ವ್ಯಾಸಂಗ ಮಾಡುವುದು ಅಂದರೆ ಅದು ಪ್ರತಿಷ್ಠೆ ಹೆಮ್ಮೆಯ ಸಂಗತಿ. ಅಷ್ಟೆ ಅಲ್ಲದೆ ಐಐಟಿಯಲ್ಲಿ ವ್ಯಾಸಂಗ ಮಾಡಿದವರಿಗೆ ಖಾಸಗಿ ಕಂಪನಿಗಳಲ್ಲಿ ಕೋಟ್ಯಾಂತರ ರೂಪಾಯಿ ಪ್ಯಾಕೇಜ್ ದೊರೆಯಲಿದೆ. ಅದರಲ್ಲೂ ಐಐಟಿ ಓದಿದವರಿಗೆ ವಿದೇಶದಲ್ಲಿ ಭರಪೂರ ಅವಕಾಶ ದೊರೆಯಲಿದೆ. ಇನ್ಫೋಸಿಸ್ ಸಂಸ್ಥಾಪಕ ನಾರಾಯಣಮೂರ್ತಿ, ಇನ್ಫೋಸಿಸ್ ಪ್ರತಿಷ್ಠಾನದ ಸಂಸ್ಥಾಪಕಿ ಡಾ.ಸುಧಾಮೂರ್ತಿ ಕೂಡ ಐಐಟಿಯಲ್ಲಿ ಓದಿದವರು. ಐಐಟಿಯಲ್ಲಿ ವ್ಯಾಸಂಗ ಮಾಡಿದವರು ವಿಶ್ವದ ಪ್ರತಿಷ್ಠಿತ ಕಂಪನಿಗಳಲ್ಲಿ ಉನ್ನತ ಹುದ್ದೆಯಲ್ಲಿದ್ದಾರೆ. ಆ ಕಾರಣ ಐಐಟಿಗೆ ಹೆಚ್ಚು ಬೇಡಿಕೆ. ಬೆಂಗಳೂರು, ಧಾರವಾಡ ಸೇರಿದಂತೆ ದೇಶದಲ್ಲಿ ಒಟ್ಟು 23 ಐಐಟಿಗಳಿವೆ. ಇವುಗಳಲ್ಲಿ ಗರಿಷ್ಠ 20 ಸಾವಿರ ಸೀಟ್ ಲಭ್ಯವಿರಬಹುದು. 142 ಕೋಟಿ ಜನಸಂಖ್ಯೆಯ ಭಾರತದಲ್ಲಿ 23 ಐಐಟಿಯಲ್ಲಿರುವ 20 ಸಾವಿರ ಸೀಟ್‌ಗಳು ಸಾಕೇ? ಎಂಬ ಪ್ರಶ್ನೆ ಎದುರಾಗಿದೆ. ಈ ಹಿನ್ನೆಲೆಯಲ್ಲಿ ಮೈಸೂರಿನಲ್ಲಿ ಐಐಟಿ ಸ್ಥಾಪನೆಯ ಅಗತ್ಯತೆ ಇದೆ. ಆದರೆ ಕೇಂದ್ರ ಸರ್ಕಾರ ಕರ್ನಾಟಕದ ಜನರ ಬೇಡಿಕೆಯನ್ನು ಎಷ್ಟರ ಮಟ್ಟಿಗೆ ಗಂಭೀರವಾಗಿ ಪರಿಗಣಿಸುವುದೋ ಕಾದು ನೋಡಬೇಕಿದೆ.

## ಎಲ್ಲಾ 28 ಸ್ಥಾನ ಗೆಲ್ಲಲು ಪಣ

ಅಧಿಕಾರಕ್ಕೆ ಬಂದವರು, ಇಂದು ದುಡ್ಡು ಮಾಡುವುದರಲ್ಲೇ ನಿರತರಾಗಿದ್ದಾರೆ. ಕೇಂದ್ರ ಸರ್ಕಾರದ ಯೋಜನೆಗಳನ್ನು ಬೂತ್ ಮಟ್ಟದಿಂದಲೇ ಮನೆ-ಮನೆಗೆ ತಲುಪಿಸಿ, ರಾಜ್ಯ ಸರ್ಕಾರದ ಭ್ರಷ್ಟಾಚಾರವನ್ನು ಜನರ ಮುಂದೆ ಬಯಲು ಮಾಡಲು ಸಭೆ ತೀರ್ಮಾನಿಸಿದೆ. ಪದಾಧಿಕಾರಿಗಳು ಪ್ರತಿ ದಿನ 150 ಕಿಲೋ ಮೀಟರ್ ಪ್ರವಾಸ ಮಾಡಬೇಕು, ಜನರ ಸಮಸ್ಯೆಗಳನ್ನು ಆಲಿಸಬೇಕು, ಕನಿಷ್ಠ ಎರಡು ಬೂತ್‌ಗಳಿಗೆ ಭೇಟಿ ನೀಡಿ ಪಕ್ಷ ಸಂಘಟನೆ ಮಾಡಬೇಕು. ಹಬ್ಬ-ಹರಿದಿನಗಳಂದು ಮನೆಯಲ್ಲಿ ಕೂರುವ ಹಾಗಿಲ್ಲ, ಚುನಾವಣೆ ಮುಗಿಯುವವರೆಗೂ ವಿಶ್ರಮಿಸದೆ ಪಕ್ಷ ಸಂಘಟಿಸುವ ತೀರ್ಮಾನವನ್ನು ಸಭೆ ಕೈಗೊಂಡಿದೆ. ಸಭೆಯಲ್ಲಿ ಮಾತನಾಡಿದ ರಾಜ್ಯಾಧ್ಯಕ್ಷರು, ಕರ್ನಾಟಕದಲ್ಲಿ ಆಡಳಿತ ಚುಕ್ಕಾಣಿ ಹಿಡಿದ ಕಾಂಗ್ರೆಸ್ ಅಧಿಕಾರದ ಅಮಲಿನಲ್ಲಿ ತೇಲುತ್ತಿದೆ, ಇಂತಹ ಪಕ್ಷಕ್ಕೆ ತಕ್ಕ ಉತ್ತರ ನೀಡಿ ಪ್ರಧಾನಿ ನರೇಂದ್ರ ಮೋದಿ ಅವರ ಕೈ ಬಲಪಡಿಸುವ ಕೆಲಸ ನಮ್ಮಿಂದಲೇ ಆಗಬೇಕು ಎಂದರು. ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ಒಂದಾಗಿ ಚುನಾವಣೆ ಎದುರಿಸಿ 28 ಸ್ಥಾನಗಳನ್ನು ಗೆಲ್ಲಬೇಕು, ನಮಗಿರುವ ಈ ಸವಾಲು ದೊಡ್ಡದೇನಲ್ಲ. ಮೋದಿಜೀ ಅವರ ಪರವಾದ ವಾತಾವರಣ ದೇಶ ಮತ್ತು ರಾಜ್ಯದಲ್ಲಿದೆ, ಅವರ ಜನಪ್ರಿಯತೆಯನ್ನು ಮತಗಳನ್ನಾಗಿ ಪರಿವರ್ತಿಸಲು ನಾವು ಈಗಲೇ ಕಾರ್ಯಪ್ರವೃತ್ತರಾಗಬೇಕು. ರಾಷ್ಟ್ರದ ರಾಜಕೀಯ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವ ಫಲಿತಾಂಶ ಮುಂದಿನ ಲೋಕಸಭಾ ಚುನಾವಣೆಯಲ್ಲಿ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ರಾಜ್ಯ ಮತ್ತು ದೇಶದಲ್ಲಿ ಬಿಜೆಪಿ ಪರ ಅಲೆ ಇದೆ, ಆದರೂ ರಾಜ್ಯದಲ್ಲಿ ನಮ್ಮ ವಿರೋಧಿ ಕಾಂಗ್ರೆಸ್ ಅನ್ನು ಹಗುರವಾಗಿ ಪರಿಗಣಿಸಬಾರದು ಎಂದು ಕಿವಿಮಾತು ಹೇಳಿದ್ದಾರೆ. ಸ್ವಾತಂತ್ರ್ಯ ಬಂದ ಬಳಿಕ ಸಮಾಜದ ಕಟ್ಟಕಡೆಯ ವ್ಯಕ್ತಿಯ ಮನೆ ಬಾಗಿಲಿಗೆ ಯೋಜನೆಗಳನ್ನು ಕೇಂದ್ರದಲ್ಲಿನ ನಮ್ಮ ಸರ್ಕಾರ ತಲುಪಿಸಿದೆ, ಇದನ್ನು ಹಿಂದಿನ ಯಾವ ಸರ್ಕಾರವೂ ಮಾಡಿಲ್ಲ ಎಂದರು.

## ಬಿಜೆಪಿ ಪದಾಧಿಕಾರಿಗಳ ಆಗ್ರಹ

ಬಾಯಿ ಚಪಲಕ್ಕೆ ಮುಂದಾಗಿ ಜನರ ದಿಕ್ಕು ತಪ್ಪಿಸುವ ಮತ್ತು ಪ್ರತಿಪಕ್ಷಗಳವರ ಬಾಯಿಗೆ ಆಹಾರ ಮಾಡಿಕೊಡುತ್ತಿದ್ದಾರೆ ಎಂದು ಸಭೆಯಲ್ಲಿ ಕಿಡಿಕಾರಿದ್ದಾರೆ.

ಸಭೆಯ ಮಧ್ಯದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪ್ರಧಾನ ಕಾರ್ಯದರ್ಶಿ ಪಿ. ರಾಜೀವ್, ಪಕ್ಷದಲ್ಲಿ ಇತ್ತೀಚೆಗೆ ನಡೆಯುತ್ತಿರುವ ಎಲ್ಲ ಬೆಳವಣಿಗೆ ಬಗ್ಗೆ ಸಭೆ ಸುದೀರ್ಘ ಚರ್ಚೆ ಮಾಡಲಾಗಿದೆ ಎಂದರು. ನಾಲ್ಕು ಗೋಡೆಗಳ ಮಧ್ಯೆ ನಡೆದಿರುವ ಚರ್ಚೆಗಳ ವಿವರವನ್ನು ಬಹಿರಂಗಗೊಳಿಸಲು ಸಾಧ್ಯವಿಲ್ಲ, ರಾಜ್ಯದಲ್ಲಿ ಪಕ್ಷದ ಘನತೆಗೆ ಚ್ಯುತಿ ಬರುವಂತಹ ಯಾವ ಚಟುವಟಿಕೆಗಳನ್ನು ಪಕ್ಷ ಸಹಿಸುವುದಿಲ್ಲ. ಸಭೆಯಲ್ಲಿ ಗಂಭೀರವಾದಂತಹ ಚರ್ಚೆ ನಡೆದಿದ್ದು ಕೇಂದ್ರ ನಾಯಕರು ಸೂಕ್ತ ಸಮಯದಲ್ಲಿ ಸೂಕ್ತ ನಿರ್ಧಾರಗಳನ್ನು ಕೈಗೊಳ್ಳುತ್ತಾರೆಂದು ಯಾರ ಹೆಸರನ್ನೂ ಪ್ರಸ್ತಾಪಿಸದೆ ತಿಳಿಸಿದರು.

## ಮೈಸೂರಲ್ಲಿ ಕೊರೊನಾದಿಂದ ಒಬ್ಬರು ಸಾವು

ವರದಿಯಾಗಿದ್ದು, ಸಕ್ರಿಯ ಪ್ರಕರಣಗಳ ಸಂಖ್ಯೆ 479ಕ್ಕೆ ಏರಿಕೆಯಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ತಿಳಿಸಿದೆ. ಇಂದು ರಾಜ್ಯದಲ್ಲಿ 7262 ಕೋವಿಡ್ ಪರೀಕ್ಷೆ ನಡೆಸಲಾಗಿದೆ. ಪಾಸಿಟಿವ್ ಪ್ರಮಾಣ ಶೇ. 1.41 ರಷ್ಟು ಇದೆ. ಬೆಂಗಳೂರಿನಲ್ಲಿ 2,321 ಮಂದಿಗೆ ಕೋವಿಡ್ ಪರೀಕ್ಷೆ ನಡೆಸಲಾಗಿದ್ದು, ಆ ಪೈಕಿ 80 ಮಂದಿಗೆ ಸೋಂಕು ದೃಢಪಟ್ಟಿದೆ. ಶಿವಮೊಗ್ಗ, ಚಾಮರಾಜನಗರ ಮತ್ತು ದಕ್ಷಿಣ ಕನ್ನಡದಲ್ಲಿ ತಲಾ 2 ಪ್ರಕರಣ, ವಿಜಯಪುರದಲ್ಲಿ 1, ತುಮಕೂರಿನಲ್ಲಿ 1, ಮೈಸೂರಿನಲ್ಲಿ 3, ಮಂಡ್ಯದಲ್ಲಿ 8 ಪಾಸಿಟಿವ್ ಪ್ರಕರಣಗಳು ವರದಿಯಾಗಿವೆ. ಸೋಂಕಿತರಲ್ಲಿ 422 ಮಂದಿ ಮನೆ ಆರೈಕೆಗೆ ಒಳಗಾಗಿದ್ದರೆ, 57 ಮಂದಿಗೆ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. 19 ಮಂದಿ ತೀವ್ರ ನಿಗಾ ಘಟಕದಲ್ಲಿ ಹಾಗೂ 38 ಮಂದಿ ಸಾಮಾನ್ಯ ವಾರ್ಡ್‌ನಲ್ಲಿ ಇದ್ದಾರೆ. ಸೋಂಕಿತರಲ್ಲಿ 87 ಮಂದಿ ಇಂದು ಚೇತರಿಸಿಕೊಂಡಿದ್ದಾರೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ತಿಳಿಸಿದೆ.

## ಪಿಂಕ್ ಇ-ಸ್ಕೂಟರ್ ಭಾಗ್ಯ

ಪಾಲಿಕೆ ಕಮಿಷ್ನರ್ ಅಶಾದ್ ಉರ್ ರೆಹಮಾನ್ ಷರೀಫ್ ಅವರು ಇ-ಪಿಂಕ್ ಸ್ಕೂಟರ್‌ಗಳನ್ನು ಪೂರೈಸಲು ಮುಂದಾಗಿದ್ದಾರೆ.

**ಪುರುಷರಿಗೂ...:** ಎರಡನೇ ಹಂತದಲ್ಲಿ ಪಾಲಿಕೆಯ ಪುರುಷ ಪೌರ ಕಾರ್ಮಿಕರಿಗೂ ಎಲೆಕ್ಟ್ರಾನಿಕ್ ಬೈಕ್‌ಗಳನ್ನು ವಿತರಿಸಲು ಮೈಸೂರು ಮಹಾನಗರ ಪಾಲಿಕೆಯು ಚಿಂತನೆ ನಡೆಸಿದೆ. ಅದರಂತೆ ಖಾಯಂ ಹಾಗೂ ನೇರ ಪಾವತಿಯಡಿ ಕೆಲಸ ಮಾಡುತ್ತಿರುವ ಪುರುಷ ಪೌರ ಕಾರ್ಮಿಕರ ಪಟ್ಟಿ ತಯಾರಿಸಲಾಗುತ್ತಿದ್ದು, ದ್ವಿಚಕ್ರ ವಾಹನ ಚಾಲನಾ ತರಬೇತಿಗೂ ತಯಾರಿ ನಡೆಸಲಾಗುತ್ತಿದೆ.

**65 ಪಿಂಕ್ ಆಟೋ:** ಮಹಾನಗರ ಪಾಲಿಕೆ ವ್ಯಾಪ್ತಿಯ ಎಲ್ಲಾ 65 ವಾರ್ಡ್‌ಗೊಂದರಂತೆ ನಿರುದ್ಯೋಗಿ ಮಹಿಳೆಯರಿಗೆ ಪ್ರಯಾಣಿಕರ ಪಿಂಕ್ ಎಲೆಕ್ಟ್ರಿಕ್ ಆಟೋರಿಕ್ಷಾ (Pink Electric Passenger Auto)ಗಳನ್ನು ವಿತರಿಸಲು ನಿರ್ಧರಿಸಲಾಗಿದೆ. ಮಹಿಳಾ ಸಬಲೀಕರಣ, ಆರ್ಥಿಕ ಬಲವರ್ಧನೆ, ಸ್ವಾವಲಂಬನೆಗಾಗಿ ಪ್ರಯಾಣಿಕರ ಆಟೋರಿಕ್ಷಾ ವಿತರಿಸುವ ಮೂಲಕ ಮಹಿಳೆಯರು ಸ್ವಂತ ಉದ್ಯೋಗ ಮಾಡಿ ತಮ್ಮ ಕಾಲಿನ ಮೇಲೆ ನಿಲ್ಲುವಂತೆ ಮಾಡುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಮೊದಲು ಡ್ರೈವಿಂಗ್ ಸ್ಕೂಲ್‌ಗಳಲ್ಲಿ ಆಟೋ ಚಾಲನಾ ತರಬೇತಿ ಮತ್ತು ಕೌಶಲ್ಯ ತರಬೇತಿ ನೀಡಿ, ಡ್ರೈವಿಂಗ್ ಲೈಸನ್ಸ್‌ನೊಂದಿಗೆ ಇ-ಆಟೋರಿಕ್ಷಾಗಳನ್ನು ವಿತರಿಸಲಾಗುವುದು. ಪ್ರತೀ ವಾರ್ಡ್‌ನಲ್ಲಿ ಓರ್ವ ಮಹಿಳೆಯನ್ನು ಗುರ್ತಿಸಿ ಆಸಕ್ತಿ ಇರುವವರನ್ನು ಈ ಯೋಜನೆಯ ಫಲಾನುಭವಿಯನ್ನಾಗಿ ಮಾಡಲು ಪಾಲಿಕೆಯು ಆಯ್ಕೆ ಪ್ರಕ್ರಿಯೆ ನಡೆಸುತ್ತಿದೆ.

**ಎಸ್ಸಿ, ಎಸ್ಟಿ ಯುವಕರಿಗೆ:** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ 30 ಯುವಕರಿಗೆ ತಲಾ ಒಂದೊಂದು ಆಟೋ ವಿತರಿಸಲು ಮೈಸೂರು ಮಹಾನಗರ ಪಾಲಿಕೆಯು ಸಿದ್ಧತೆ ನಡೆಸುತ್ತಿದೆ. ಸ್ವಯಂ ಉದ್ಯೋಗ ಸೃಷ್ಟಿಸಿ ಜೀವನ ನಡೆಸಲು ಅನುಕೂಲವಾಗುವಂತೆ ಎಸ್ಸಿ, ಎಸ್ಟಿ ಸಮುದಾಯದ ಯುವಕರಿಗೆ ಆಟೋ ವಿತರಿಸುವ ಯೋಜನೆ ಇದಾಗಿದೆ.

### ಮೈಸೂರು-ಕೊಡಗು ಲೋಕಸಭಾ ಕ್ಷೇತ್ರ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿ 275ರ ವಿವಿಧ ಭಾಗಗಳಲ್ಲಿ

# 28 ಕೋಟಿ ವೆಚ್ಚದಲ್ಲಿ ರಸ್ತೆ ಸುರಕ್ಷತೆ, ಅಭಿವೃದ್ಧಿ ಕಾಮಗಾರಿಗೆ ಕೇಂದ್ರದ ಅನುಮೋದನೆ

### ಕೇಂದ್ರ ಸಚಿವ ನಿತಿನ್ ಗಡ್ಕರಿಯವರಿಗೆ ಧನ್ಯವಾದ ಅರ್ಪಿಸಿದ ಸಂಸದ ಪ್ರತಾಪ್ ಸಿಂಹ



ಮೈಸೂರು,ಡಿ.27(ಪಿಎಂ)- ಸಂಸದ ಪ್ರತಾಪ್ ಸಿಂಹ ಅವರ ಮನವಿಗೆ ಸ್ಪಂದಿಸಿ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ 275ರ ವಿವಿಧ ಭಾಗಗಳಲ್ಲಿ 28 ಕೋಟಿ ರೂ. ವೆಚ್ಚದಲ್ಲಿ ರಸ್ತೆ ಸುರಕ್ಷತೆ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಕೇಂದ್ರ ಭೂ ಸಾರಿಗೆ, ಹೆದ್ದಾರಿ ಮತ್ತು ಸಾರಿಗೆ ಸಚಿವ ನಿತಿನ್ ಗಡ್ಕರಿ ಅನುಮೋದನೆ ನೀಡಿದ್ದಾರೆ.

ಸದರಿ ರಾಷ್ಟ್ರೀಯ ಹೆದ್ದಾರಿಯ ಅಪಘಾತ ವಲಯಗಳಲ್ಲಿ ರಸ್ತೆ ಸುರಕ್ಷತೆ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವಂತೆ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರನ್ನು ಹಲವು ಬಾರಿ ಭೇಟಿ ಮಾಡಿ ಸಂಸದ ಪ್ರತಾಪ್ ಸಿಂಹ ಮನವಿ ಸಲ್ಲಿಸಿದ್ದರು. ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿರುವ ಕೇಂದ್ರ ಸಚಿವರು, ಕಾಮಗಾರಿಗಳಿಗೆ ಅನು ಮೋದನೆ ನೀಡಿದ್ದಾರೆ ಎಂದು ಸಂಸದರ ಕಚೇರಿ ಪ್ರಕಟಣೆ ತಿಳಿಸಿದೆ.

ಕೊಡಗು ಜಿಲ್ಲೆ ಕುಶಾಲನಗರ ವ್ಯಾಪ್ತಿಯಲ್ಲಿ ಹಾದುಹೋಗುವ ರಾಷ್ಟ್ರೀಯ ಹೆದ್ದಾರಿ 275ರಲ್ಲಿ ಕಿ.ಮೀ. 128.150ರಿಂದ ಕಿ.ಮೀ. 130.150ರವರೆಗೆ ಸುಮಾರು 1.30 ಕಿ.ಮೀ. ಉದ್ದದ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು 7 ಕೋಟಿ ರೂ. ವೆಚ್ಚದಲ್ಲಿ ಕೈಗೊಳ್ಳಲು ಅನುಮೋದನೆ ನೀಡಲಾಗಿದೆ.

ಅಂತೆಯೇ ಮೈಸೂರು ಜಿಲ್ಲೆಯ ಹುಣಸೂರು ತಾಲೂಕು ವ್ಯಾಪ್ತಿಯಲ್ಲಿ ಹಾದುಹೋಗುವ ರಾಷ್ಟ್ರೀಯ ಹೆದ್ದಾರಿ 275ರಲ್ಲಿ ಕಿ.ಮೀ. 161.380ರಿಂದ ಕಿ.ಮೀ. 163.500 (ಚಿಲ್ಕುಂದ), ಕಿ.ಮೀ. 169.00ರಿಂದ ಕಿ.ಮೀ. 171.825 (ಯಶೋಧರಪುರ), ಕಿ.ಮೀ. 190.400ರಿಂದ ಕಿ.ಮೀ. 193.400ರವರೆಗೆ (ಬಿಳಿಕೆರೆ, ಕೆ.ಆರ್.ನಗರ ಜಂಕ್ಷನ್) ಸುಮಾರು 7.95 ಕಿ.ಮೀ. ಉದ್ದದ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು 15 ಕೋಟಿ ರೂ. ವೆಚ್ಚದಲ್ಲಿ ಕೈಗೊಳ್ಳಲು ಅನುಮೋದಿಸಲಾಗಿದೆ.

ಅದೇ ರೀತಿ ಮೈಸೂರು ಜಿಲ್ಲೆ ಹುಣಸೂರು ತಾಲೂಕು ವ್ಯಾಪ್ತಿಯಲ್ಲಿ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿ 275ರ ಕಿ.ಮೀ. 171.560ರಲ್ಲಿ ಸುಮಾರು 1.00 ಕಿ.ಮೀ. ಉದ್ದದ ರಸ್ತೆಯ ಜಂಕ್ಷನ್ ಅಭಿವೃದ್ಧಿಪಡಿಸುವ ಕಾಮಗಾರಿಯನ್ನು 5 ಕೋಟಿ ರೂ. ವೆಚ್ಚದಲ್ಲಿ ನಡೆಸಲು ಮಂಜೂರಾತಿ ನೀಡಲಾಗಿದೆ. ಅಂತೆಯೇ ಮೈಸೂರು ಜಿಲ್ಲೆ ಹುಣಸೂರು ತಾಲೂಕು ವ್ಯಾಪ್ತಿಯಲ್ಲಿ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿ 275ರ ಕಿ.ಮೀ. 190.600ರಿಂದ ಕಿ.ಮೀ. 193.500ರವರೆಗೆ ಸುಮಾರು 2.9 ಕಿ.ಮೀ. ಉದ್ದದ ರಸ್ತೆಬದಿಯಲ್ಲಿ ಆರ್‌ಸಿಸಿ ಡ್ರೈನ್ ನಿರ್ಮಾಣದ ಕಾಮಗಾರಿಯನ್ನು 1 ಕೋಟಿ ರೂ. ವೆಚ್ಚದಲ್ಲಿ ಕೈಗೆತ್ತಿಕೊಳ್ಳಲು ಅನುಮೋದಿಸಲಾಗಿದೆ. ತಮ್ಮ ಕ್ಷೇತ್ರದ ಜನತೆಯ ಪರವಾಗಿ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರಿಗೆ ಸಂಸದ ಪ್ರತಾಪ್ ಸಿಂಹ ಧನ್ಯವಾದ ತಿಳಿಸಿದ್ದಾರೆ.

## ಜ.23ಕ್ಕೆ ಕೆಎಸ್‌ಆರ್‌ಟಿಸಿ ನೌಕರರಿಂದ ಸಿಎಂಗೆ ಅಭಿನಂದನೆ



ಮೈಸೂರು, ಡಿ.27(ಎಂಟಿವೈ)- ರಾಜ್ಯ ಸರ್ಕಾರ ಜಾರಿಗೆ ತಂದಿರುವ ಗ್ಯಾರಂಟಿ ಯೋಜನೆಯಲ್ಲಿ ಒಂದಾದ 'ಶಕ್ತಿ ಯೋಜನೆ'ಯಿಂದಾಗಿ ರಾಜ್ಯ ಸಾರಿಗೆ ಸಂಸ್ಥೆ ಪುನಶ್ಚೇತನಗೊಂಡಿರುವ ಹಿನ್ನೆಲೆಯಲ್ಲಿ ಜ.23ರಂದು ಮೈಸೂರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಒಕ್ಕೂಟದ ವತಿಯಿಂದ ಅಭಿನಂದಿಸಲಾಗುತ್ತಿದೆ ಎಂದು ಒಕ್ಕೂಟದ ಗೌರವಾಧ್ಯಕ್ಷ ಬಿ.ಎಸ್. ಸುರೇಶ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಕ್ತಿ ಯೋಜನೆ ಜಾರಿಗೊಂಡ ಬಳಿಕ ರಾಜ್ಯದಲ್ಲಿ ಸುಮಾರು 128 ಕೋಟಿ ಮಹಿಳೆಯರು ಪ್ರಯಾಣ ಮಾಡಿದ್ದಾರೆ. ಇದರಿಂದಾಗಿ ಸಾರಿಗೆ ಸಂಸ್ಥೆಗೆ ಸುಮಾರು ಆರು ಸಾವಿರ ಕೋಟಿ ಆದಾಯ ಬಂದಿದೆ. ಈ ಹಿಂದೆಲ್ಲ ಆದಾಯದ ಕೊರತೆಯಿಂದಾಗಿ ವೇತನವನ್ನು ತಿಂಗಳುಗಳ ವಿಳಂಬವಾಗಿ ನೀಡಲಾಗುತ್ತಿತ್ತು. ಆದರೆ, ಈಗ ಶಕ್ತಿ ಯೋಜನೆ ಹಣ ಸಂಸ್ಥೆಗೆ ಸರ್ಕಾರದಿಂದ ಬರುತ್ತಿರುವುದರಿಂದಾಗಿ ಸಕಾಲಕ್ಕೆ ವೇತನ ಪಾವತಿ ಮಾಡುವಂತಾಗಿದೆ. ಇದು ಸಂಸ್ಥೆ ನೌಕರರ ಕುಟುಂಬಗಳಿಗೂ ಒಳಿತುಂಟು ಮಾಡಿರುವ ಕಾರಣ ಸಿಎಂ ಸಿದ್ದರಾಮಯ್ಯ ಅವರನ್ನು ಅಭಿನಂದಿಸುತ್ತಿರುವುದಾಗಿ ಹೇಳಿದರು. ಈ ಸಮಾರಂಭದಲ್ಲಿ ರಾಜ್ಯದ ಮೂಲೆ ಮೂಲೆಗಳಿಂದ ಸಂಸ್ಥೆಯ ಸುಮಾರು 12 ಸಾವಿರ ಮಂದಿ ನೌಕರರು, ಅವರ ಕುಟುಂಬದವರು ಪಾಲ್ಗೊಳ್ಳುತ್ತಿದ್ದಾರೆ. ನಗರದ ವಸ್ತು ಪ್ರದರ್ಶನ ಮೈದಾನ ಇಲ್ಲವೇ ಮಹಾರಾಜ ಕಾಲೇಜು ಮೈದಾನದಲ್ಲಿ ಈ ಸಮಾರಂಭ ನಡೆಯಲಿದೆ ಎಂದು ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ಪದಾಧಿಕಾರಿಗಳಾದ ಎಂ. ಆನಂದಕುಮಾರ್, ಸಿ.ಡಿ.ವಿಶ್ವನಾಥ್, ಆರ್.ಚಂದ್ರಶೇಖರ್, ಜವರೇಗೌಡ, ಶಿವಕುಮಾರ್ ಇದ್ದರು.



ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡ ಹಾಗೂ ಜಿಲ್ಲಾ ಪಂಚಾಯತ್ ಮಾಜಿ ಸದಸ್ಯರಾದ ರಾಕೇಶ್ ಪಾಪಣ್ಣ ಅವರ ಹುಟ್ಟುಹಬ್ಬವನ್ನು ಆಚರಿಸಿ, ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಕಾಂಗ್ರೆಸ್ ಯುವ ಮುಖಂಡ ಶ್ರೀಧರ್ ಮಾಯಪ್ಪ, ಕಾರ್ತಿಕ್ ಸಿಂಗ್, ಉದಯ್, ಪ್ರಕಾಶ್, ಪ್ರವೀಣ್, ರವಿ, ಪ್ರಶಾಂತ್, ಶಿವಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

### ನಂಜನಗೂಡಲ್ಲಿ ಮಹಿಷಾಸುರನಿಗೆ ಅವಮಾನ: ಆರೋಪ

# ದೇವಾಲಯದ ಆಡಳಿತ ಮಂಡಳಿ ವಿರುದ್ಧ ಕ್ರಮಕ್ಕೆ ಆಗ್ರಹ



ಮೈಸೂರು, ಡಿ.27(ಎಂಟಿವೈ)- ನಂಜನಗೂಡು ಶ್ರೀಕಂಠೇಶ್ವರ ದೇವಾಲಯದಲ್ಲಿ ಧನುರ್ಮಾಸ ಪೂಜೆಯಲ್ಲಿ ಮಹಿಷಾಸುರನಿಗೆ ಅವಮಾನ ಮಾಡಿರುವ ದೇವಾಲಯದ ಆಡಳಿತ ಮಂಡಳಿ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಮಹಿಷ ದಸರಾ ಆಚರಣೆ ಸಮಿತಿ ಅಧ್ಯಕ್ಷ, ಮಾಜಿ ಮೇಯರ್ ಪುರುಷೋತ್ತಮ್ ಒತ್ತಾಯಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಭಾಗದಲ್ಲಿ ನಮ್ಮ ರಾಕ್ಷಸ ಸಂಸ್ಕೃತಿಯನ್ನು ಅಪಮಾನಿಸುವ ಹಾಗೂ ರಾಕ್ಷಸ ಸಂಸ್ಕೃತಿಯನ್ನು ಸುಡುವ ಕೆಲಸ ನಡೆಸಲಾಗುತ್ತಿದೆ. ಧನುರ್ಮಾಸದ ಆಚರಣೆ ನೆಪದಲ್ಲಿ ರಾಕ್ಷಸರ ಚಿತ್ರಗಳನ್ನು ರಸ್ತೆ ಮೇಲೆ ರಂಗೋಲಿಯಂತೆ ಬಿಡಿಸಿ, ಭಾವಚಿತ್ರದ ಬ್ಯಾನರ್ ಹಾಸಿ ತುಳಿದು ವಿಕೃತಿ ಪ್ರದರ್ಶಿಸಲಾಗಿದೆ. ಈ ಹಿಂದಿನಿಂದಲೂ ನಾವು ಮಹಿಷನನ್ನು ಆರಾಧಿಸುವ ಸಂಸ್ಕೃತಿ ಆಚರಿಸುತ್ತಿದ್ದೇವೆ. ಆದರೆ, ನಮ್ಮ ಆಚರಣೆ ಹಾಗೂ ಸಂಸ್ಕೃತಿಯನ್ನು ದಮನ ಮಾಡುವ ಸಂಚು ನಿರಂತರವಾಗಿ ನಡೆಸಲಾಗುತ್ತಿದೆ. ನಂಜನಗೂಡಿನಲ್ಲಿ ಮಹಿಷನ ಚಿತ್ರವನ್ನು ರಂಗೋಲಿಯಲ್ಲಿ ಬರೆದು, ಅದನ್ನು ಚಪ್ಪಲಿ ಕಾಲಿನಿಂದ ತುಳಿದು ಅಪಮಾನಿಸಿರುವುದು ಸರಿಯಲ್ಲ. ಇದನ್ನು ವಿರೋಧಿಸಿದ ಕೆಲವರ ಮೇಲೆ ದೂರು ನೀಡಲಾಗಿದೆ. ಇದಕ್ಕೆ ಪ್ರತಿಯಾಗಿ ನಾವು ದೂರು ನೀಡಲಿದ್ದೇವೆ. ಘಟನೆಗೆ ಕಾರಣರಾದವರ ವಿರುದ್ಧ ಪೊಲೀಸ್ ಇಲಾಖೆ ಕಠಿಣ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

**ಜಾತಿ ಜನಗಣತಿ ವರದಿ ಜಾರಿಗೊಳಿಸಬೇಕು:** ರಾಜ್ಯದಲ್ಲಿ ಜಾತಿ ಜನಗಣತಿ ವರದಿ ಕೂಡಲೇ ಜಾರಿಯಾಗಬೇಕು. ಅದನ್ನು ಬಹಿರಂಗಪಡಿಸದಿದ್ದರೆ ಸಾಮಾಜಿಕ ನ್ಯಾಯ ಕಲ್ಪಿಸಲು ಸಾಧ್ಯವಿಲ್ಲ. ಕಾಂತರಾಜ್ ವರದಿ ಜಾರಿ ಮಾಡುವ ಶಕ್ತಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವ ರಿಗೆ ಮಾತ್ರ ಇದೆ. ಈ ಹಿನ್ನೆಲೆಯಲ್ಲಿ ಜಾತಿ ಜನಗಣತಿ ವರದಿ ಜಾರಿಗೊಳಿಸಬೇಕು ಎಂದು ಆಗ್ರಹಿಸಿದರು.

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದಲ್ಲಿ ನಡೆದ ಹನುಮ ಸಂಕೀರ್ತನ ಯಾತ್ರೆಯಲ್ಲಿ ಕಲ್ಲಡ್ಕ ಪ್ರಭಾಕರ ಭಟ್, ಮುಸಲ್ಮಾನ ಮಹಿಳೆಯರ ಬಗ್ಗೆ ಅವಹೇಳನಕಾರಿ ಮಾತುಗಳನ್ನಾಡಿದ್ದಾರೆ. ನಿಂದನಾತ್ಮಕ ಪದ ಬಳಸಿ ಟೀಕಿಸಿರುವ ಕಲ್ಲಡ್ಕ ಪ್ರಭಾಕರ್ ಭಟ್ ವಿರುದ್ಧ ಕ್ರಮಕೈಗೊಳ್ಳಬೇಕು ಎಂದರು.

ಪ್ರಗತಿಪರ ಚಿಂತಕ ಪ್ರೊ.ಮಹೇಶ್ ಚಂದ್ರಗುರು ಮಾತನಾಡಿ, ದೇಶದಲ್ಲಿ ಮತ್ತೊಂದು ಮಂಡಲ್ ಚಳವಳಿಯ ಅಗತ್ಯವಿದೆ. ಈ ದಿನಗಳಲ್ಲಿ ನವ ಮಂಡಲ್ ಚಳವಳಿ ನಡೆಯಬೇಕಾದ ಅಗತ್ಯವಿದೆ. ಧರ್ಮಾತೀತ, ಜಾತ್ಯತೀತವಾಗಿ ಎಲ್ಲರಿಗೂ ಸವಲತ್ತು ಸಿಗಬೇಕಾದರೆ ಇಡೀ ದೇಶದಾದ್ಯಂತ ಜಾತಿ ಗಣತಿ ನಡೆಯಬೇಕು. ಅದಕ್ಕೆ ಅನುಗುಣವಾಗಿ ಎಲ್ಲರಿಗೂ ಸವಲತ್ತು ಸಿಗಬೇಕು. ಇದೇ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರು ಸಾಮಾಜಿಕ, ಆರ್ಥಿಕ ಸಮಾನತೆಗೆ ಬದ್ಧರಾಗಿರಬೇಕು. ಜಾತಿ ಆಧಾರಿತ ಆರ್ಥಿಕ, ಸಾಮಾಜಿಕ ಮೀಸಲಾತಿಯಲ್ಲಿ ಮೂಲ ನಿವಾಸಿಗಳಾದ ಬಹುಜನರ ಭವಿಷ್ಯ ಅಡಗಿದೆ. ಸಂಸತ್ತಿನಲ್ಲಿ ನಡೆದ ಭದ್ರತಾ ವೈಫಲ್ಯ ಇಂತಹ ಅಸಮಾನತೆಯ ಉತ್ಪನ್ನ. ಇದು ದೇಶ ರಕ್ಷಿಸುವಲ್ಲಿ ಬಿಜೆಪಿ ಸರ್ಕಾರದ ವೈಫಲ್ಯ ತೋರುತ್ತದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಪ್ರಧಾನಿ ಮೋದಿ ಅವರು ಜನರನ್ನು ಮೌಢ್ಯಕ್ಕೆ ತಳ್ಳುತ್ತಾ ಶ್ರೀಮಂತರಿಗಾಗಿ ಸರ್ಕಾರ ನಡೆಸುತ್ತಿದ್ದಾರೆ. ಅಯೋಧ್ಯೆಯಲ್ಲಿ ರಾಮ ಮಂದಿರ ಕಟ್ಟಿಸುತ್ತಿದ್ದೀರಾ. ನಿಜ. ಆದರೆ, ನಿಮ್ಮ ಆದ್ಯತೆ ಮಂದಿರವೋ, ಜನರ ಉದ್ಧಾರವೋ ಎಂಬುದನ್ನು ಸ್ಪಷ್ಟಪಡಿಸಿ. ದೇಶದ ಭವಿಷ್ಯ ನಿರ್ಮಾಣದಲ್ಲಿ ಮೋದಿಜಂ ದೊಡ್ಡ ತಡೆಯಾಗಿದೆ. ಬರುವ ಲೋಕಸಭಾ ಚುನಾವಣೆಯಲ್ಲಿ ಜನರು ಬಹು ಪ್ರೀತಿಯಿಂದ ಅವರನ್ನು ಕಿತ್ತುಹಾಕಬೇಕು. ಮೋದಿ ಮುಕ್ತ ಭಾರತವಾಗಲಿ ಎಂದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಸಿದ್ದಸ್ವಾಮಿ, ಸೋಮಯ್ಯ ಮಲೆಯೂರು, ಅಹಿಂದ ಜವರಪ್ಪ ಇದ್ದರು.

## ಎಂಐಟಿ ಮೈಸೂರಿನಲ್ಲಿ AICTE ಪ್ರಾಯೋಜಿತ ಆರು ದಿನಗಳ ಪ್ರಾಧ್ಯಾಪಕರ ಪುನಶ್ಚೇತನ ಕಾರ್ಯಕ್ರಮ

ಮೈಸೂರು, ಡಿ.27-ತಂತ್ರಜ್ಞಾನವು ವಿಕಸನಗೊಂಡಿದ್ದರೂ ಮತ್ತು ಪ್ರಪಂಚವು ಕೃತಕ ಬುದ್ಧಿಮತ್ತೆ (AI) ಮತ್ತು ಇಂಟರ್ನೆಟ್ ಆಫ್ ಥಿಂಗ್ಸ್ (IOT) ಅನ್ನು ಅನ್ವೇಷಿಸುತ್ತಿದೆಯಾದರೂ, ಆರೋಗ್ಯ ಮತ್ತು ಕ್ಷೇಮದ ಕ್ಷೇತ್ರದಲ್ಲಿ ಅವುಗಳ ಉಪಯುಕ್ತತೆ ಇನ್ನೂ ಬಹಳಷ್ಟು ವಿಸ್ತಾರವಾಗಬೇಕಿದೆ. ಈ ಅಂತರವನ್ನು ನಿವಾರಿಸಲು, ಮಹಾರಾಜ ತಾಂತ್ರಿಕ ಮಹಾವಿದ್ಯಾಲಯ ಮೈಸೂರು ಸಂಸ್ಥೆಯ ವಿದ್ಯುನ್ಮಾನ ವಿಭಾಗ ಹಾಗೂ ಮಾಹಿತಿ ವಿಜ್ಞಾನ ವಿಭಾಗಗಳು ಜಂಟಿಯಾಗಿ ಇತ್ತೀಚೆಗೆ ಆರು ದಿನಗಳ ಕಾಲ AICTE ಪ್ರಾಯೋಜಿತ ಪ್ರಾಧ್ಯಾಪಕರ ಪುನಶ್ಚೇತನ ಕಾರ್ಯಕ್ರಮವನ್ನು ಆಯೋಜಿಸಿತ್ತು ವಿವಿಧ ಸಂಸ್ಥೆಗಳ ಅಧ್ಯಾಪಕರು, ಸಂಶೋಧನಾ ವಿದ್ವಾಂಸರು ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು ಸೇರಿ 58 ಜನರು ಭಾಗವಹಿಸಿದ್ದರು. ಕಾರ್ಯಾಗಾರದ ತರಗತಿಗಳನ್ನು ಕೈಗಾರಿಕೆ, ಶಿಕ್ಷಣ ಸಂಸ್ಥೆ ಮತ್ತು ವೃತ್ತಿಪರ ಸಂಸ್ಥೆಗಳ ಪ್ರಖ್ಯಾತಸಂಪನ್ಮೂಲ ವ್ಯಕ್ತಿಗಳು ನಿರ್ವಹಿಸಿದ್ದರು ಮತ್ತು ಸಂಬಂಧಿತ ಉದ್ದಿಮೆಗಳ ಭೇಟಿಯನ್ನು ಸಹಪಠ್ಯ ಕ್ರಮವು ಒಳಗೊಂಡಿತ್ತು.

## ಕುಡಿಯುವ ನೀರಿನ ಯೋಜನೆಗಾಗಿ ಜಾಗದ ಸಮಸ್ಯೆ ನಿವಾರಣೆ ಮಾಡಿ



ಮೈಸೂರು, ಡಿ.27(ಬಿಎಲ್‌ಯು)- ಕುಡಿಯುವ ನೀರು ಹಾಗೂ ಒಳಚರಂಡಿ ಯೋಜನೆ ಕೈಗೆತ್ತಿಕೊಳ್ಳುವ ನಿಟ್ಟಿನಲ್ಲಿ ಎದುರಾಗಿರುವ ಜಾಗದ ಸಮಸ್ಯೆಯನ್ನು ವಾರದಲ್ಲಿ ನಿವಾರಣೆ ಮಾಡುವಂತೆ ಅಪರ ಜಿಲ್ಲಾಧಿಕಾರಿ ಲೋಕನಾಥ್ ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ.

ಮೈಸೂರಿನ ಸಿದ್ಧಾರ್ಥ ಬಡಾವಣೆಯ ನೂತನ ಜಿಲ್ಲಾಧಿಕಾರಿ ಕಚೇರಿಯಲ್ಲಿ ಇಂದು ನಡೆದ ಇಲಾಖಾ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಬರಗಾಲದ ಕಾರಣ ಕುಡಿಯುವ ನೀರಿನ ಯೋಜನೆ ಪೂರ್ಣಗೊಳಿಸುವಂತೆ ಸರ್ಕಾರದಿಂದ ನಿರ್ದೇಶನವಿದೆ. ಆದ ಕಾರಣ ಜಾಗದ ಸಮಸ್ಯೆಯನ್ನು ತ್ವರಿತವಾಗಿ ನಿವಾರಣೆ ಮಾಡುವಂತೆ ಸೂಚನೆ ನೀಡಿದರು.


ಈಗಾಗಲೇ ಕುಡಿಯುವ ನೀರಿನ ಟ್ಯಾಂಕ್ ನಿರ್ಮಾಣ ಮಾಡಲು ಜಾಗ ಗುರುತಿಸಲಾಗಿದೆ. ಆದರೆ ಕೆಲವು ಕಾನೂನಾತ್ಮಕ ತೊಡಕುಗಳು ಎದುರಾಗಿದೆ ಎಂದು ದೂರಲಾಗಿದೆ. ಈ ಕಾರಣದಿಂದ ಏನೇ ಸಮಸ್ಯೆ ಇದ್ದರೂ ತ್ವರಿತವಾಗಿ ನಿವಾರಣೆ ಮಾಡಿ ಕಾನೂನಾತ್ಮಕವಾಗಿ ಜಾಗ ಹಸ್ತಾಂತರ ಮಾಡಬೇಕು ಎಂದು ಆದೇಶ ನೀಡಿದರು. ಬಹಳಷ್ಟು ಕಡೆ ಒಳಚರಂಡಿ ಯೋಜನೆ ಕೂಡ ನೆನೆಗುದಿಗೆ ಬಿದ್ದಿದೆ. ಇದನ್ನು ಕೂಡ ಕೈಗೆತ್ತಿಕೊಳ್ಳುವ ನಿಟ್ಟಿನಲ್ಲಿ ಜಾಗದ ಸಮಸ್ಯೆ ಪರಿಹಾರ ಮಾಡಬೇಕು ಎಂದು ಲೋಕನಾಥ್ ತಿಳಿಸಿದರು. ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಎಕ್ಸಿಕ್ಯೂಟಿವ್ ಇಂಜಿನಿಯರ್ ಕಲೀಲ್ ಅಹಮ್ಮದ್, ಮೈಸೂರು ಅರಮನೆ ಮಂಡಳಿ ಉಪ ನಿರ್ದೇಶಕ ಸುಬ್ರಹ್ಮಣ್ಯ ಸೇರಿದಂತೆ ಹಲವು ಅಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.



ದತ್ತ ಜಯಂತಿ ಅಂಗವಾಗಿ ಗಣಪತಿ ಸಚ್ಚಿದಾನಂದ ಆಶ್ರಮದ ಸಪ್ತ ಶ್ರೀ ಸರೋವರದಲ್ಲಿ ಶ್ರೀ ದತ್ತಾತ್ರೇಯ ತೆಪ್ಪೋತ್ಸವ ಹಮ್ಮಿಕೊಳ್ಳಲಾಗಿತ್ತು.

# ನಿಸ್ವಾರ್ಥ ಸೇವೆಯಿಂದ ಬದುಕು ಸಾರ್ಥಕ

### ವಿವಿಧ ಕ್ಷೇತ್ರಗಳ ಸಾಧಕರ ಸನ್ಮಾನಿಸಿದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್



ಮೈಸೂರು,ಡಿ.27(ಪಿಎಂ)- ಶುದ್ಧ ಮನಸ್ಸಿನಿಂದ ನಿಸ್ವಾರ್ಥದಿಂದ ಸೇವೆ ಮಾಡಿದರೆ ಬದುಕು ಸಾರ್ಥಕವಾಗುತ್ತದೆ ಎಂದು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಹೇಳಿದರು.

ಮೈಸೂರಿನ ಜೆಪಿ ನಗರದ ಪುಟ್ಟರಾಜ ಗವಾಯಿ ಕ್ರೀಡಾಂಗಣದಲ್ಲಿ ಲಯನ್ಸ್ ಕ್ಲಬ್ ಜೆಪಿ ನಗರ ಮತ್ತು ಎಸ್‌ಎಂಪಿ ಫೌಂಡೇಷನ್ ಜಂಟಿ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳ ಸಾಧಕರನ್ನು ಸನ್ಮಾನಿಸಿ ಅವರು ಮಾತನಾಡಿದರು. ಜನಸೇವೆ ಮಾಡಿದರೆ ನಮ್ಮ ಬದುಕು ಸಾರ್ಥಕವಾಗುತ್ತದೆ. ದೀನ ದಲಿತರ ಕಷ್ಟಕ್ಕೆ ಸ್ಪಂದಿಸುವುದೇ ನಿಜವಾದ ಜನ ಸೇವೆ. ವಿವಿಧ ಕ್ಷೇತ್ರಗಳಲ್ಲಿ ಜನಸೇವೆ ಮಾಡಿದವರಿಗೆ ಇಂದು ಸನ್ಮಾನ ಮಾಡಿದ್ದು, ಅವರು ತಮ್ಮ ಸೇವಾ ಕಾರ್ಯ ಮುಂದುವರೆಸಲು ಇಂದಿನ ಸನ್ಮಾನದಿಂದ ಪ್ರೇರಣೆ ದೊರೆಯಲಿದೆ ಎಂದರು.

ಜೆಪಿ ನಗರದ ಲಯನ್ಸ್ ಕ್ಲಬ್ ಮತ್ತು ಎಸ್‌ಎಂಪಿ ಫೌಂಡೇಷನ್ ಸೇವಾ ಕಾರ್ಯಗಳನ್ನು ಹಲವು ವರ್ಷಗಳಿಂದ ನೋಡುತ್ತಿದ್ದೇನೆ. ಎಸ್‌ಎಂಪಿ ಫೌಂಡೇಷನ್‌ನ ಶಿವಪ್ರಕಾಶ್ ತಮ್ಮ ಸಮಾಜ ಸೇವೆಯನ್ನು ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಮಾಡಿಕೊಂಡು ಬರುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಇದಕ್ಕೂ ಮುನ್ನ ಪಾಲಿಕೆ ಮಾಜಿ ಸದಸ್ಯರಾದ ಶಾಂತಮ್ಮ ವಡಿವೇಲು, ಶಾರದಮ್ಮ ಈಶ್ವರ್, ವೈದ್ಯರಾದ ಡಾ.ಸುಧಾ ಲೋಕೇಶ್, ಡಾ.ಪ್ರವೀಣ್ ಕುಮಾರ್, ಡಾ.ಅಮೃತ, ಡಾ.ಕಮಲಮ್ಮ, ಶಿಕ್ಷಕರಾದ ಚೇತನ್, ಸೌಮ್ಯ, ವೇದಾರಾಧ್ಯ, ಅಭಿಯಂತರ ವಿಶ್ವಾಸ್, ಪೊಲೀಸ್ ಅಧಿಕಾರಿ ಬೀರಪ್ಪ ಸೇರಿದಂತೆ 62 ಮತ್ತು 63ನೇ ವಾರ್ಡಿನ ಹಿರಿಯ ಪೌರ ಕಾರ್ಮಿಕರನ್ನು ಸನ್ಮಾನಿಸಲಾಯಿತು.

ಎಸ್‌ಎಂಪಿ ಫೌಂಡೇಷನ್ ಅಧ್ಯಕ್ಷ ಎಸ್.ಎಂ. ಶಿವಪ್ರಕಾಶ್, ಲಯನ್ಸ್ ಕ್ಲಬ್ ಕಾರ್ಯದರ್ಶಿ ಸದಾಶಿವು, ಖಜಾಂಚಿ ಸುರೇಶ್, ಕ್ರಿಯಾಶೀಲ ಲಯನ್ಸ್ ಕ್ಲಬ್ ಉಪಾಧ್ಯಕ್ಷ ತೇಜು ಮತ್ತಿತರರು ಹಾಜರಿದ್ದರು.

## ನಾಳೆ ಸಮಷ್ಟಿ ವಾರ್ಷಿಕ ಕ್ರೀಡಾಕೂಟ

ಮೈಸೂರು, ಡಿ. 27- ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಶಾರದಾ ವಿಲಾಸ ಪದವಿಪೂರ್ವ ಕಾಲೇಜಿನ ಆವರಣದಲ್ಲಿ ವಾರ್ಷಿಕ ಕ್ರೀಡಾಕೂಟ "ಸಮಷ್ಟಿ-2023" ಡಿ.29ರ ಬೆಳಗ್ಗೆ 9 ಗಂಟೆಗೆ ಆಯೋಜಿಸಲಾಗಿದೆ.

ಮುಖ್ಯ ಅತಿಥಿಗಳಾಗಿ ವಿ.ವಿ.ಪುರಂ ಸಂಚಾರಿ ಪೊಲೀಸ್ ವಿಭಾಗದ ಉಪ-ಆರಕ್ಷಕ ನಿರೀಕ್ಷಕರಾದ ಶ್ರೀಧರ್ ಎಲ್.ಸಿ ಭಾಗವಹಿಸಲಿದ್ದಾರೆ. ವಿಶೇಷ ಆಹ್ವಾನಿತರಾಗಿ ಸಂಸ್ಥೆಯ ಅಧ್ಯಕ್ಷರಾದ ಡಾ.ಬಿ.ಎಂ. ಸುಬ್ರಾಯ ಹಾಗೂ ಗೌರವ ಕಾರ್ಯದರ್ಶಿ ಎನ್.ಚಂದ್ರಶೇಖರ್ ಉಪಸ್ಥಿತರಿರುತ್ತಾರೆ. ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಸಿ.ಕೆ.ಅಶೋಕ್ ಕುಮಾರ್ ವಹಿಸಲಿದ್ದು, ಕ್ರೀಡಾಕೂಟದ ನಿರ್ವಹಣೆಯನ್ನು ದೈಹಿಕ ಶಿಕ್ಷಣ ವಿಭಾಗದ ಉಪನ್ಯಾಸಕರಾದ ಡಿ. ಶಿವಶಂಕರ್ ಮಾಡಲಿದ್ದಾರೆ. ವಿದ್ಯಾರ್ಥಿಗಳಿಗಾಗಿ ವಿವಿಧ ಕ್ರೀಡೆಗಳನ್ನು ಏರ್ಪಡಿಸಲಾಗಿದೆ.

# ಪೊಲೀಸ್ ಠಾಣೆ ಮೆಟ್ಟಿಲು ಹತ್ತಿದ ಅಂಧಕಾಸುರನ ವಧೆ ಕಾರ್ಯಕ್ರಮ ವಿವಾದ

## ದಲಿತ ಸಂಘರ್ಷ ಸಮಿತಿ, ಶ್ರೀಕಂಠೇಶ್ವರ ಸ್ವಾಮಿ ಭಕ್ತರಿಂದ ಪ್ರತ್ಯೇಕ ದೂರು ದಾಖಲು

ನಂಜನಗೂಡು, ಡಿ.27– ನಂಜನಗೂಡಿನ ನಂಜುಂಡೇಶ್ವರ ದೇವಾಲಯದ ಸಂಪ್ರದಾಯದಂತೆ ನಡೆಯುವ ಅಂಧಕಾಸುರನ ವಧೆ ಕಾರ್ಯಕ್ರಮದ ವಿಚಾರವಾಗಿ ದಲಿತ ಸಂಘರ್ಷ ಸಮಿತಿ ಮತ್ತು ಶ್ರೀಕಂಠೇಶ್ವರ ಸ್ವಾಮಿ ಭಕ್ತರ ನಡುವೆ ನಡೆದಿದ್ದ ಮಾತಿನ ಚಕಮಕಿ ಪ್ರಕರಣದ ಬಗ್ಗೆ ನಂಜನಗೂಡು ನಗರ ಪೊಲೀಸ್ ಠಾಣೆಯಲ್ಲಿ ದೂರು ಪ್ರತಿದೂರು ದಾಖಲಾಗಿವೆ.

ಬುಧವಾರ ಸಂಜೆ ರಾಕ್ಷಸ ಮಂಟಪ ವೃತ್ತದ ಬಳಿ ಶ್ರೀಕಂಠೇಶ್ವರ ದೇವಾಲಯದ ವತಿಯಿಂದ ಅಂಧಕಾಸುರನ ವಧೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ದಲಿತ ಸಂಘರ್ಷ ಸಮಿತಿ ಸದಸ್ಯರು ರಂಗೋಲಿಯಲ್ಲಿ ಬಿಡಿಸಿರುವುದು ಮತ್ತು ಫ್ಲೆಕ್ಸ್ ಹಾಕಲಾಗಿರುವುದು ಮಹಿಷಾಸುರನ ಚಿತ್ರವೇ ಹೊರತು ಅಂಧಕಾಸುರನ ಚಿತ್ರವಲ್ಲ. ಆದ್ದರಿಂದ ಮಹಿಷನ ಚಿತ್ರವನ್ನು ತುಳಿದು ಅಪಮಾನಗೊಳಿಸಬಾರದೆಂದು ಪಟ್ಟುಹಿಡಿದು ವಿರೋಧ ವ್ಯಕ್ತಪಡಿಸಿದ್ದರು. ಇದಕ್ಕೆ ಪ್ರತಿಯಾಗಿ ಶ್ರೀಕಂಠೇಶ್ವರ ಸ್ವಾಮಿಯವರ ಭಕ್ತರು ಮತ್ತು ಋತ್ವಿಕರು ತಲೆ ತಲಾಂತರದಿಂದ ನಡೆದುಕೊಂಡು ಬಂದ ಸಂಪ್ರದಾಯವನ್ನು ನಿಲ್ಲಿಸಲು ಸಾಧ್ಯವಿಲ್ಲ ಎಂದು ಕಾರ್ಯಕ್ರಮಕ್ಕೆ ಚಾಲನೆ ನೀಡಿದ್ದ ವೇಳೆ ಎರಡೂ ಗುಂಪುಗಳ ನಡುವೆ ಮಾತಿನ ಚಕಮಕಿ ನಡೆದು ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು. ಘಟನೆ ಸಂಬಂಧ ದೂರು ಪ್ರತಿದೂರು ದಾಖಲಾಗಿದೆ

**ದಲಿತ ಸಂಘರ್ಷ ಸಮಿತಿ ಸದಸ್ಯರು ದೂರು:** ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯದ ಅಧಿಕಾರಿ ಮತ್ತು ಸಿಬ್ಬಂದಿಗಳು ಶೋಷಿತ ಜನಾಂಗದ ಆದಿ ಪುರುಷನಾದ ಪೂಜ್ಯ ಮಹಿಷ ಚಕ್ರವರ್ತಿ ಇರುವ ಫ್ಲೆಕ್ಸ್ ಮತ್ತು ರಂಗೋಲಿಯಲ್ಲಿ ರಚಿಸಿರುವ ಮಹಿಷಾಸುರನ ಚಿತ್ರವನ್ನು ಸಂಹಾರ ಮಾಡುವ ಕಾರ್ಯಕ್ರಮವನ್ನು ರೂಪಿಸಿರುವ ಬಗ್ಗೆ ನಮಗೆ ಮಾಹಿತಿ ತಿಳಿದು ನಗರದ ರಾಕ್ಷಸ ಮಂಟಪ ವೃತ್ತದ ಬಳಿ ಹೋದಾಗ ಪೊಲೀಸ್ ಅಧಿಕಾರಿಗಳ ಜೊತೆ ಮಹಿಷ ನಮ್ಮ ಸಾಂಸ್ಕೃತಿಕ ದೊರೆ ಆದ್ದರಿಂದ ನಮ್ಮ ಧಾರ್ಮಿಕ ಭಾವನೆಗೆ ಧಕ್ಕೆಯಾಗುವಂತೆ ಮಹಿಷನ ಚಿತ್ರವನ್ನು ತುಳಿಯುವುದು ಬೇಡ. ಅಲ್ಲದೆ ಸರ್ಕಾರವೇ ಮೌಢ್ಯ ನಿಷೇಧ ಪ್ರತಿಬಂಧಕ ಕಾಯ್ದೆ ಜಾರಿಗೊಳಿಸಿರುವುದರಿಂದ ಮಹಿಷನನ್ನು ಧ್ವಂಸ ಮಾಡುವುದರಿಂದ ನಾಡಿಗೆ ಒಳಿತಾಗುತ್ತದೆ ಎಂಬ ಮೌಢ್ಯವನ್ನು ಜನರ ಮನಸ್ಸಿನಲ್ಲಿ ಭಿತ್ತಬಾರದೆಂದು ಶ್ರೀಕಂಠೇಶ್ವರ ದೇವಾಲಯದ ಇಓ ಜಗದೀಶ್ ಕುಮಾರ್ ಅವರಿಗೆ ಮನವಿ ಮಾಡಿಕೊಂಡಾಗ. ಮೌಢ್ಯಾಚರಣೆಯನ್ನು ನಾನು ತಡೆಯುತ್ತೇನೆ.ನೀವು ಶಾಂತವಾಗಿರಿ ಎಂದು ಹೇಳಿದರು.

ನಂತರ ತಾವೇ ಮುಂದೆ ನಿಂತು ದೇವರ ಉತ್ಸವ ಮೂರ್ತಿಯನ್ನು ಅವರಿಗೆ ಗೊತ್ತಿರುವ ಆಗಮಿಕರು, ಅರ್ಚಕರುಗಳಿಂದ ಮಹಿಷನ ಚಿತ್ರ ರಂಗೋಲಿಯನ್ನು ಕಾಲಿನಿಂದ ತುಳಿದು ವಿಕೃತಿ ಮೆರೆದು ನಮ್ಮ ಧಾರ್ಮಿಕ ನಂಬಿಕೆಗೆ ಅಪಮಾನ ಮಾಡಿದ್ದಾರೆ. ನಾವು ಈ ಕೃತ್ಯವನ್ನು ತಡೆಯಲು ಮುಂದಾದಾಗ ಅಲ್ಲಿದ್ದ ಕಪಿಲೇಶ್, ಅನಂತ, ಕಿರಣ, ರಾಜು, ರವಿ, ಗಿರೀಶ್ ಇತರರು ನಮ್ಮ ಮೇಲೆ ಹಲ್ಲೆ ಮಾಡಲು ಮುಂದಾಗಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಆದ್ದರಿಂದ ದೇವಾಲಯದ ಇಓ ಮತ್ತು ಅರ್ಚಕರು ಮತ್ತು ನಮ್ಮ ಮೇಲೆ ಹಲ್ಲೆ ನಡೆಸಲು ಮುಂದಾದ ಕಿಡಿಗೇಡಿಗಳ ಮೇಲೆ ಕಾನೂನು ಕ್ರಮ ಜರುಗಿಸಬೇಕೆಂದು ದಸಂಸ ಮುಖಂಡರು ದೂರು ನೀಡಿದ್ದಾರೆ.

**ದೇವಾಲಯದ ಆಡಳಿತಾಧಿಕಾರಿ ಪ್ರತಿದೂರು:** ದೇವಾಲಯದ ರೂಢೀ ಸಂಪ್ರದಾಯದಂತೆ ನಗರದ ರಾಕ್ಷಸ ಮಂಟಪ ವೃತ್ತದ ಬಳಿ ಅಂಧಕಾಸುರನ ಸಂಹಾರ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ದೇವಾಲಯದಿಂದ ಉತ್ಸವ ಮೂರ್ತಿಯನ್ನು ತಂದು ಅಂಧಕಾಸುರನ ರಂಗೋಲಿಯಿಂದ ರಚಿಸಲಾಗಿರುವ ಚಿತ್ರವನ್ನು ಹೋಗಲಾಡಿಸುವುದು ಹಿಂದಿನಿಂದ ನಡೆದುಕೊಂಡು ಬಂದ ಸಂಪ್ರದಾಯವಾಗಿದೆ. ಈ ಬಗ್ಗೆ ಅಲ್ಲಿಗೆ ಅಡ್ಡಿಪಡಿಸಲು ಬಂದ ವ್ಯಕ್ತಿಗಳೊಡನೆ ಈ ಕಾರ್ಯಕ್ರಮ ಯಾವೊಬ್ಬ ವ್ಯಕ್ತಿ ಅಥವಾ ಪಂಗಡಕ್ಕೆ ಮನನೋಯಿಸುವಂತೆ ಕಾರ್ಯಕ್ರಮ ರೂಪಿಸಿಲ್ಲ ಎಂದು ಮನವರಿಕೆ ಮಾಡಿಕೊಟ್ಟಿದ್ದೆ. ಆದರೂ ಸಹ ದೇವರ ಉತ್ಸವ ಮೂರ್ತಿ ರಾಕ್ಷಸ ಮಂಟಪದ ಬಳಿ ಬರುತ್ತಿದ್ದಂತೆ ಬಾಲರಾಜು, ಮಲ್ಲಹಳ್ಳಿ ನಾರಾಯಣ, ಅಭಿ ನಾಗಭೂಷಣ, ನಟೇಶ್, ಅಭಿಪವಾರ್ ಎಂಬ ವ್ಯಕ್ತಿಗಳು ಉದ್ದೇಶಪೂರ್ವಕವಾಗಿ ದೇವರ ಉತ್ಸವ ಮೂರ್ತಿಯ ಮೇಲೆ ಕುಡಿಯುವ ನೀರಿನ ಬಾಟಲ್ ನೀರು ಎರಚಿ ಧಾರ್ಮಿಕ ಕಾರ್ಯಕ್ರಮಗಳು ಅನೂಚಾನವಾಗಿ ಜರುಗಲು ಬಿಡದೆ ಅಡ್ಡಿಪಡಿಸಿ ಭಕ್ತಾದಿಗಳ ಧಾರ್ಮಿಕ ಭಾವನೆಗಳಿಗೆ ಸಾರ್ವಜನಿಕವಾಗಿ ಧಕ್ಕೆ ಉಂಟು ಮಾಡಿದ್ದಾರೆ. ಆದ್ದರಿಂದ ಭಕ್ತಾದಿಗಳ ಧಾರ್ಮಿಕ ಭಾವನೆಗಳಿಗೆ ಅಡ್ಡಿಪಡಿಸಿದವರ ಮೇಲೆ ಕಾನೂನು ಕ್ರಮ ಜರುಗಿಸಿ ಇಂತಹ ಘಟನೆಗಳು ಮರುಕಳಿಸದಂತೆ ಸೂಕ್ತ ರಕ್ಷಣೆ ನೀಡಬೇಕೆಂದು ದೇವಾಲಯದ ಇಓ ಜಗದೀಶ್ ಕುಮಾರ್ ದೂರು ನೀಡಿದ್ದಾರೆ.

ದೂರು ಮತ್ತು ಪ್ರತಿ ದೂರನ್ನು ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

## ಮೈಸೂರು ಚಿತ್ರಮಂದಿರಗಳಲ್ಲಿ



| | |
|---|---|
| **ಪದ್ಮ ಚಿತ್ರಮಂದಿರ** | (ದೂ: 2521923) |
| ಡಂಕಿ(ಹಿಂ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್ ಚಿತ್ರಮಂದಿರ** | (ದೂ: 2422871) |
| ಬ್ಯಾಡ್ ಮ್ಯಾನರ್ಸ್ (ಕ) | 4 ಪ್ರದರ್ಶನಗಳು |
| **ಬಾಲಾಜಿ ಚಿತ್ರಮಂದಿರ** | (ದೂ: 2497199) |
| ಡಂಕಿ(ಹಿಂ) | 4 ಪ್ರದರ್ಶನಗಳು |
| **ಮಹದೇಶ್ವರ ಚಿತ್ರಮಂದಿರ** | (ಮೊ:9900820093) |
| ಸಲಾರ್ (ಕ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಸಲಾರ್ (ತೆ) | 4 ಪ್ರದರ್ಶನಗಳು |
| **ರಾಜಕಮಲ್** | |
| ಅಕ್ವಾ ಮ್ಯಾನ್ ಅಂಡ್ ದ ಲಾಸ್ಟ್ ಕಿಂಗ್‌ಡಮ್(ಇಂ) | 4 ಪ್ರದರ್ಶನಗಳು |
| **ಸಂಗಂ** | |
| ಡಂಕಿ(ಹಿಂ) | 4 ಪ್ರದರ್ಶನಗಳು |
| **ಲಿಡೋ** | |
| ಕೈವಾ (ಕ) | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| ಸಲಾರ್ (ಹಿಂ) | 4 ಪ್ರದರ್ಶನಗಳು |
| **ಪ್ರಭಾ** | |
| ಬಾ ನಲ್ಲೆ ಮದುವೆಗೆ (ಕ) 2 ಪ್ರದರ್ಶನಗಳು, ಹಳ್ಳಿ ಮುಕ್ಕ (ಕ) | 2 ಪ್ರದರ್ಶನಗಳು |

### ಡಿಆರ್‌ಸಿ ಸಿನಿಮಾಸ್

ದೂ : 4240422/4241800

| | |
|---|---|
| ಸ್ಕ್ರೀನ್ 1 | **ಸಲಾರ್– 1 (ತೆ):** ಬೆ.9.15ಕ್ಕೆ, ಮ.3.50ಕ್ಕೆ, ರಾ.10.20ಕ್ಕೆ, **ಡಂಕಿ (ಹಿಂ):** ಮ.12.50ಕ್ಕೆ, ರಾ.7.14ಕ್ಕೆ. |
| ಸ್ಕ್ರೀನ್ 2 | **ಸಲಾರ್–1 (ಕ):** ಬೆ.9ಕ್ಕೆ, ಸಂ.6.50ಕ್ಕೆ, **ಅನಿಮಲ್ (ಹಿಂ):** ಮ.12.20ಕ್ಕೆ, **ಸ್ಯಾಮ್ ಬಹದ್ದೂರ್ (ಹಿಂ):** ಸಂ.4.05ಕ್ಕೆ, **ನೆರು (ಮ):** ರಾ.10.15ಕ್ಕೆ. |
| ಸ್ಕ್ರೀನ್ 3 | **ಸಲಾರ್–1 (ತೆ):** ಬೆ.7ಕ್ಕೆ, **ಡಂಕಿ (ಹಿಂ):** ಬೆ.10.30ಕ್ಕೆ, **ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ):** ಮ.1.45ಕ್ಕೆ, ಸಂ.4.50ಕ್ಕೆ, ರಾ.7.15ಕ್ಕೆ, **ಸಲಾರ್ (ಕ):** ರಾ.9.55ಕ್ಕೆ. |
| ಸ್ಕ್ರೀನ್ 4 | **ಸಲಾರ್–1(ತೆ):** ಬೆ.7.15ಕ್ಕೆ, ಮ.12.30ಕ್ಕೆ, ರಾ.7ಕ್ಕೆ, **ಡಂಕಿ (ಹಿಂ):** ಮ.3.55ಕ್ಕೆ, ರಾ.10.25ಕ್ಕೆ. |

### ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

| | |
|---|---|
| ಸ್ಕ್ರೀನ್ 1 | **ಡಂಕಿ (ಹಿಂ):** ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ. |
| ಸ್ಕ್ರೀನ್ 2 | **ಸಲಾರ್ –1 (ತೆ):** ಬೆ.8.10ಕ್ಕೆ, ಬೆ.11.45ಕ್ಕೆ, ಮ.3.20ಕ್ಕೆ, ಸಂ.6.55ಕ್ಕೆ, ರಾ.10.30ಕ್ಕೆ. |
| ಸ್ಕ್ರೀನ್ 3 | **ಡಂಕಿ (ಹಿಂ):** ಬೆ.11.30ಕ್ಕೆ, ಸಂ.6.25ಕ್ಕೆ, **ಸಲಾರ್–1 (ಹಿಂ):** ಮ.2.50ಕ್ಕೆ, **ಸಲಾರ್ –1 (ಕ):** ರಾ.9.45ಕ್ಕೆ. |
| ಸ್ಕ್ರೀನ್ 4 | **ಸಲಾರ್–1 (ತೆ):** ಬೆ.8.40ಕ್ಕೆ, **ಸಲಾರ್–1 (ಕ):** ಮ.12.15ಕ್ಕೆ, ಸಂ.6.35ಕ್ಕೆ, **ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ):** ಮ.3.50ಕ್ಕೆ, ರಾ.10.10ಕ್ಕೆ. |

### ಮೈಸೂರು ವಿಷನ್ ಸಿನಿಮಾ

ದೂ : 0821–2973519

| | |
|---|---|
| ಸ್ಕ್ರೀನ್ 1 | **ಪಾರ್ಕಿಂಗ್ (ಕ):** ಬೆ.10.35ಕ್ಕೆ, **ಸಪ್ತ ಸಾಗರದಾಚೆ ಎಲ್ಲೋ 2 (ಕ):** ಮ.1.10ಕ್ಕೆ, **ಬ್ಯಾಡ್ ಮ್ಯಾನರ್ಸ್ (ಕ):** ಸಂ.4ಕ್ಕೆ, **ಅರ್ಧಂಬರ್ಧ ಪ್ರೇಮ ಕಥೆ (ಕ):** ಸಂ.6.35ಕ್ಕೆ, **ಅನ್ನಪೂರ್ಣಿ (ತ):** ರಾ.9.15ಕ್ಕೆ. |
| ಸ್ಕ್ರೀನ್ 2 | **ಅನಿಮಲ್ (ಹಿಂ):** ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, **ಸ್ಯಾಮ್ ಬಹದ್ದೂರ್ (ಹಿಂ):** ಮ.1.45ಕ್ಕೆ. |
| ಸ್ಕ್ರೀನ್ 3 | **ಸ್ಯಾಮ್ ಬಹದ್ದೂರ್ (ಹಿಂ):** ಬೆ.10.10ಕ್ಕೆ, ಸಂ.4.50ಕ್ಕೆ, **ಅನಿಮಲ್ (ಹಿಂ):** ಮ.1.05ಕ್ಕೆ, ರಾ.7.45ಕ್ಕೆ. |
| ಸ್ಕ್ರೀನ್ 4 | **ಸಪ್ತ ಸಾಗರದಾಚೆ ಎಲ್ಲೋ 2 (ಕ):** ಬೆ.10.45ಕ್ಕೆ, **ಅನಿಮಲ್ (ಹಿಂ):** ಮ.2.40ಕ್ಕೆ, **ನೆಪೋಲಿಯನ್ (ಇಂ):** ಸಂ.6.25ಕ್ಕೆ, **ಸ್ಯಾಮ್ ಬಹದ್ದೂರ್ (ಹಿಂ):** ರಾ.9.30ಕ್ಕೆ. |

### ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

**ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ):** ಬೆ.9.35ಕ್ಕೆ, ಮ.3.55ಕ್ಕೆ, ರಾ.10ಕ್ಕೆ, **ಡಂಕಿ (ಹಿಂ):** ಬೆ.9ಕ್ಕೆ, ಬೆ.11.40ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ಸಂ.6.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, **ನೆರು (ಮ):** ರಾ.10.10ಕ್ಕೆ, **ಸಲಾರ್ –1 (ಮ):** ಸಂ.6.35ಕ್ಕೆ, **ಸಲಾರ್–1 (ಹಿಂ):** ಮ.2.50ಕ್ಕೆ, ಸಂ.5.55ಕ್ಕೆ, ರಾ.10ಕ್ಕೆ, **ಸಲಾರ್–1 (ಕ):** ಬೆ.8.05ಕ್ಕೆ, ಬೆ.11.15ಕ್ಕೆ, ಮ.3ಕ್ಕೆ, ಸಂ.6.25ಕ್ಕೆ, **ಸಲಾರ್– 1(ತೆ):** ಬೆ.7.10ಕ್ಕೆ, ಬೆ.7.40ಕ್ಕೆ, ಬೆ.8.10ಕ್ಕೆ, ರಾ.10.45ಕ್ಕೆ, ಬೆ.11.45ಕ್ಕೆ, ಮ.12.20ಕ್ಕೆ, ಮ.3.20ಕ್ಕೆ, ಮ.2.20ಕ್ಕೆ, ಸಂ.6.55ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ.

**ಸೂಚನೆ :** ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪ ಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

# ವಡ್ಡರಗುಡಿ ಅಂಗನವಾಡಿ ಕೇಂದ್ರಕ್ಕೆ ರೋಟರಿ ಕ್ಲಬ್‌ನಿಂದ ಕುರ್ಚಿಗಳ ಕೊಡುಗೆ

## ತಾಲೂಕಿನ ಎಲ್ಲಾ ಅಂಗನವಾಡಿಗಳಿಗೂ ರೋಟರಿ ಕ್ಲಬ್ ವತಿಯಿಂದ ಶೀಘ್ರ ಖುರ್ಚಿಗಳ ವಿತರಣೆ



ಹೆಚ್.ಡಿ.ಕೋಟೆ, ಡಿ.27– ತಾಲೂಕಿನ ವಡ್ಡರಗುಡಿ ಅಂಗನವಾಡಿ ಕೇಂದ್ರಕ್ಕೆ ರೋಟರಿ ಕ್ಲಬ್ ವತಿಯಿಂದ ಮಕ್ಕಳಿಗೆ ಕುಳಿತುಕೊಳ್ಳಲು ಕುರ್ಚಿಗಳನ್ನು ಉಚಿತವಾಗಿ ಹೆಚ್.ಡಿ.ಕೋಟೆ ರೋಟರಿ ಕ್ಲಬ್ ಅಧ್ಯಕ್ಷ ಬಿ.ಜಿ. ಗಂಗಾಧರ್ ಅವರ ನೇತೃತ್ವದಲ್ಲಿ ನೀಡಲಾಯಿತು.

ಬಳಿಕ ಮಾತನಾಡಿದ ಅವರು, ತಾಲೂಕಿನಲ್ಲಿ, ವಡ್ಡರಗುಡಿ ಗ್ರಾಮದಲ್ಲಿರುವ ಅಂಗನವಾಡಿಯಲ್ಲಿ ಆದಿವಾಸಿ ಮಕ್ಕಳೇ ಹೆಚ್ಚು ಇರುವ ಹಿನ್ನೆಲೆಯಲ್ಲಿ, ಮಕ್ಕಳಿಗೆ ಕುಳಿತುಕೊಳ್ಳಲು ಅನುಕೂಲವಾಗುವ ನಿಟ್ಟಿನಲ್ಲಿ ಉಚಿತವಾಗಿ ಕುರ್ಚಿಗಳನ್ನು ರೋಟರಿ ಕ್ಲಬ್ ವತಿಯಿಂದ ನೀಡಿದ್ದೇವೆ. ಜೊತೆಗೆ ಕೋಟೆ ಪಟ್ಟಣದಲ್ಲಿರುವ ವಿದ್ಯಾನಗರ, ನಂಜನಾಯಕನ ಹಳ್ಳಿ, ಅಂಗನವಾಡಿ ಕೇಂದ್ರಗಳಿಗೂ ಉಚಿತವಾಗಿ ಕುರ್ಚಿಗಳನ್ನು ನೀಡಿದ್ದೇವೆ ಎಂದರು.

ಮುಂದಿನ ದಿನಗಳಲ್ಲಿ ಇನ್ನು ಕೆಲವು ಅಂಗನವಾಡಿಗಳಿಗೆ ಭೇಟಿ ನೀಡಿ, ಅಂಗನವಾಡಿ ಕಟ್ಟಡಗಳಿಗೆ ಸುಣ್ಣ ಬಣ್ಣಗಳನ್ನು ಬಳಸುವುದರ ಮೂಲಕ ಗೋಡೆಗಳಲ್ಲಿ ಚಿತ್ರಗಳನ್ನು ಬಿಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ರೋಟರಿ ಕ್ಲಬ್‌ನ ಕಾರ್ಯದರ್ಶಿ ಸ್ವಾಮಿ, ಅಂಗನವಾಡಿ ಕಾರ್ಯಕರ್ತೆ ಅಕ್ಕಮಹಾದೇವಮ್ಮ, ಪೋಷಕ ವರ್ಗದವರು ಹಾಗೂ ಮಕ್ಕಳು ಹಾಜರಿದ್ದರು.

# ಸಂಸದ ಪ್ರತಾಪ್ ಸಿಂಹ ವಿರುದ್ಧ ರಸ್ತೆ ತಡೆ



ಸುತ್ತೂರು, ಡಿ.27–ಮುಖ್ಯಮಂತ್ರಿ ಸಿದ್ದರಾಮಯ್ಯನವರ ವಿರುದ್ಧ ಸಂಸದ ಪ್ರತಾಪ್ ಸಿಂಹ ಅವಹೇಳನಕಾರಿಯಾಗಿ ಮಾತನಾಡಿರುವುದನ್ನು ಖಂಡಿಸಿ ವರುಣ ವಿಧಾನಸಭಾ ಕ್ಷೇತ್ರದ ಮೇಗಳಾಪುರದಲ್ಲಿ ಗ್ರಾಮಸ್ಥರು ಬುಧವಾರ ರಸ್ತೆ ತಡೆ ನಡೆಸುವ ಮೂಲಕ ಪ್ರತಿಭಟಿಸಿದರು.

ಮೈಸೂರು–ತಿ.ನರಸೀಪುರ ಮುಖ್ಯ ರಸ್ತೆಯಲ್ಲಿ ನೂರಾರು ಸಂಖ್ಯೆಯಲ್ಲಿ ಜಮಾಯಿಸಿದ್ದ ಗ್ರಾಮಸ್ಥರು ಸುಮಾರು ಅರ್ಧ ಗಂಟೆಗಳ ಕಾಲ ರಸ್ತೆ ತಡೆ ನಡೆಸಿ ಸಂಸದ ಪ್ರತಾಪ್ ಸಿಂಹ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿ, ಅವರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದರು. ಇದೇ ವೇಳೆ ಸಿದ್ದರಾಮಯ್ಯ ಮತ್ತು ಸರ್ಕಾರದ ಪರ ಘೋಷಣೆಗಳು ಮೊಳಗಿದವು.

ಈ ವೇಳೆ ಮಾತನಾಡಿದ ಮುಖಂಡರು, ಹುಣಸೂರಿನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಸಂಸದ ಪ್ರತಾಪ್ ಸಿಂಹ, ಸಿದ್ದರಾಮಯ್ಯನವರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿರುವುದು ಖಂಡನೀಯ. ಕಳೆದ ಎರಡು ಅವಧಿಯಿಂದ ಸಂಸದರಾಗಿರುವ ಪ್ರತಾಪ್ ಸಿಂಹ ಮೈಸೂರಿನಂತಹ ಸುಸಂಸ್ಕೃತ ನಗರದಲ್ಲಿ ಕೋಮು–ದಳ್ಳುರಿಯನ್ನು ಉಂಟು ಮಾಡುವಂತಹ ಕೆಲಸ ಮಾಡುತ್ತಿರುವುದನ್ನು ಬಿಟ್ಟರೆ ಯಾವುದೇ ಅಭಿವೃದ್ಧಿ ಕೆಲಸ ಮಾಡಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇಂತಹ ವ್ಯಕ್ತಿಯ ವಿರುದ್ಧ ಪ್ರಕರಣ ದಾಖಲಿಸಿ, ಕಾನೂನು ಕ್ರಮ ಜರುಗಿಸಬೇಕು ಎಂದು ಸ್ಥಳದಲ್ಲಿದ್ದ ಮೇಗಳಾಪುರ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಚೇತನ್ ಅವರಿಗೆ ಮನವಿ ಮಾಡಿದರಲ್ಲದೆ, ಪ್ರತಾಪ್ ಸಿಂಹ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಮನವಿ ಪತ್ರವನ್ನು ಸಲ್ಲಿಸಿದರು. ಪ್ರತಿಭಟನೆಯಿಂದ ಕೆಲ ಕಾಲ ಸಂಚಾರ ಅಸ್ತವ್ಯಸ್ತಗೊಂಡಿತ್ತು. ಮನವಿ ಪತ್ರವನ್ನು ಮೇಲಾಧಿಕಾರಿಗಳ ಗಮನಕ್ಕೆ ತಂದು ಮುಂದಿನ ಕ್ರಮ ಜರುಗಿಸುವುದಾಗಿ ಪಿಎಸ್‌ಐ ಚೇತನ್ ಅವರು ಭರವಸೆ ನೀಡಿದ ಹಿನ್ನೆಲೆಯಲ್ಲಿ ಪ್ರತಿಭಟನೆ ಕೈಬಿಡಲಾಯಿತು.

ಪ್ರತಿಭಟನೆಯಲ್ಲಿ ಸಿದ್ದರಾಮಯ್ಯನಹುಂಡಿಯ ಬಸವರಾಜ್, ಡೈರಿ ಮಹದೇವಪ್ಪ, ಕೆಂಪೀರಯ್ಯ, ರಂಗನಾಥಪುರ ಪುಟ್ಟಣ್ಣ, ಅಧ್ಯಕ್ಷ ಸಿದ್ದರಾಮ, ಮೇಗಳಾಪುರ ಉಮೇಶ್, ಹೊಸಹಳ್ಳಿ ಶೇಖರ್, ಕುಪ್ಪೇಗಾಲ ಚಂದ್ರಶೇಖರ್, ಮಹೇಂದ್ರ ಶಿವಕುಮಾರ್, ವೀರೇಂದ್ರ, ರಮೇಶ್, ಚೇತನ್, ದಳಪತಿ ಮಹೇಶ್, ತಿಮ್ಮರಾಜು, ನಂಜುಂಡಸ್ವಾಮಿ, ಕೀಳನಾಪುರ ಮಹದೇವಪ್ಪ ಸೇರಿದಂತೆ ಸಿದ್ದರಾಯನಹುಂಡಿ, ಎಡಕೊಳ, ಹೊಸಹಳ್ಳಿ, ಮುದ್ದೇಗೌಡನಹುಂಡಿ, ಶ್ರೀನಿವಾಸಪುರ, ಮೇಗಳಾಪುರ, ಎಂ.ಸಿ.ಹುಂಡಿ, ದುದ್ದಗೆರೆ, ಪುಟ್ಟೇಗೌಡನ ಹುಂಡಿ ಇನ್ನಿತರ ಗ್ರಾಮಗಳ ಗ್ರಾಮಸ್ಥರು ಪಾಲ್ಗೊಂಡಿದ್ದರು.

# ನಂ.ಗೂಡು ನಗರಸಭೆಗೆ ಶಾಂತಿಯುತ ಮತದಾನ

## ಡಿ.30ರಂದು ಮತ ಎಣಿಕಾ ಕಾರ್ಯ



ನಂಜನಗೂಡು, ಡಿ.27– ನಂಜನಗೂಡು ನಗರಸಭೆಯ 20ನೇ ವಾರ್ಡ್‌ಗೆ ಬುಧವಾರ ಉಪಚುನಾವಣೆಗೆ ನಗರದ ರಾಷ್ಟ್ರಪತಿ ರಸ್ತೆಯಲ್ಲಿರುವ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯ ಮತಗಟ್ಟೆಯಲ್ಲಿ ಶಾಂತಿಯುತ ಮತದಾನ ನಡೆಯಿತು.

ಬೆಳಗ್ಗೆ 7 ಗಂಟೆಯಿಂದ ಸಂಜೆ 5ವರೆಗೆ ನಡೆದ ಮತದಾನದಲ್ಲಿ ಒಟ್ಟು 896 ಮತದಾರರ ಪೈಕಿ 568 ಮತಗಳು ಚಲಾವಣೆಯಾಗಿದ್ದು, ಇದರಲ್ಲಿ 275 ಪುರುಷರು ಹಾಗೂ 293 ಮಹಿಳೆಯರು ತಮ್ಮ ಹಕ್ಕು ಚಲಾಯಿಸಿದ್ದಾರೆ. ಮಧ್ಯಾಹ್ನದವರೆವಿಗೂ ನಿಧಾನಗತಿಯಲ್ಲಿ ಸಾಗಿದ ಮತದಾನ ನಂತರ ಬಿರುಸುಗೊಂಡಿತು. ವಾರ್ಡಿನ ಹಿರಿಯ ನಾಗರಿಕರು, ಅಂಗವಿಕಲರು ಕೂಡ ಆಸಕ್ತಿಯಿಂದ ಮತಗಟ್ಟೆಗೆ ಆಗಮಿಸಿ ತಮ್ಮ ಹಕ್ಕು ಚಲಾಯಿಸಿದರು. ಕಾಂಗ್ರೆಸ್ ಅಭ್ಯರ್ಥಿ ದೊರೆಸ್ವಾಮಿ, ಬಿಜೆಪಿ ಅಭ್ಯರ್ಥಿ ಪಿ.ಮಹೇಶ್ ಅತ್ತಿಖಾನೆ, ಜೆಡಿಎಸ್ ಅಭ್ಯರ್ಥಿ ಸುಬ್ರಹ್ಮಣ್ಯ, ಎಎಪಿ ಅಭ್ಯರ್ಥಿ ಜಯಲಕ್ಷ್ಮಿ ಸ್ಪರ್ಧೆಯ ಕಣದಲ್ಲಿದ್ದು ಮತದಾನದ ವೇಳೆ ಅಂತಿಮ ಸುತ್ತಿನ ಕಸರತ್ತು ನಡೆಸಿ ಮತದಾರರ ಮನವೊಲಿಸುವ ಪ್ರಯತ್ನ ನಡೆಸಿದರು. ಅಲ್ಲದೆ ಮೂರು ಪಕ್ಷದ ಪ್ರಮುಖ ನಾಯಕರು ಹಾಗೂ ಮುಖಂಡರು ಮತಗಟ್ಟೆ ಸಮೀಪದಲ್ಲಿ ಬೀಡು ಬಿಟ್ಟು ಮತದಾರರನ್ನು ತಮ್ಮ ಪಕ್ಷದತ್ತ ಸೆಳೆಯುವ ಪ್ರಯತ್ನ ಮಾಡಿದರು. ಮತದಾನ ಮುಗಿಯುವರೆಗೂ ಮತಗಟ್ಟೆ ಆವರಣದಲ್ಲೇ ಇದ್ದು ಮತಬೇಟೆ ನಡೆಸಿದರು.

ಮತಪೆಟ್ಟಿಗೆಯನ್ನು ತಾಲೂಕು ಕಚೇರಿಯಲ್ಲಿ ಸ್ಥಾಪಿಸಲಾಗಿರುವ ಸ್ಟ್ರಾಂಗ್ ರೂಂನಲ್ಲಿ ಭದ್ರವಾಗಿರಿಸಿದ್ದು ನಾಲ್ವರು ಅಭ್ಯರ್ಥಿಗಳ ಭವಿಷ್ಯ ಮತಪೆಟ್ಟಿಗೆಯಲ್ಲಿ ಭದ್ರವಾಗಿದೆ. ಡಿ.30ರ ಶನಿವಾರ ಮತ ಎಣಿಕೆ ಕಾರ್ಯವು ನಡೆಯಲಿದ್ದು ಯಾರಿಗೆ ವಿಜಯಲಕ್ಷ್ಮಿ ಒಲಿಯುವಳು ಕಾದು ನೋಡಬೇಕಿದೆ.

# ಸಂಸದ ಪ್ರತಾಪ್ ಸಿಂಹ ವಿರುದ್ಧ ಪ್ರಕರಣ ದಾಖಲು: ಪೊಲೀಸರಿಂದ ಸ್ಥಳ ಪರಿಶೀಲನೆ



ಹುಣಸೂರು,ಡಿ.27– ಸಂಸದ ಪ್ರತಾಪ್ ಸಿಂಹ ವಿರುದ್ಧ ಪ್ರಕರಣ ದಾಖಲಾಗಿರುವ ಹಿನ್ನೆಲೆಯಲ್ಲಿ ಮೈಸೂರಿನ ದೇವರಾಜ ಪೊಲೀಸ್ ಠಾಣೆಯ ಪೊಲೀಸರು ಹುಣಸೂರು ಪಟ್ಟಣಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಮೈಸೂರಿನ ದೇವರಾಜ ಪೊಲೀಸರು ಇಂದು ಹುಣಸೂರಿಗೆ ಬಂದು ಹನುಮಂತೋತ್ಸವ ಮೆರವಣಿಗೆಗೆ ಸಂಸದರು ಚಾಲನೆ ನೀಡಿದ ಸ್ಥಳ ಹಾಗೂ ಅವರು ಮುಖ್ಯಮಂತ್ರಿ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ ಸ್ಥಳ ಮತ್ತು ಸಾಕ್ಷಿದಾರರನ್ನು ವಿಚಾರಿಸಿ ಸ್ಥಳ ಪರಿಶೀಲನೆ ಮಾಡಿದರು.

ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಮಾತನಾಡಿ, ನಾವು ನಿನ್ನೆ ರಾತ್ರಿಯೆ ಪ್ರತಿಭಟನೆ ಮಾಡಿ ರಸ್ತೆ ತಡೆ ನಡೆಸಿ ದೂರು ನೀಡಿದ್ದೇವೆ. ಆ ದೂರಿನ ಹಿನ್ನೆಲೆಯಲ್ಲಿ ಇಂದು ಸ್ಥಳ ಪರಿಶೀಲನೆ ಮಾಡಲು ಮೈಸೂರಿನ ದೇವರಾಜ ಠಾಣೆಯ ಪಿ.ಎಸ್.ಐ ಮತ್ತು ತಂಡ ಹುಣಸೂರಿಗೆ ಬಂದಿದ್ದಾರೆ ಎಂದರು.

ಕಾರ್ಯಾಧ್ಯಕ್ಷ ಪುಟ್ಟರಾಜು, ನಗರಾಧ್ಯಕ್ಷ ರಮೇಶ್, ನಗರಸಭಾ ಸದಸ್ಯರಾದ ಚಂದ್ರಶೇಖರ್, ಮುಖಂಡರಾದ ರಾಘು, ಬಿಳಿಕೆರೆ ಬಸವರಾಜು, ಚಿಕ್ಕಸ್ವಾಮಿ, ರವಿ, ನಾಗರಾಜು, ಇನ್ನು ಅನೇಕರು ಉಪಸ್ಥಿತರಿದ್ದರು. ಮಂಗಳವಾರ ಪಟ್ಟಣದಲ್ಲಿ ನಡೆದ ಹನುಮಂತೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಂಸದ ಪ್ರತಾಪ್ ಸಿಂಹ ಮುಖ್ಯಮಂತ್ರಿ ಸಿದ್ದರಾಮಯ್ಯನವರ ವಿರುದ್ಧ ಅವಹೇಳನಕಾರಿ ಮಾತನಾಡಿದ್ದರು. ಈ ಸಂಬಂಧ ಮಂಗಳವಾರ ರಾತ್ರಿಯೇ ಮೈಸೂರಿನ ದೇವರಾಜ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

# ಅಂಬೇಡ್ಕರ್ ಪ್ರತಿಮೆ ಗೋಪುರ ನಿರ್ಮಾಣ ವೀಕ್ಷಿಸಿದ ಜೆಡಿಎಸ್ ಮುಖಂಡ



**ಹಿರೀಕ್ಯಾತನಹಳ್ಳಿ:** ಹುಣಸೂರು ತಾಲೂಕಿನ ಕಟ್ಟೆಮಳಲವಾಡಿ ಗ್ರಾಮದಲ್ಲಿ ಸುಮಾರು ಒಂದೂವರೆ ಕೋಟಿ ರೂ.ಗೂ ಹೆಚ್ಚು ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆ ಗೋಪುರವನ್ನು ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಯಾಗಿದ್ದ ಬಿ.ಪುಟ್ಟಸ್ವಾಮಿ ಭೇಟಿ ನೀಡಿ, ಕಾಮಗಾರಿ ವೀಕ್ಷಿಸಿದರು.

ಹುಣಸೂರಿನ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಹಲವು ವರ್ಷಗಳ ಕಾಲ ಸಬ್‌ಇನ್ಸ್‌ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸಿದ್ದ ಪುಟ್ಟಸ್ವಾಮಿ ಅವರು ನಂತರ ಕೊಳ್ಳೇಗಾಲ ತಾಲೂಕಿಗೆ ವರ್ಗಾವಣೆಗೊಂಡು ಕರ್ತವ್ಯ ನಿರ್ವಹಿಸುತ್ತಿದ್ದರು. ನಂತರ ಸ್ವಯಂ ನಿವೃತ್ತಿ ಪಡೆದು ಚುನಾವಣೆಗೆ ಜೆಡಿಎಸ್‌ನಿಂದ ಸ್ಪರ್ಧಿಸಿ ಪರಾಭವಗೊಂಡಿದ್ದರು.

ಇವರನ್ನು ಅಂಬೇಡ್ಕರ್ ಪುತ್ತಳಿ ನಿರ್ಮಾಣದ ಸಮಿತಿ ಸದಸ್ಯರು ಸನ್ಮಾನಿಸಿ ಗೌರವಿಸಿದರು. ಪುತ್ತಳಿ ನಿರ್ಮಾಣ ಸಮಿತಿ ಅಧ್ಯಕ್ಷ ನಾಗರಾಜ್ ಮಲ್ಲಾಡಿ, ಕಾರ್ಯದರ್ಶಿ ನಟರಾಜ್, ಸಮಿತಿ ಸದಸ್ಯರಾದ ಶ್ರೀಧರ್, ಪುಟ್ಟರಾಜ, ಸಂತೋಷ್, ಕೃಷ್ಣ, ರಾಜು, ಸಂಜು ಹಾಜರಿದ್ದರು.

# ಸಚಿವ ಶಿವಾನಂದ ಪಾಟೀಲ್ ವಿರುದ್ಧ ಅನ್ನದಾತರ ಪ್ರತಿಭಟನೆ



**ನಂಜನಗೂಡು:** ರೈತರ ವಿರುದ್ಧ ಹಗುರ ಹಾಗೂ ಅವಹೇಳನಕಾರಿಯಾಗಿ ಮಾತನಾಡಿರುವ ಸಕ್ಕರೆ ಹಾಗೂ ಜವಳಿ ಖಾತೆ ಸಚಿವ ಶಿವಾನಂದಪಾಟೀಲ್ ರಾಜೀನಾಮೆಗೆ ಒತ್ತಾಯಿಸಿ ಸಾಮೂಹಿಕ ನಾಯಕತ್ವದಲ್ಲಿ ರೈತ ಸಂಘದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾಧ್ಯಕ್ಷ ವಿದ್ಯಾಸಾಗರ್ ನೇತೃತ್ವದಲ್ಲಿ ನಗರದ ತಾಲೂಕು ಕಚೇರಿ ಮುಂಭಾಗ ಜಮಾಯಿಸಿದ ರೈತ ಸಂಘದ ಮುಖಂಡರು ಸಚಿವ ಶಿವಾನಂದ ಪಾಟೀಲ್ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ರೈತ ಸಂಘದ ಜಿಲ್ಲಾಧ್ಯಕ್ಷ ವಿದ್ಯಾಸಾಗರ್ ಮಾತನಾಡಿ, ರೈತರು ಸಾಲಮನ್ನಾ ಆಗಲಿ, ಬರಗಾಲ ಬರಲಿ ಎಂದು ಬಯಸುತ್ತಾರೆ ಎಂದು ಅವಹೇಳನಕಾರಿಯಾಗಿ ಹೇಳಿಕೆ ನೀಡಿರುವುದು ಖಂಡನೀಯ. ನಿಮ್ಮ ಸರ್ಕಾರ ಅಧಿಕಾರಕ್ಕೆ ಬರುವ ಮುಂಚೆ ರೈತರ ಸಾಲಮನ್ನಾ ಮಾಡುತ್ತೇವೆ, ಪುಕ್ಕಟೆ ವಿದ್ಯುತ್ ನೀಡುತ್ತೇವೆ ಎಂದು ಅಧಿಕಾರಕ್ಕೆ ಬಂದು ರೈತರ ಬೆಳೆಗಳಿಗೆ ವೈಜ್ಞಾನಿಕ ಬೆಲೆ ನೀಡುತ್ತಿಲ್ಲ, ನಮ್ಮ ಬೆಳೆಗಳಿಗೆ ವೈಜ್ಞಾನಿಕ ಬೆಲೆ ಕೊಡುವವರೆಗೂ ಸಹ ಸರ್ಕಾರ ಯೋಜನೆಗಳನ್ನು ಜಾರಿಗೊಳಿಸಲೇಬೇಕು, ಯಾಕೆಂದರೆ ದೇಶದ ಆಹಾರ ಭದ್ರತೆಯನ್ನು ಕಾಪಾಡುವುದು ಸ್ವಾಭಿಮಾನಿ ರೈತರು ಎಂದರು.

ರೈತರಿರುವುದರಿಂದಲೇ ನೀವು ಸಕ್ಕರೆ ಜವಳಿ ಖಾತೆ ಸಚಿವರಾಗಿದ್ದೀರಿ ಎಂಬುದನ್ನು ಮರೆಯದಿರಿ. ಈ ಕೂಡಲೇ ನಿಮ್ಮ ಮಾತು ವಾಪಸ್ ತೆಗೆದುಕೊಂಡು ಕ್ಷಮೆಯಾಚಿಸಬೇಕು. ಸಿಎಂ ಸಿದ್ದರಾಮಯ್ಯರವರು ಶಿವಾನಂದ ಪಾಟೀಲ್‌ರನ್ನು ಸಚಿವ ಸಂಪುಟದಿಂದ ವಜಾಗೊಳಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹಿಮ್ಮಾವುರಘು, ತಾಲೂಕು ಅಧ್ಯಕ್ಷ ಸತೀಶ್ ರಾವ್, ಮುಖಂಡರು ಉಪಸ್ಥಿತರಿದ್ದರು

# ಸುನಿಲ್ ಬೋಸ್‌ರಿಂದ ಅಂಗನವಾಡಿ ಕಟ್ಟಡಕ್ಕೆ ಭೂಮಿಪೂಜೆ

## ನುಡಿದಂತೆ ನಡೆದ ನಮ್ಮ ಸರ್ಕಾರ, ಶೀಘ್ರ ಯುವನಿಧಿ ಜಾರಿ



ತಿ.ನರಸೀಪುರ.ಡಿ.27– ಚುನಾವಣಾ ಪೂರ್ವದಲ್ಲಿ ಕಾಂಗ್ರೆಸ್ ನೀಡಿದ್ದ ಗ್ಯಾರಂಟಿಗಳ ಪೈಕಿ ಈಗಾಗಲೇ 4 ಗ್ಯಾರಂಟಿಗಳು ಅನುಷ್ಠಾನಗೊಂಡಿದ್ದು 5ನೇ ಗ್ಯಾರಂಟಿ ಜನವರಿಯಲ್ಲಿ ಜಾರಿಗೊಳ್ಳಲಿದೆ ಎಂದು ಕೆಡಿಪಿ ಸದಸ್ಯ ಹಾಗೂ ಚಾಮರಾಜನಗರ ಲೋಕಸಭಾ ಕ್ಷೇತ್ರದ ಟಿಕೆಟ್ ಆಕಾಂಕ್ಷಿ ಸುನಿಲ್ ಬೋಸ್ ತಿಳಿಸಿದರು.


ತಾಲೂಕಿನ ಉಕ್ಕಲಗೆರೆ ಗ್ರಾಪಂ ವ್ಯಾಪ್ತಿಯ ಚಿಕ್ಕಲಕ್ಷ್ಮೀಪುರ ಗ್ರಾಮದಲ್ಲಿ ಅಂಗನವಾಡಿ ಕಟ್ಟಡ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷಕ್ಕೆ ಕಳೆದ ಚುನಾವಣೆಯಲ್ಲಿ ಜನರು ಆಶೀರ್ವಾದ ಮಾಡಿದ್ದಾರೆ. ನುಡಿದಂತೆ ನಡೆಯುತ್ತಿರುವ ಸರ್ಕಾರ ಜನರಿಗೆ ಕೊಟ್ಟ ಭರವಸೆ ಈಡೇರಿಸುತ್ತಿದೆ. ಪದವೀಧರ ಯುವಕರಿಗೆ ಪ್ರೋತ್ಸಾಹ ಧನ ನೀಡುವ ಯುವ ನಿಧಿ ಗ್ಯಾರಂಟಿ ಯೋಜನೆ ಜನವರಿ 12 ರಂದು ಚಾಲನೆಗೊಳ್ಳಲಿದೆ ಎಂದರು

ಎಪಿಎಂಸಿ ಮಾಜಿ ಸದಸ್ಯ ಉಕ್ಕಲಗೆರೆ ಬಸವಣ್ಣ ಮಾತನಾಡಿ, ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಶಾಸಕರು ಆಯ್ಕೆಯಾದ ವೇಳೆ ಮಾತ್ರವೇ ಅಭಿವೃದ್ಧಿಯಾಗಿದೆ ಹೊರತು ಬೇರೆ ಪಕ್ಷದ ಶಾಸಕರು ಆಯ್ಕೆಯಾದ ವೇಳೆ ಯಾವುದೇ ಅಭಿವೃದ್ಧಿಯಾಗಿಲ್ಲ. ಬಂಗಾರಪ್ಪನವರು ಸಿಎಂ ಆಗಿದ್ದ ವೇಳೆ ಕೆ.ಎಂ. ಚಿಕ್ಕಮಾದನಾಯಕರು ಶಾಸಕರಾಗಿದ್ದ ವೇಳೆಯಿಂದಲೂ ಹಕ್ಕುಪತ್ರಗಳ ಹಂಚಿಕೆ ಉಳಿದಿದೆ. ಜನರಿಗೆ ಹಕ್ಕು ಪತ್ರ ಹಂಚಿಕೆ ಮಾಡಲು ಕ್ರಮ ವಹಿಸುವಂತೆ ಸುನಿಲ್ ಬೋಸ್ ಅವರಿಗೆ ಮನವಿ ಮಾಡಿದರು.

ಕಳ್ಳಿಪುರದ ಗಾಣಿಗರ ಬೀದಿ, ಬೂದಹಳ್ಳಿಯ ನಾಯಕರ ಬೀದಿ, ದಲಿತರ ಬೀದಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳು, ಕನ್ನನಾಯಕನಹಳ್ಳಿ ಕುರುಬರ ಬೀದಿ, ಉಕ್ಕಲಗೆರೆ ಗ್ರಾಮದ ಕುರುಬರ ಬೀದಿ ಅಭಿವೃದ್ಧಿಯಾಗಬೇಕು ಉಕ್ಕಲಗೆರೆ ಗ್ರಾಮದ ಕನಕ ಭವನ ನಿರ್ಮಾಣಕ್ಕೆ 20 ಲಕ್ಷ ನೀಡಲಾಗಿತ್ತು. ಉಕ್ಕಲಗೆರೆ ಗ್ರಾಮ ಪಂಚಾಯಿತಿಯ ಸಮಗ್ರ ಅಭಿವೃದ್ಧಿ ಮಾಡಲು ಕ್ರಮ ಕೈಗೊಳ್ಳುವಂತೆ ಅವರು ಮನವಿ ಮಾಡಿದರು.

ಮೈಮುಲ್ ನಿರ್ದೇಶಕ ಆರ್. ಚೆಲುವರಾಜು, ಪಿ. ಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆಮಚ್ಚೇಗೌಡ, ಗ್ರಾಪಂ ಅಧ್ಯಕ್ಷೆ ಲತಾ ಮಂಜುನಾಥ್, ಉಪಾಧ್ಯಕ್ಷೆ ಶಿವಮ್ಮ ಪುಟ್ಟಮಾದಯ್ಯ, ಸದಸ್ಯರುಗಳಾದ ಚಿಕ್ಕ ಲಕ್ಷ್ಮಿಪುರ ನಿಂಗರಾಜು, ಆರ್ ರವಿಶಂಕರ್, ತಾ.ಪಂ,ಮಾಜಿ ಸದಸ್ಯರಾದ ಗಣೇಶ್, ರಾಮಲಿಂಗಯ್ಯ, ಎಪಿಎಂಸಿ ಮಾಜಿ ಅಧ್ಯಕ್ಷ ಎಂ.ರಾಜು, ಪ್ರಥಮ ದರ್ಜೆ ಗುತ್ತಿಗೆದಾರ ಕಗ್ಗಲಿಪುರ ಕೆಎಂ ಮಧುಕುಮಾರ್, ಆಪ್ತ ಸಹಾಯಕ ಲಕ್ಷ್ಮೀ ನಾರಾಯಣ್, ಬಸವರಾಜು, ಮಾಜಿ ಗ್ರಾಪಂ ಅಧ್ಯಕ್ಷ ನಾಗಣ್ಣ, ಉಕ್ಕಲಗೆರೆ ಗ್ರಾಪಂ ಮಾಜಿ ಸದಸ್ಯ ರಾಜು, ಮುಖಂಡರುಗಳಾದ ಚಿದರವಳ್ಳಿ ಚಂದ್ರಶೇಖರ, ಮಹದೇವು, ಮಾದು, ನಾಗೇಂದ್ರ ರಂಗಸ್ವಾಮಿ, ಪ್ರಭುಸ್ವಾಮಿ, ಸ್ವೀಕರಿಸ್ವಾಮಿ, ಮಹದೇವಸ್ವಾಮಿ, ನಾಗೇಂದ್ರ ನಂಜುಂಡಸ್ವಾಮಿ, ಚಿಕ್ಕಲಕ್ಷ್ಮಿಪುರ ಗ್ರಾಮದ ನಿಂಗರಾಜು, ಶಿವಕುಮಾರ್, ವಿಷಕಂಠ, ದೇವರಾಜು, ನಾಗರಾಜು, ಪರಮೇಶ್, ಶಿವಶಂಕರಪ್ಪ ಮಹೇಶ್, ಸಿಡಿಪಿಓ ಗೋವಿಂದರಾಜು, ಶಶಿಕುಮಾರ್, ಪಿಡಿಓ ಕೃಷ್ಣಪ್ಪ, ಉಕ್ಕಲಗೆರೆ ಹಾಗೂ ಚಿಕ್ಕಲಕ್ಷ್ಮಿಪುರ ಗ್ರಾಮಸ್ಥರು ಉಪಸ್ಥಿತರಿದ್ದರು.


# ಸಣ್ಣೇಗೌಡ ನಿಧನ



**ಹುಣಸೂರು:** ತಾಲೂಕು ಬಿಳಿಕೆರೆಯ ಛಾಯಾಗ್ರಾಹಕ ಸಂಪತ್ ಅವರ ತಂದೆ ಸಣ್ಣೇಗೌಡರು(60) ಮಂಗಳವಾರ ನಿಧನರಾದರು. ದಿವಂಗತರು ಪತ್ನಿ, ಪುತ್ರ, ಪುತ್ರಿ, ಸೊಸೆ ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ 2 ಗಂಟೆಗೆ ತಾಲೂಕಿನ ಹೊಸ ಅಗ್ರಹಾರದ ಅವರ ಜಮೀನಿನಲ್ಲಿ ನಡೆಯಿತು ಎಂದು ಕುಟುಂಬ ಮೂಲಗಳು ತಿಳಿಸಿದೆ.

# ಗಗನದತ್ತ ಆಹಾರ ಪದಾರ್ಥಗಳ ಬೆಲೆ...!

# 'ಅಕ್ಕಿ'ಯ ದರವಂತೂ ಹಾರುತ್ತಿದೆ!!



● ಮೋಹನ್ ಕಾಯಕ

ಮೈಸೂರು, ಡಿ. 27– ಬರಗಾಲದಿಂದಾಗಿ ಅಕ್ಕಿ, ಧವಸ, ಧಾನ್ಯಗಳ ಬೆಲೆ ಗಗನಕ್ಕೇರಿದ್ದು, ಜನತೆಯನ್ನು ಚಿಂತೆಗೀಡು ಮಾಡಿದೆ...!

ದೈನಂದಿನ ಬದುಕಿನ ಅನಿವಾರ್ಯ 'ಆಹಾರ' ಪದಾರ್ಥ ಮತ್ತಷ್ಟು ದುಬಾರಿಯಾಗುವ ಲಕ್ಷಣ ಸ್ಪಷ್ಟವಾಗಿ ಗೋಚರಿಸುತ್ತಿದೆ. ದುಬಾರಿ ದುನಿಯಾ ಎಂಬ ಮಾತು ಅಕ್ಷರಶಃ ನಿಜವಾಗುತ್ತಿದೆ. ಬರದ ಬೇಗೆಯಲ್ಲಿ ದಿನದಿಂದ ದಿನಕ್ಕೆ ಧವಸ, ಧಾನ್ಯಗಳ ಬೆಲೆ ಏರಿಕೆ ಬಿಸಿಲಿನ ಝಳಕ್ಕಿಂತಲೂ ಸುಡುತ್ತಿವೆ. ದಿನಬಳಕೆ ಆಹಾರ ಪದಾರ್ಥಗಳಲ್ಲಿ ಅತೀ ಮುಖ್ಯವಾದ 'ಅಕ್ಕಿ' ಬೆಲೆಯಂತೂ ಗಗನಕ್ಕೇರುತ್ತಿದೆ. ಅದರಲ್ಲೂ ಅಕ್ಕಿ ತಳಿಗಳ ರಾಜ 'ರಾಜಮುಡಿ' ಸದ್ಯದಲ್ಲೇ ಶತಕ ಬಾರಿಸಲಿದೆ. ಎರಡ್ಮೂರು ವರ್ಷಗಳ ಹಿಂದೆ ಕೆ.ಜಿಗೆ 30–40 ರೂ., ಇದ್ದಂತಹ 'ರಾಜಮುಡಿ' ಅಕ್ಕಿ ಬೆಲೆ 80–90 ರೂಗಳಾಗಿದ್ದು, ಕೆಲ ದಿನಗಳಲ್ಲಿಯೇ ನೂರರ ಗಡಿ ದಾಟುವ ಸಾಧ್ಯತೆ ಇದೆ.

ರಾಜ್ಯ ಸರ್ಕಾರ 'ಅನ್ನಭಾಗ್ಯ' ಯೋಜನೆಯಡಿ ಉಚಿತ ಪಡಿತರ ನೀಡುತ್ತಿದ್ದರೂ ಮಾರುಕಟ್ಟೆಗಳಲ್ಲಿ ಇತರೆ ಅಕ್ಕಿ ಬೆಲೆ ಏರುತ್ತಲೇ ಇದೆ. 'ಸೋನಾ ಮಸೂರಿ' 'ಬುಲೆಟ್' ಸೇರಿದಂತೆ ಇತರೆ ಎಲ್ಲಾ ಬ್ರಾಂಡ್ ಅಕ್ಕಿಗಳ ಬೆಲೆ ಕಳೆದ ಎರಡ್ಮೂರು ತಿಂಗಳಲ್ಲಿ ಕೆ.ಜಿಗೆ 10–15 ರೂ. ಹೆಚ್ಚಳವಾಗಿದೆ. ಹಾಗೆಯೇ ಧಾನ್ಯಗಳ ಪೈಕಿ ಹುರುಳಿಕಾಳು ಕೆ.ಜಿಗೆ 90–100 ರೂ., ಹೆಸರುಕಾಳು ಕೆ.ಜಿಗೆ 135–140 ರೂ., ಹಲಸಂದೆ ಕಾಳು ಕೆ.ಜಿಗೆ 105–110 ರೂ., ಅವರೇಕಾಳು ಕೆ.ಜಿಗೆ 155–160 ರೂ.ಗೆ ಮಾರಾಟವಾಗುತ್ತಿದೆ.

ಹಾಗೆಯೇ ಕಡಲೆಕಾಳು ಕೆ.ಜಿಗೆ 82–90 ರೂ., ಉದ್ದಿನ ಕಾಳು ಕೆ.ಜಿಗೆ 150–155 ರೂ., ತೊಗರಿಬೇಳೆ ಕಾಳು ಕೆ.ಜಿಗೆ 175–180 ರೂ., ಕಡಲೆಬೇಳೆ ಕೆ.ಜಿಗೆ 98–100 ರೂ., ಕಡಲೆ ಬೀಜ 150–155 ಕೆ.ಜಿಗೆ ರೂ., ಹುರಿಗಡಲೆ ಕೆ.ಜಿಗೆ 116–120 ರೂ., ಒಣ ಮೆಣಸಿನಕಾಯಲ್ಲಿ ಬ್ಯಾಡಗಿ ಮೆಣಸಿಕಾಯಿ ಕೆ.ಜಿಗೆ 450–500, ಗುಂಟೂರು ಮೆಣಸಿನಕಾಯಿ 220–250 ರೂ.ನಂತೆ ಮಾರಾಟವಾಗುತ್ತಿದ್ದು, ಹುಣಸೇಹಣ್ಣು, ಕೊತ್ತಂಬರಿ ಬೀಜ ಸೇರಿದಂತೆ ಧಾನ್ಯಗಳ(ಕಾಳು) ಬೆಲೆಯೂ ಏರಿಕೆಯಾಗಿದೆ.

**ಇನ್ನಷ್ಟು ಸಿರಿ..!:** ಆರೋಗ್ಯ ಆಹಾರ ಪದಾರ್ಥಗಳೆಂದು ಬಾರೀ ಪ್ರಚಾರದಲ್ಲಿರುವ 'ಸಿರಿಧಾನ್ಯ'ಗಳ ಬೆಲೆ ಇನ್ನಷ್ಟು ಸಿರಿಯಾಗಿದೆ...! 30–50 ರೂ.ವರೆಗೆ ಇದ್ದಂತಹ 'ನವಣೆ' ಕೆ.ಜಿಗೆ ಬರೋಬ್ಬರಿ 120–125 ರೂ.ಗೆ ಏರಿಕೆಯಾದರೆ, 'ಹಾರಕ' ಕೆ.ಜಿಗೆ 80 ರೂ.ನಿಂದ 105–110 ರೂ. ಆಗಿದೆ. 'ಉದಲು' ಕೆ.ಜಿಗೆ 90 ರಿಂದ 110 ರೂ., 'ಸಾಮೆ' ಕೆ.ಜಿಗೆ 90 ರಿಂದ 105 ರೂ., 'ಕೊರಲೆ' ಕೆ.ಜಿಗೆ 140 ರಿಂದ 280 ರೂ.ಗೆ ಏರಿಕೆಯಾಗಿದೆ. ಬೆಲೆ ಏರಿಕೆಯಾಗುತ್ತಿದ್ದರೂ ಆರೋಗ್ಯದ ದೃಷ್ಟಿಯಿಂದ ಸಿರಿಧಾನ್ಯಗಳ ಬೇಡಿಕೆಯೂ ಸಹ ಹೆಚ್ಚಾಗುತ್ತಿದೆ.

**ನಿರಾಳ ತಂದ ಎಣ್ಣೆ:** ಕೊರೊನಾ ಲಾಕ್‌ಡೌನ್ ಹಾಗೂ ರಷ್ಯಾ–ಉಕ್ರೇನ್ ಯುದ್ಧ ಆರಂಭದಲ್ಲಿ ಲೀಟರ್‌ಗೆ 200 ರೂ. ಸನಿಹದಲ್ಲಿದ್ದ ಅಡುಗೆ ಎಣ್ಣೆ ಬೆಲೆ ಇಳಿಕೆಯಾಗಿರುವುದು ಗ್ರಾಹಕರಲ್ಲಿ ಕೊಂಚ ನಿರಾಳ ತಂದಿದೆ. ಅಡುಗೆ ಎಣ್ಣೆಯ ಪ್ರಮುಖ ಬ್ರಾಂಡ್‌ಗಳಾದ ಸನ್‌ಪ್ಯೂರ್ ಒಂದು ಲೀಟರ್‌ಗೆ 108 ರೂ., ಫಾರ್ಚೂನ್ 110., ಗೋಲ್ಡ್ ವಿನ್ನರ್ 110., ಫ್ರೀಡಂ 108., ಇಮಾಮಿ 110., ಪಾಮ್ ಆಯಿಲ್ 85ರೂ., ರುಚಿ ಗೋಲ್ಡ್ 85 ರೂ. ಇದ್ದರೆ ರೈಸ್‌ಬ್ರಾನ್ ಅಡುಗೆ ಎಣ್ಣೆಗಳಲ್ಲಿ ಸನ್‌ಪ್ಯೂರ್ 110 ರೂ., ಫ್ರೀಡಂ 115 ರೂ., ಇಮಾಮಿ 125 ರೂ., ಫಾರ್ಚೂನ್ 130 ರೂ. ಇದೆ. ಡಾಲ್ಡಾ ತುಪ್ಪಗಳಲ್ಲಿನ ಪ್ರಮುಖ ಬ್ರಾಂಡ್ ಆದ ಆರ್‌ಜಿ ತುಪ್ಪ ಕೆ.ಜಿಗೆ 140, ನಂದಿನಿ 600 ರೂ. ಹಾಗೂ ಜಿಆರ್‌ಬಿ ತುಪ್ಪ ಕೆ.ಜಿಗೆ 740 ರೂ.ನಂತೆ ಮಾರಾಟವಾದರೆ ಗಾಣದ ಕೊಬ್ಬರಿ ಎಣ್ಣೆ ಲೀಟರ್‌ಗೆ 180 ರೂ., ಪ್ಯಾರಾಚೂಟ್ ಕೊಬ್ಬರಿ ಎಣ್ಣೆ 310 ರೂ. ಇದೆ.

**ಮುಂದೇನು...!:** ಕೈಕೊಟ್ಟ ಮಳೆಯಿಂದಾಗಿ ಜಲಾಶಯಗಳು ಖಾಲಿಯಾಗುತ್ತಿವೆ. ಭೂಮಿ ಒಣಗುತ್ತಿದ್ದು, ಕೊಳವೆ ಬಾವಿಗಳಲ್ಲಿ ಅಂತರ್ಜಲ ಮಟ್ಟವೂ ಕುಸಿಯುತ್ತಿದೆ. ಇದರ ನಡುವೆ ವಿದ್ಯುತ್ ಕಣ್ಣಾಮುಚ್ಚಾಲೆಯಿಂದಾಗಿ ವರ್ಷಕ್ಕೆ ಮೂರು ಬೆಳೆ ತೆಗೆಯುತ್ತಿದ್ದ ರೈತರು ಒಂದು ಬೆಳೆ ತೆಗೆಯುವುದು ಕಷ್ಟವಾಗಿದೆ. ಇದೆಲ್ಲದರ ಪರಿಣಾಮದಿಂದಾಗಿ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗುತ್ತಿದೆ. ಇದೇ ರೀತಿ ಮುಂದುವರೆದರೆ ನಮ್ಮ ಮುಂದಿನ ಸ್ಥಿತಿಯೇನು ಎಂಬುದು ಮಧ್ಯಮ ಹಾಗೂ ಬಡ ಕುಟುಂಬಸ್ಥರನ್ನು ಅತೀವ ಕಾಡತೊಡಗಿದೆ. ದವಸ–ಧಾನ್ಯಗಳ ನಡುವೆ ಪೆಟ್ರೋಲ್, ಡೀಸೆಲ್, ಗ್ಯಾಸ್ ಬೆಲೆಯೂ ಹೆಚ್ಚಿರುವುದು ಜನಸಾಮಾನ್ಯರನ್ನು ಕಂಗೆಡಿಸಿದೆ.

**ಬೇಡಿಕೆ ಕಡಿಮೆಯಾಗಿಲ್ಲ:** ದಿನಬಳಕೆ ಆಹಾರ ಪದಾರ್ಥಗಳ ಬೆಲೆ ಹೆಚ್ಚಾದರೂ ಸದ್ಯಕ್ಕೆ ಬೇಡಿಕೆ ಕಡಿಮೆಯಾಗಿಲ್ಲ. ಅದರಲ್ಲೂ 'ಸಿರಿಧಾನ್ಯ'ಗಳ ಬೆಲೆ ಕಳೆದ ಎರಡ್ಮೂರು ವರ್ಷದಲ್ಲಿ ಎರಡು ಪಟ್ಟು ಹೆಚ್ಚಾಗಿದೆ. ಆದರೂ 'ಸಿರಿಧಾನ್ಯ'ಗಳನ್ನು ಕೊಂಡುಕೊಳ್ಳುವವರ ಸಂಖ್ಯೆ ಹೆಚ್ಚಾಗುತ್ತಿದೆ. ಸರ್ಕಾರ ಆಹಾರ ಪದಾರ್ಥಗಳ ಬೆಲೆ ಕಡಿಮೆ ಮಾಡುವ ಕುರಿತು ಗಂಭೀರವಾಗಿ ಚಿಂತಿಸುವ ಅನಿವಾರ್ಯತೆ ಎದುರಾಗಿದೆ ಎಂದು ಮೈಸೂರು ಸಂತೆಪೇಟೆ ವರ್ತಕ ಹರ್ಷ ಕಳವಳ ವ್ಯಕ್ತಪಡಿಸಿದರು.

### ಮತ್ತೆ ಹೆಮ್ಮಾರಿ ಹೊಕ್ಕರಿಸಿದರೆ ಮುಗಿತೂ ನಮ್ ಕಥೆ...!

ಮಹಾಮಾರಿ ಕೊರೊನಾ ಸೋಂಕು ಮತ್ತೆ ಹೆಚ್ಚಾದರೆ ಮೊದಲಿಗಿಂತ ಹೀನಾಯ ಸ್ಥಿತಿ ತಲುಪುವುದರಲ್ಲಿ ಯಾವುದೇ ಸಂಶಯವಿಲ್ಲ. ಆಹಾರ ಪದಾರ್ಥಗಳ ಬೆಲೆ ಕೇಳಿಯೇ ಸುಸ್ತಾಗುತ್ತಿದೆ ದೇಹದಲ್ಲಿ ನಿಶಕ್ತಿ ಕಾಡುತ್ತಿದೆ ಇನ್ನೂ ಮತ್ತೊಮ್ಮೆ ಕೊರೊನಾ ಸೋಂಕು ಬಂದರೆ ನಮ್ ಕಥೆ ಮುಗಿದಂತೆಯೇ. ಬರುವ ಮೂರ್ ಕಾಸು ಆದಾಯವೂ ಇಲ್ಲದಂತಾಗಿ ಮೂಲೆ ಸೇರಬೇಕಾಗುತ್ತದೆ. ಬರಗಾಲದಿಂದ ಕುಡಿಯುವ ನೀರಿಗೂ ಪರದಾಡುವ ಹೀನಾಯ ಪರಿಸ್ಥಿತಿ ಎದುರಿದ್ದು, ಬೇಡದ ವಿಚಾರಗಳಿಗೆ ಕಚ್ಚಾಡುತ್ತಿರುವ ಜನ ನಾಯಕರು ಸಾಮಾನ್ಯ ಜನರ ಕಷ್ಟವನ್ನೊಮ್ಮೆ ನೋಡಲಿ ಎಂದು ಮೈಸೂರಿನ ಪ್ರಜ್ಞಾವಂತ ನಾಗರಿಕರು ಸರ್ಕಾರಕ್ಕೆ 'ಮೈಸೂರು ಮಿತ್ರ'ನ ಮೂಲಕ ಮೊರೆ ಇಟ್ಟಿದ್ದಾರೆ.

### ತರೋದ್ ಮೂರು, ಖರ್ಚು ಆರು..!

ದಿನವಿಡೀ ಕೆಲಸ ಮಾಡಿ ಮೂರ್ ಕಾಸು ಸಂಪಾದನೆ ಮಾಡಿದರೆ, ಮನೆ ಬಾಡಿಗೆ, ದಿನಸಿ, ಲೋನ್ ಇವೆಲ್ಲಾ ಸೇರಿ ಖರ್ಚಾಗುವುದು ಆರ್ ಕಾಸು. ಬೆಲೆಗಳ ಏರಿಕೆ, ಆದಾಯ ಇಳಿಕೆ, ವಿದ್ಯಾಭ್ಯಾಸಕ್ಕೆ ತಕ್ಕಂತೆ ದೊರಕದ ಉದ್ಯೋಗ ಜನರನ್ನು ಮತ್ತಷ್ಟು ಹೈರಾಣಾಗಿಸುತ್ತಿದೆ. ಕನ್ನಡಕ ಹಾಕಿದ್ದರೂ ಕಣ್ಣಿನ ಉರಿ ಬರಿಸುವಂತಹ ಸುಡು ಬಿಸಿಲಿನ ನಡುವೆ ಆಹಾರ ಪದಾರ್ಥಗಳನ್ನು ಕೊಂಡು ತಿನ್ನಲಾಗದಂತಹ ಶೋಚನೀಯ ಸ್ಥಿತಿ ಸನಿಹವಾಗಿದೆ ಎಂದು ಹಲವರು ಆತಂಕ ವ್ಯಕ್ತಪಡಿಸಿದ್ದಾರೆ.

## ಅಕ್ಕಿ ಬೆಲೆ ನಿಯಂತ್ರಣಕ್ಕೆ 'ಭಾರತ್ ಬ್ರಾಂಡ್' ಅಡಿ ಅಕ್ಕಿ ಮಾರಾಟ ಪ್ರಸ್ತಾಪ

**ನವದೆಹಲಿ:** ಗಗನ ಮುಖಿಯಾಗುತ್ತಿರುವ ಅಕ್ಕಿ ಬೆಲೆ ನಿಯಂತ್ರಿಸುವ ನಿಟ್ಟಿನಲ್ಲಿ ಭಾರತ ಸರ್ಕಾರ ಮುಂದಾಗಿದ್ದು, ಭಾರತೀಯ ಆಹಾರ ನಿಗಮದ ಅಕ್ಕಿಯನ್ನು 'ಭಾರತ್ ಬ್ರಾಂಡ್' ಅಡಿಯಲ್ಲಿ ಮಾರಾಟ ಮಾಡುವ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರ ಪರಿಶೀಲನೆ ನಡೆಸುತ್ತಿದೆ. ಆದರೆ ರಿಯಾಯಿತಿ ದರದ ಕುರಿತು ಈವರೆಗೂ ಯಾವುದೇ ನಿರ್ಧಾರ ಕೈಗೊಂಡಿಲ್ಲ ಎಂದು ಆಹಾರ ಇಲಾಖೆಯ ಅಧಿಕಾರಿಗಳು ಬುಧವಾರ ಮಾಧ್ಯಮಗಳಿಗೆ ತಿಳಿಸಿದ್ದಾರೆ.


ದೇಶೀಯವಾಗಿ ಅಕ್ಕಿ ಲಭ್ಯತೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಭಾರತೀಯ ಆಹಾರ ನಿಗಮ (ಎಫ್‌ಸಿಐ) ದಲ್ಲಿರುವ ಅಕ್ಕಿಯನ್ನು ಮುಕ್ತ ಮಾರುಕಟ್ಟೆ ಯೋಜನೆಯಡಿ (ಒಎಂಎಸ್‌ಎಸ್)ಯಲ್ಲಿ ಇ– ಹರಾಜು ಮೂಲಕ ಮಾರಾಟ ಮಾಡುವ ಪ್ರಸ್ತಾವನೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. 'ಭಾರತ್ ರೈಸ್' ಬ್ರಾಂಡ್ ಅಡಿಯಲ್ಲಿ ಮಾರಾಟ ಮಾಡಲಾಗುವ ಈ ಅಕ್ಕಿಯ ಬೆಲೆಯನ್ನು ಇನ್ನಷ್ಟೇ ನಿಗದಿಪಡಿಸಬೇಕಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸದ್ಯ ಎಫ್‌ಸಿಐನಲ್ಲಿರುವ ಗುಣಮಟ್ಟದ ಅಕ್ಕಿಯನ್ನು ಪ್ರತಿ ಕೆ.ಜಿ.ಗೆ 29ರೂ. ರಂತೆ ಮಾರಾಟ ಮಾಡಲಾಗುತ್ತಿದೆ. ಆದರೆ ಭಾರತ್ ರೈಸ್ ಬ್ರಾಂಡ್‌ನಲ್ಲಿ ಇದೇ ಬೆಲೆಗೆ ಮಾರಾಟ ಮಾಡಬೇಕೇ ಅಥವಾ ರಿಯಾಯಿತಿ ದರದಲ್ಲಿ ಮಾರಾಟ ಮಾಡಬೇಕೇ ಎಂಬುದನ್ನು ವಿವಿಧ ಸಚಿವರು ಚರ್ಚಿಸಿ ನಿರ್ಧರಿಸಲಿದ್ದಾರೆ ಎಂದು ಮೂಲಗಳು ಹೇಳಿವೆ.

ಭಾರತ್ ಬ್ರಾಂಡ್ ಅಡಿಯಲ್ಲಿ ಸರ್ಕಾರ ಈಗಾಗಲೇ ಗೋಧಿ ಹಿಟ್ಟು ಮಾರಾಟ ಮಾಡುತ್ತಿದೆ. ಒಎಂಎಸ್‌ಎಸ್ ಯೋಜನೆಯಡಿ ಕೇವಲ 3.04 ಲಕ್ಷ ಟನ್‌ನಷ್ಟು ಅಕ್ಕಿಯನ್ನು ಮಾತ್ರ ಎಫ್‌ಸಿಐ ಮಾರಾಟ ಮಾಡಲು ಸಾಧ್ಯ. ನೋಡಲ್ ಸಂಸ್ಥೆ ಅಡಿಯಲ್ಲಿ 82.89 ಲಕ್ಷ ಟನ್‌ನಷ್ಟು ಗೋಧಿಯನ್ನು ಮಾರಾಟ ಮಾಡಿದೆ. ಹಿಂದಿನ ಕೆಲ ವರ್ಷಗಳಿಗೆ ಹೋಲಿಸಿದರೆ ಅಕ್ಕಿ ಬೆಲೆಯು ವರ್ಷದಿಂದ ವರ್ಷಕ್ಕೆ ಶೇ 13ರ ದರದಲ್ಲಿ ಏರಿಕೆಯಾಗುತ್ತಿದೆ. 2024ರ ಲೋಕಸಭಾ ಚುನಾವಣೆ ಹೊಸ್ತಿಲಲ್ಲಿ ಧಾನ್ಯಗಳ ಬೆಲೆ ಏರಿಕೆ ಕುರಿತು ಸರ್ಕಾರ ಗಂಭೀರವಾಗಿ ಚಿಂತಿಸುತ್ತಿದೆ ಎಂದೆನ್ನಲಾಗಿದೆ.

## ಕಾಶ್ಮೀರಿ ನಾಗರಿಕರ ಸಾವು: ಇಂತಹ ಘಟನೆ ಮರುಕಳಿಸದಂತೆ ನೋಡಿಕೊಳ್ಳಿ

### ಸೇನೆಗೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಕಿವಿಮಾತು



**ಶ್ರೀನಗರ:** ಜಮ್ಮು ಮತ್ತು ಕಾಶ್ಮೀರದಲ್ಲಿ ಮೂವರು ನಾಗರಿಕರ ಅನುಮಾನಾಸ್ಪದ ಸಾವುಗಳ ಹಿನ್ನೆಲೆಯಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಭಾರತೀಯ ಸೇನೆಗೆ ದೇಶವನ್ನು ಮಾತ್ರವಲ್ಲದೆ ದೇಶವಾಸಿಗಳ ಹೃದಯವನ್ನೂ ಗೆಲ್ಲಬೇಕು ಎಂದು ಹೇಳಿದ್ದಾರೆ. ಇನ್ನಾದರೂ ಜಾಗೃತರಾಗಬೇಕು ಎಂದು ಹೇಳಿದ್ದಾರೆ.

ದೇಶವನ್ನು ಶತ್ರುಗಳಿಂದ ರಕ್ಷಿಸುವುದಷ್ಟೇ ಅಲ್ಲ, ಜನರ ಮನ ಗೆಲ್ಲುವ ಹೊಣೆಗಾರಿಕೆಯೂ ಸೇನೆಯ ಮೇಲಿದೆ. ಇಂತಹ ಘಟನೆಗಳು ಮರುಕಳಿಸದಂತೆ ನೋಡಿಕೊಳ್ಳಿ ಎಂದು ರಾಜನಾಥ್‌ಸಿಂಗ್ ಹೇಳಿದ್ದಾರೆ. ಸೇನೆಯನ್ನುದ್ದೇಶಿಸಿ ಮಾತನಾಡಿದ ಅವರು, ಈ ದೇಶವು ನಿಮ್ಮೆಲ್ಲರಿಗೂ ಋಣಿಯಾಗಿದೆ. ಮಾತೃಭೂಮಿಯ ಸೇವೆಯಲ್ಲಿ ನಿಮ್ಮ ತ್ಯಾಗವು ಅಪ್ರತಿಮವಾಗಿದೆ. ಅದಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಈ ಸರ್ಕಾರ ಯಾವಾಗಲೂ ನಿಮ್ಮೊಂದಿಗೆ ಇರುತ್ತದೆ. ನಾವು ಯಾವಾಗಲೂ ಇರುತ್ತೇವೆ. ನಾವು ನಿಮಗೆ ಭರವಸೆ ನೀಡುತ್ತೇವೆ. ನಿಮ್ಮ ಕಲ್ಯಾಣವು ನಮ್ಮ ಮೊದಲ ಆದ್ಯತೆಯಾಗಿದೆ ಎಂದರು. ಯುದ್ಧವನ್ನು ಗೆಲ್ಲುವುದು, ಭಯೋತ್ಪಾದಕರ ವಿರುದ್ಧ ಹೋರಾಡುವುದು ನಮ್ಮ ಉದ್ದೇಶ ಎಂದು ನಾನು ನಂಬುತ್ತೇನೆ. ಆದರೆ ಅದೇ ಸಮಯದಲ್ಲಿ ದೇಶವಾಸಿಗಳ ವಿಶ್ವಾಸವನ್ನು ಗೆಲ್ಲುವ ಜವಾಬ್ದಾರಿಯೂ ನಿಮ್ಮ ಹೆಗಲ ಮೇಲಿದೆ ಎಂದು ರಾಜನಾಥ ಸಿಂಗ್ ಹೇಳಿದರು. ರಕ್ಷಣಾ ಸಚಿವರನ್ನು ಸೇನಾ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ, ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಮತ್ತು ಉತ್ತರ ಕಮಾಂಡ್ ಮುಖ್ಯಸ್ಥ ಲೆಫ್ಟಿನೆಂಟ್ ಜನರಲ್ ಉಪೇಂದ್ರ ದ್ವಿವೇದಿ ಸ್ವಾಗತಿಸಿದರು.

ಕಳೆದ ಗುರುವಾರ ರಜೌರಿಯಲ್ಲಿ ನಡೆದ ದಾಳಿಯಲ್ಲಿ ನಾಲ್ವರು ಸೇನಾ ಯೋಧರು ಹುತಾತ್ಮರಾಗಿದ್ದರು. ನಂತರ ಸೇನೆಯು ಮೂವರು ಸ್ಥಳೀಯ ಯುವಕರನ್ನು ವಿಚಾರಣೆಗಾಗಿ ಕರೆದೊಯ್ದಿತ್ತು. ನಂತರ ಅವರು ಶವವಾಗಿ ಪತ್ತೆಯಾಗಿದ್ದರು. ಇದು ಸ್ಥಳೀಯ ಆಕ್ರೋಶಕ್ಕೆ ಕಾರಣವಾಗಿತ್ತು.







## PUBLIC NOTICE

The public at large are hereby informed that my client Bipin B Patel S/o Babubhai N Patel through his power of attorney holder Sandeep D Rao, S/o Dinkerlal.M Rao, Residing at #119, KRS Road, Mysuru, has filed the suit in OS No 1292/2019 on the file of the XII AFM (Principal civil judge & JMFC Mysuru) Court at Mysuru for various reliefs against Dr. N.Chandraban Singh residing at No. 967 and 988, 7th Main, Gokulam 3rd stage, Mysuru in respect of the property which is more fully described in the schedule below. The above suit is pending adjudication.

When the facts stood so, It has come to the knowledge of my client that the said Dr. N.Chandraban Singh is intending to sell the property to third parties and dealing with the property and attempting to create a charge and lease hold rights etc., Hence public's are hereby informed not to venture into any type of transaction with respect to the schedule property either with Dr. N.Chandraban Singh or with anybody. In spite of this notice if anybody ventures into any such transaction they will be doing so at their own risk and cost.

**SCHEDULE**

The House property and the compound with gate situated in all the piece and parcel of dry land measuring 4 Acres 33 Guntas of Sy.No.4 of Kurbarahalli Village and 7 (Seven) Guntas out of Sy. No. 41 of Alanahalli village (totally 5 acres bearing block No.8 and 8A respectively situated in Kasaba Hobli, Mysore Taluk bounded by:

North : By block No.7 and road leading to Sakkahalli Village
South : By block No.9
East : By road leading to Sakkahalli and Lalitadripura
West : By remaining portion of Sy. No.4 of Kurabarahalli.

Sd/- K.R.Shivashankar
Advocate, Kar No. 206/1975
No. 1466/1, 1st floor, 3rd Cross, Thyagaraja Road, Mysuru-570 004.
Mob: 94484 13041
Date : 27.12.2023 Place : Mysuru

## PUBLIC NOTICE

Notice is hereby given that my client is intending to purchase the schedule mentioned property from its owner Sri. L. Nagendra, Son of Sri Lingappa, Residing at Door No.2373/3, 5th Main, 1st Cross, New Kantharaja Urs Road, Jayanagara, Mysuru.

Any Person/s having or claiming any right, title, estate or interest by way of inheritance, mortgage, sale, lease, lien, charge, trust, maintenance, easements, transfer, license, possession, gift, encumbrance or in whatsoever manner are hereby required to give notice of the same to the undersigned in the address mentioned below within 7 days from the date of publication thereof, together with the copies of all documents on the basis of which such claims are made, failing which any such right, title, interest or claim, if any will be deemed to have been waived and not binding on my client and my client will proceed to conclude the transaction of purchase without reference to the same, if any.

**SCHEDULE**

All that piece and parcel of House property bearing No.2942, measuring East to West 40 feet and North to South 72 feet situated at 3rd cross, Saraswathipuram, Chamaraja Mohalla, Mysuru-570009 and bounded on East by: Property bearing No.46, West by: Property belonging to MUDA, Mysuru, North by: 30 feet Road, South by, Conservancy.

Ravi Kiran S . B.Sc, LL.B
Advocate
Office: 1143/1E, Chanakya Circle, Geetha Road, Chamarajapuram, Mysore - 570004
Ph: Off: 0821- 4287199
M: 9980776066
Place: Mysore
Date: 27-12-2023

## ಸಾರ್ವಜನಿಕರ ಗಮನಕ್ಕೆ

ಬಿದರಹಳ್ಳಿ ಗ್ರಾಮ, ಕಂದಲಿಕೆ ಹೋಬಳಿ, ಸರಗೂರು ತಾಲ್ಲೂಕು, ಮೈಸೂರು ಜಿಲ್ಲೆಯ ಸ. ನಂ. 83 (ಹಳೇ ಸರ್ವೆ ನಂ.83/2)ರಲ್ಲಿ 23 ಎಕರೆ 10 ಗುಂಟೆ ವಿಸ್ತೀರ್ಣದ ಜಮೀನು ದಿನಾಂಕ:02.09.2014ರಂದು ನೋಂದಾಯಿಸಿದ ದಾಖಲೆಯ ಮೇರೆಗೆ ಡಾ|| ಕಿರಣ ಎನ್. ಮುಗದೂರರವರ ಸ್ವಾಧೀನಾನುಭವದಲ್ಲಿರುತ್ತದೆ. ಬೇರೆ ಯಾರಿಗೂ ಪರಭಾರೆ, ಕ್ರಯ, ದಾನ, ಭೋಗ್ಯ, ಅಡಮಾನ, ಆಧಾರ, ಇತರೆ ವಗೈರೆಗಳನ್ನು ಮಾಡಲಾಗುವುದಿಲ್ಲ ಎಂದು ತಿಳಿಸಬಯಸುತ್ತೇನೆ.

ಡಾ|| ಕಿರಣ ಎನ್. ಮುಗದೂರ
ಮೊ:. 92435 05777

## 10ನೇ ವರ್ಷದ ಪುಣ್ಯಸ್ಮರಣೆ



**ಶ್ರೀಮತಿ ಡಿ. ಮಂಜುಳಾ**
ಕೂರ್ಗಳ್ಳಿ ಗ್ರಾ.ಪಂ. ಸದಸ್ಯರು, ಹೂಟಗಳ್ಳಿ

ನೀವು ನಮ್ಮನ್ನಗಲಿ ಇಂದಿಗೆ 10 ವರ್ಷ ಕಳೆದರೂ ನಿಮ್ಮ ನೆನಪು ನಮ್ಮ ಮನದಲ್ಲಿ ಚಿರಾಯು ಆಗಿದೆ. ನಿಮ್ಮ ಆತ್ಮಕ್ಕೆ ಚಿರಶಾಂತಿ ಕೋರುವ,

ಪತಿ : ಬಿ.ಕೆ. ಹುಚ್ಚಪ್ಪ, ಪುತ್ರ : ಕಿರಣ್, ಸೊಸೆ : ಶ್ರುತಿ, ಪುತ್ರಿ : ಸುಷ್ಮಾ, ಅಳಿಯ: ಮಹದೇಶ್, ಮೊಮ್ಮಕ್ಕಳು ಹಾಗೂ ಕುಟುಂಬವರ್ಗ ಮತ್ತು ಬಂಧು–ಮಿತ್ರರು

## ಗೌರವಾನ್ವಿತ ಹಿರಿಯ ಶ್ರೇಣಿ ಸಿವಿಲ್ ಜಡ್ಜ್ ನ್ಯಾಯಾಲಯ, ಹುಣಸೂರು.

ಎಂ.ವಿ.ಸಿ.ನಂ 43/2021

**ಅರ್ಜಿದಾರರು:** ಶ್ರೀಮತಿ ಪುಟ್ಟಮ್ಮ ಕೋಂ. ಲೇಟ್ ಮರಿಸಿದ್ದನಾಯಕ, ಅರಳೀಮರದ ಬೀದಿ, ಕಲ್ಕುಣಿಕೆ, ಹುಣಸೂರು ಪಟ್ಟಣ. **ವಿರುದ್ಧ**

**ಎದುರುದಾರರುಗಳು:** ಉಮೇಶ, 23 ವರ್ಷ, ಬಿನ್. ಲೇಟ್ ರವಿ, ಆರ್.ಟಿ.ಓ ಕಛೇರಿ ಹತ್ತಿರ, ಹುಣಸೂರು ನಗರ, ಹುಣಸೂರು ಮತ್ತು ಇತರರು.

**ಪ್ರಕಟಣೆ**

ಮೇಲ್ಕಂಡ ಅರ್ಜಿದಾರರು ಎದುರುದಾರರಾದ ಉಮೇಶ ಬಿನ್.ಲೇಟ್ ರವಿ, ರೇವಣ್ಣ ಹೆಚ್.ಎಸ್ ಬಿನ್ ಲೇಟ್ ಸಿದ್ದಾಚಾರ್ ಹಾಗು ಐ.ಸಿ.ಐ.ಸಿ.ಐ. ಇನ್ಸೂರೆನ್ಸ್ ಕಂಪೆನಿ, ಹುಣಸೂರು ಶಾಖೆ, ಇವರುಗಳ ವಿರುದ್ಧ ದಿನಾಂಕ 26-08-2019 ರಂದು ನಡೆದ ಅಪಘಾತದ ಬಗ್ಗೆ ಪರಿಹಾರಕ್ಕಾಗಿ ಈ ಮೇಲ್ಕಂಡ ಅರ್ಜಿಯನ್ನು ಹುಣಸೂರು ಹಿರಿಯ ಶ್ರೇಣಿ ಸಿವಿಲ್ ಜಡ್ಜ್ ನ್ಯಾಯಾಲಯದಲ್ಲಿ ಸಲ್ಲಿಸಿದ್ದು, 1ನೇ ಎದುರುದಾರರಾದ ಉಮೇಶ, ಬಿನ್. ಲೇಟ್ ರವಿ, ಹುಣಸೂರು ಆರ್.ಟಿ.ಓ ಆಫೀಸಿನ ಹತ್ತಿರ ಮನೆ ವಿಳಾಸದಲ್ಲಿ ವಾಸವಿದ್ದರೂ ಸಹ ಈ ನ್ಯಾಯಾಲಯದಿಂದ ಅನೇಕ ಬಾರಿ ನೋಟೀಸು ಜಾರಿ ಮಾಡಿದರು ಅದೇ ವಿಳಾಸದಲ್ಲ 1ನೇ ಎದುರುದಾರರು ಇದ್ದರೂ ಸಹ ತೆಗೆದು ಕೊಂಡಿರುವುದಿಲ್ಲ. ಸದರಿ ದಾವಾವು ದಿನಾಂಕ 02-02-2024 ರಂದು ಬೆಳಗ್ಗೆ 11-00 ಘಂಟೆಗೆ ನಿಗದಿಪಡಿಸಿದ್ದು ನೀವು ನ್ಯಾಯಾಲಯವು ನಿಗದಿ ಪಡಿಸಿರುವ ದಿನಾಂಕದಂದು ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗತಕ್ಕದ್ದು. ತಪ್ಪಿದ್ದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು.

ನ್ಯಾಯಾಲಯದ ಅಪ್ಪಣೆಗೆ ಮೇರೆಗೆ
ಸಹಿ/– ಶಿರಸ್ತೇದಾರರು
ಪ್ರಿನ್ಸಿಪಲ್ ಹಿರಿಯ ಶ್ರೇಣಿ ಸಿವಿಲ್ ಜಡ್ಜ್
ನ್ಯಾಯಾಲಯ, ಹುಣಸೂರು
ಬಿ.ವಿ.ಸುರೇಶ್‌ಕುಮಾರ್, ಬಿಕಾಂ, ಎಲ್‌ಎಲ್‌ಬಿ, ವಕೀಲರು, ಹುಣಸೂರು

## ಮೈಸೂರು ಮಹಾನಗರಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ನೀಸ&ಒಚ (ಪೂರ್ವ) ವಿಭಾಗ,
ವಾವಿನೀಸ ಆವರಣ, ಯಾದವಗಿರಿ, ಮೈಸೂರು.

ಟೆಂಡರ್ ಪ್ರಕಟಣೆ ಸಂಖ್ಯೆ: ಮೈನಪಾ/ಕಾಇಂ/ನೀಸ&ಒಚ(ಪೂರ್ವ)/ಟಿಎನ್–9/882/2023–24 ದಿನಾಂಕ: 26.12.2023

### ಅಲ್ಪಾವಧಿ ಟೆಂಡರ್ ಪ್ರಕಟಣೆ

### ಕರ್ನಾಟಕ ಸರ್ಕಾರದ ಕೆ.ಪಿಪಿ ಪೋರ್ಟಲ್ ಮುಖಾಂತರ ಮಾತ್ರ

2020–21 ನೇ ಸಾಲಿನಲ್ಲಿ **Million Plus City (BBMP)** ಗೆ ಹಂಚಿಕೆಯಾದ 15ನೇ ಹಣಕಾಸು ಆಯೋಗದ ಘನತ್ಯಾಜ್ಯ ವಸ್ತು ನಿರ್ವಹಣೆಯ ಅನುದಾನವನ್ನು **Non- Million Plus City (BBMP)**ಗಳಿಗೆ ಮರು ಹಂಚಿಕೆ ಮಾಡಿ ಬಿಡುಗಡೆಗೊಳಿಸಲಿರುವ ಅನುದಾನದಡಿ **KTPP** ನಿಯಮಗಳಿಗೆ ಒಳಪಟ್ಟಂತೆ ಟೆಂಡರ್‌ಗಳಿಗೆ ಕರ್ನಾಟಕ ಸರ್ಕಾರದ ಕೆ.ಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

| | | | ಸಂಜೆ 4.00 ಗಂಟೆ ನಂತರ | ಸಂಜೆ 4.00 ಗಂಟೆ | ಸಂಜೆ 4.25 ಗಂಟೆ | ಸಂಜೆ 4.30 ಗಂಟೆ |
|---|---|---|---|---|---|---|
| ಕ್ರ. ಸಂ. | ವಿವರ | ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ) | ಕೆ.ಪಿಪಿ ಪೋರ್ಟಲ್ ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ | ಟೆಂಡರ್‌ನ ಪೂರ್ವಭಾವಿ ಸಭೆ | ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ | ಟೆಂಡರ್/ ತಾಂತ್ರಿಕ ಬಿಡ್ ತೆರೆಯುವ ದಿನಾಂಕ |
| 1 | ಮೈಸೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಲುವಾಗಿ ಕುವೆಂಪುನಗರ ಎಂ.ಬಿ.ಆರ್ ನಲ್ಲಿ 4.0 ಎಂ.ಎಲ್.ಡಿ ಸಾಮರ್ಥ್ಯದ ಜಲಸಂಗ್ರಹಾಗಾರವನ್ನು ನಿರ್ಮಿಸಿ 200 ಕೆ.ವಿ ಟ್ರಾನ್ಸ್‌ಫಾರ್ಮರ್ ಅಳವಡಿಸುವ ಕಾಮಗಾರಿ. | 468.50 | 27.12.2023 | 29.12.2023 | 03.1.2024 | 04.1.2024 |
| 2 | ಮೈಸೂರು ನಗರದ ಶ್ರೀರಾಂಪುರ ವಿವೇಕಾನಂದ ನಗರ ರಾಮಕೃಷ್ಣನಗರ ತ್ಯಾಜ್ಯ ನೀರು ನಿರ್ವಹಣೆಗಾಗಿ ಲಿಂಗಾಂಬುದಿ ಕೆರೆ ರಸ್ತೆಯಿಂದ ದಕ್ಷಿಣೇಶ್ವರ ರಸ್ತೆಯ ಸುಯೋಗ ಆಸ್ಪತ್ರೆ ಮುಂಭಾಗದಿಂದ ಉದಯರವಿ ರಸ್ತೆವರೆಗೂ ಮುಖ್ಯ ಒಳಚರಂಡಿ ಕೊಳವೆಮಾರ್ಗ ಅಳವಡಿಸುವ ಕಾಮಗಾರಿ. | 400.00 | | | | |
| 3 | ಮೈಸೂರು ನಗರದ ತ್ಯಾಜ್ಯ ನೀರು ನಿರ್ವಹಣೆಗಾಗಿ ವಸ್ತು ಪ್ರದರ್ಶನದ ಮೂಲಕ ಹಾದು ಹೋಗುವ ಮುಖ್ಯ ಒಳಚರಂಡಿ ಕೊಳವೆ ಮಾರ್ಗಕ್ಕೆ ಹಾರ್ಡಿಂಗ್ ವೃತ್ತದಿಂದ ಮಿರ್ಜಾರಸ್ತೆ, ಅರಮನೆ ಜಯಮಾರ್ತಾಂಡ ದ್ವಾರದ ಇಟ್ಟಿಗೆಗೂಡಿಗೆ ಸಂಪರ್ಕ ಕಲ್ಪಿಸುವ ಕಾಮಗಾರಿ. | 403.50 | | | | |
| 4 | ಮೈಸೂರು ನಗರದಲ್ಲಿ ತ್ಯಾಜ್ಯ ನೀರು ನಿರ್ವಹಣೆಗಾಗಿ ಟಿಪ್ಪು ವೃತ್ತದಿಂದ ಹಳೇ ಮೈಸೂರು–ಬೆಂಗಳೂರು ಮಾರ್ಗವಾಗಿ ಕೆಸರೆ ಶೋಭಾ ಗಾರ್ಡನ್‌ವರೆಗೆ ಮುಖ್ಯ ಒಳಚರಂಡಿ ಕೊಳವೆಮಾರ್ಗ ಅಳವಡಿಸುವ ಕಾಮಗಾರಿ. | 300.00 | | | | |

**ವಿಶೇಷ ಸೂಚನೆ:** ಮುಂದೆ ಯಾವುದೇ ಸೂಚನೆ/ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/–ಕಾರ್ಯಪಾಲಕ ಅಭಿಯಂತರರು, ನೀಸ & ಒಚ (ಪೂರ್ವ) ವಿಭಾಗ
ಮೈಸೂರು ಮಹಾನಗರ ಪಾಲಿಕೆ, ಮೈಸೂರು